ಸಂಚಿಕೆ ೩



ನಂಜನಗೂಡು ತಿರುಮಲಾಂಬಾ

ಖಾಸಗೀ ಪ್ರಸಾರಕ್ಕಾಗಿ

ಮಾನವಿ

ಸಂಪುಟ : 1 ಸಂಚಿಕೆ : 2

ಮೇ—ಜೂನ್ 1986

ವಿಳಾಸ : "ಮಾನವಿ"

ನಂ. 655/2– ಎಲ್, ಮಹಡಿ
ಮಾರುತಿ ಕಲ್ಯಾಣ ಮಂಟಪ
ಬಾಣಸವಾಡಿ ಮುಖ್ಯ ರಸ್ತೆ,
ಮಾರುತಿ ಸೇವಾನಗರ ಅಂಚೆ
ಬೆಂಗಳೂರು–560 033

ಸೂಚನೆ : ವಾರ್ಷಿಕ ಚಂದಾ : **15**/ ರೂ.

ಅಜೀವ ಚಂದಾ : **250**/ ರೂ.


ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಏಳು ಸಂಚಿಕೆಗಳು
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ.........

ಮುಖ ಪುಟ : **ಕಲ್ಲಪ್ಪ ಮಕಾಳಿ**

ಒಳಪುಟದ ಚಿತ್ರ : **ವಿ. ನಾಗರಾಜು**

ಸಂಪಾದಕೀಯ



ಕಳೆದ ಕೆಲವು ದಶಕಗಳಿಂದ ಕುಟುಂಬದ ಆರ್ಥಿಕತೆಗೆ ನೆರವಾಗುವ ಹಿನ್ನೆಲೆಯಲ್ಲೇ ಮಹಿಳೆ ಆರ್ಥಿಕ ಸ್ವಾತಂತ್ರ್ಯವನ್ನು ಹೊಂದುತ್ತಿದ್ದಾಳೆ. ಕೆಳವರ್ಗದ ಕುಟುಂಬಗಳಲ್ಲಿ ಹೆಣ್ಣು–ಗಂಡಿನ ಸಂಪಾದನೆ ಅವಶ್ಯಕವಾದರೆ, ಬೆಳೆಯುತ್ತಿರುವ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಹೆಣ್ಣಿನ ದುಡಿಮೆ ಮಧ್ಯಮ ವರ್ಗಗಳಿಗೆ ಅನಿವಾರ್ಯ ಸಂಗತಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇಂದು ಅನೇಕ ಹಳ್ಳಿ ಮತ್ತು ಪಟ್ಟಣಗಳಲ್ಲಿ ಹೆಂಗಸರು ಪತ್ನಿ ತಾಯಿಯರು ಸಂಪಾದನೆಯಲ್ಲಿ ಹೆಗಲುಕೊಟ್ಟ ದುಡಿಮೆಗಾರರೂ ಆಗಿದ್ದಾರೆ. ಪತ್ನಿಯಾಗಿ ತಾಯಿಯಾಗಿ ಅನ್ನ ಸಂಪಾದಿಸುವವಳಾಗಿ ಬಹುಮುಖ ಹೊರೆಯನ್ನು ಹೋರುತ್ತಿರುವ ಮಹಿಳೆ ದಿನೇ ದಿನೇ ದೈಹಿಕವಾಗಿ ದುರ್ಬಲಳಾಗುತ್ತಿದ್ದಾಳೆ. ಅಲ್ಲದೆ ಸಾಂಸ್ಕೃತಿಕವಾಗಿ ಮೈಗೂಡಿಸಿಕೊಂಡಿರುವ ಕೆಲವು ಸಂಗತಿಗಳು ಪತ್ನಿತ್ವ ಮಾತೃತ್ವವನ್ನು ಪೂರೈಸುವಲ್ಲೇ ಹೆಚ್ಚು ಒತ್ತುಕೊಡುವಂತೆ ಮಾಡಿ ಆಕೆಯನ್ನು ದುರ್ಬಲಗೊಳಿಸುತ್ತಿವೆ. ಬೆಳೆಯುತ್ತಿರುವ ಜನಸಂಖ್ಯೆ, ಹೆಚ್ಚುತ್ತಿರುವ ಜೀವನಮಟ್ಟ ಕಳಚಿಕೊಳ್ಳಲಾಗದ ಸಾಂಸ್ಕೃತಿಕ ಒತ್ತಡಗಳು ಆಕೆಯನ್ನು ನಾನಾ ಸಮಸ್ಯೆಗಳಿಗೆ ಸಿಲುಕಿಸುತ್ತಿವೆ. ಇಂದಿನ ಈ ಸ್ಥಿತಿಯಲ್ಲಿ ಮಹಿಳೆಯ ಆರೋಗ್ಯದ ಮೇಲೆ ಗಮನೀಯ ಪ್ರಭಾವ ಬೀರುವ ಅಂಶಗಳೆಂದರೆ ಬಹುಮುಖ ಹೊರೆ, ಕುಟುಂಬಯೋಜನಾ ವಿಧಾನಗಳು, ಪೌಷ್ಠಿಕಾಂಶದ ಕೊರತೆ, ಆರೋಗ್ಯ ರಕ್ಷಣೆ ಬಗೆಗಿನ ಅಜ್ಞಾನ ಮತ್ತು ಅಲಕ್ಷ್ಯ.

ಕುಟುಂಬದ ಒಳಗೆ ಮತ್ತು ಹೊರಗೆ ವೇತನ ರಹಿತ ಮತ್ತು ವೇತನ ಸಹಿತ ಕೆಲಸಗಳಲ್ಲಿ ತೊಡಗಿಕೊಂಡಿರುವ ಹೆಂಗಸರು ಗಂಡಸಿಗಿಂತ ಹೆಚ್ಚು ಶಕ್ತಿಯನ್ನು ವ್ಯಯಿಸುತ್ತಾರೆ. ಇದರ ಜೊತೆಯಲ್ಲಿ ಮಾತೃತ್ವ ಪತ್ನಿತ್ವದ ಜವಾಬ್ದಾರಿಯನ್ನೂ ಹೊರುತ್ತಾಳೆ. ಕುಟುಂಬದ ಬೆನ್ನೆಲುಬಾದ ಈಕೆ ಅಳಿದುಳಿದುದನ್ನು ತಿನ್ನುತ್ತ ಪೌಷ್ಠಿಕಾಂಶದ ಕೊರತೆಯಿಂದ ಬಳಲುತ್ತಲೇ ಇದ್ದಾಳೆ. 'ದುಡಿಯುವ ಗಂಡು' ಎಂದು ಆತನಿಗೆ ಒಂದು ಮಿಳ್ಳೆ ತುಪ್ಪ ಜಾಸ್ತಿ ದಕ್ಕುತ್ತಲೇ ಇದೆ.

ನಮ್ಮ ವೈದ್ಯಶಾಸ್ತ್ರವಾದರೂ ಹೆಂಗಸಿನ ಹೆರುವ ಶಕ್ತಿಯನ್ನು ಕಾಪಾಡುವತ್ತ ಕೇಂದ್ರೀಕೃತವಾಗಿದೆಯೇ ಹೊರತು ಆಕೆಯ ನಿಜವಾದ ದೈಹಿಕ ಮಾನಸಿಕ ಆರೋಗ್ಯವನ್ನು ರಕ್ಷಿಸುವತ್ತ ಅಲ್ಲ ಋತುಸ್ರಾವ, ಮಕ್ಕಳನ್ನು ಹೆರುವ ಕ್ರಿಯೆಗಳೇ ಮಹಿಳೆಯನ್ನು ಕೀಳಾಗಿ ಕಾಣಲು ಕಾರಣಗಳೆಂಬ ಸಾಂಪ್ರದಾಯಿಕ Myth ಗಳನ್ನೇ ನಮ್ಮ ವೈದ್ಯಶಾಸ್ತ್ರವೂ ಬಹಳ ನಾಜೂಕಾಗಿ ಉಳಿಸಿಕೊಂಡು ಬರಲು ಹೆಣಗುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಇಂತಹ ಎಲ್ಲ

ವ್ಯವಸ್ಥೆಗಳು ಪುರುಷನ ಪರವಾಗಿಯೇ ಇದ್ದು ನಯವಾಗಿ ಮಹಿಳೆಯನ್ನು ವಂಚಿಸುತ್ತಿವೆ. ಉದಾಹರಣೆಗೆ ಕುಟುಂಬ ಯೋಜನಾ ವಿಧಾನಗಳು. 'ದುಡಿಯುವ ಗಂಡಸಿಗೇಕೆ ಇಲ್ಲದ ತೊಂದರೆಗಳು" ಎನ್ನುವ ಅಭಿಪ್ರಾಯವನ್ನೇ ಬಲಪಡಿಸುವಂತೆ ಮಹಿಳೆಯರಿಗೆ ಹೆಚ್ಚು ಹೆಚ್ಚು ಕುಟುಂಬ ಯೋಜನಾ ವಿಧಾನಗಳನ್ನು ಹೊರತರುತ್ತಿರುವುದು.

ಇತ್ತ ಸಂಪ್ರದಾಯವಾದಿಗಳು ಮಹಿಳೆಯ ಮನೆಗೆಲಸವನ್ನು ಕೆಲಸ ಎಂದೇ ಪರಿಗಣಿಸದೆ ಆಕೆಯನ್ನು ಕುಟುಂಬದಲ್ಲಿ ಬಳಕೆದಾರರ ಗುಂಪಿಗೆ ಸೇರಿಸಿ ಪೌಷ್ಠಿಕಾಂಶಗಳಿಂದ ದೂರವಿಡುತ್ತಾರಲ್ಲದೆ ಸ್ವತಃ ಆಕೆಗೇ 'ತಾನೇನು ದುಡಿಯುತ್ತೇನೆಯೋ' ಎನ್ನುವ ಕೀಳರಿಮೆ ಬೆಳೆಯುವಂತಹ ವಾತಾವರಣವನ್ನು ಸೃಷ್ಟಿ ಮಾಡುತ್ತಾರೆ.

ಇಂದು ಕೆಳವರ್ಗದಲ್ಲಿ ಮತ್ತು ಮಧ್ಯಮ ವರ್ಗಗಳಲ್ಲಿ ಪುರುಷರಿಗಿಂತ ಹೆಚ್ಚಾಗಿ ಮಹಿಳೆಯರು ಸಂಪಾದನೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇತ್ತೀಚಿನ ಒಂದು ಸಮೀಕ್ಷೆಯ ಪ್ರಕಾರ ಒಂದು ಹಳ್ಳಿಯಲ್ಲಿನ ಕೆಲಸಗಾರರಲ್ಲಿ ಶೇಕಡ 31ರಷ್ಟು ಪುರುಷರು ಮತ್ತು ಶೇ. 53ರಷ್ಟು ಮಹಿಳೆಯರು ಮತ್ತು ಶೇಕಡ 16ರಷ್ಟು ಮಕ್ಕಳು ಇದ್ದರೆಂದು ತಿಳಿದು ಬಂದಿದೆ.

ಇಲ್ಲಿ ಮಹಿಳೆಯ ದುಡಿಮೆಯನ್ನು ಇಷ್ಟು ಒತ್ತುಕೊಟ್ಟು ಹೇಳುತ್ತಿರುವುದಕ್ಕೆ ಕಾರಣವೆಂದರೆ ಎಂದೂ ಬರೇ ಬಳಕೆದಾರಳಾಗಿ ಉಳಿಯುವ ಮಹಿಳೆ ಅನೇಕ ಸವಲತ್ತುಗಳಿಂದ ವಂಚಿತಳಾಗಿ ದೈಹಿಕ ಹೊರೆಯನ್ನು ಹೆಚ್ಚು ಹೆಚ್ಚು ಹೊರುತ್ತ ಬಳಲುತ್ತಿದ್ದಾಳೆ. ದೇಶದ ಜನತೆಯ ಅರ್ಧದಷ್ಟಿರುವ ಸ್ತ್ರೀಯರ ಆರೋಗ್ಯ ಕಾಯ್ದುಕೊಳ್ಳುವುದು ದೇಶದ ಎಲ್ಲ ವ್ಯವಸ್ಥೆಗಳ ಕರ್ತವ್ಯವಲ್ಲದೇ ನ್ಯಾಯಸಮ್ಮತವಾಗಿದೆ. ಏಕಮುಖ ಲಾಭದ ಮನೋಭಾವನೆಯನ್ನು ತೊರೆದು ಸ್ತ್ರೀ–ಪುರುಷರಿಬ್ಬರನ್ನೂ ದೇಶದ ಸಮಾನ ಪ್ರಜೆಗಳಾಗಿ ಕಾಣಬೇಕಾಗಿದೆ.

ಸಂಪ್ರದಾಯ ವಾದಿಗಳೆಲ್ಲರೂ ಕುಟುಂಬದಲ್ಲಿ ಸ್ತ್ರೀಯ ಪಾತ್ರವನ್ನು ಆಕೆಯ ಹೊರೆಯನ್ನು ಗಮನದಲ್ಲಿಟ್ಟುಕೊಂಡು ಮಾನವೀಯ ಅಭಿಪ್ರಾಯಗಳನ್ನು ತಳೆಯಬೇಕಾಗಿದೆ.

ಸ್ವತಃ ಮಹಿಳೆಯರು ತಾವು ಸದೃಢವಾಗಿ ಸಮಾನವಾಗಿ ನಿಲ್ಲಬೇಕಾದರೆ ತಮ್ಮ ಬೌದ್ಧಿಕ ಬೆಳವಣಿಗೆಯ ಜೊತೆ ದೈಹಿಕ ಆರೋಗ್ಯವೂ ಅತಿ ಮುಖ್ಯ. ಆಗಲೇ ತಾವು ಅನೇಕ ನೈಸರ್ಗಿಕ ಸೂಕ್ಷ್ಮತೆಗಳನ್ನು ಮೀರಲು ಸಾಧ್ಯ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗಿದೆ.

ಸಂಪಾದಕೀಯ ಮಂಡಳಿ

ಕಿಶೋರಾವಸ್ಥೆ ಶಾಪವಲ್ಲ

ಹೆಣ್ಣಿನ ದೇಹದ ನೈಸರ್ಗಿಕ ಕ್ರಿಯೆಗಳ ಬಗೆಗಿನ ಅಸ್ಪೃಶ್ಯ ಮನೋಭಾವನೆಯನ್ನು ಮೌಢ್ಯವನ್ನು ಅಳಿಸಿ ಹಾಕಿ ಆಕೆಗೇ ಆಕೆಯ ದೇಹ ಅಪರಿಚಿತವಾಗುಳಿಯುವಂತಹ ದುರಂತವನ್ನು ತಪ್ಪಿಸಿ ಪ್ರಕೃತಿ ಸಹಜ ಕ್ರಿಯೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ತಿಳಿಯ ಪಡಿಸಬೇಕಾಗಿದೆ.

'ಛೆ, ಯಾಕಾದರು ಹೆಣ್ಣಾಗಿ ಹುಟ್ಟಿದೆನೋ'. ಇದು ಪ್ರಾಯಕ್ಕೆ ಬಂದ ನಮ್ಮ ಬಹುತೇಕ ಹುಡುಗಿಯರು ಒಮ್ಮೆಯಲ್ಲಾ ಒಮ್ಮೆ ವ್ಯಕ್ತಪಡಿಸುವ ಅನಿಸಿಕೆಯಾದರೆ, 'ಪ್ರಾಯಕ್ಕೆ ಬಂದ ನಮ್ಮ ಮಗಳದ್ದೇ ಯೋಚನೆ ನಮಗೆ', ಇದು ಬಹುತೇಕ ಹೆಣ್ಣು ಹೆತ್ತ ತಂದೆ ತಾಯಿಯರ ಅನಿಸಿಕೆ.

ಹೆಣ್ಣಿನ ಪ್ರಾಯ ನಮ್ಮ ಸಮಾಜದಲ್ಲಿ ಹೆಣ್ಣು ಹೆತ್ತವರಿಗೊಂದು ಸೂಕ್ಷ್ಮ ಸಮಸ್ಯೆಯಾದರೆ ಸ್ವತಃ ಆಕೆಗೆ ನಿಗೂಢವಾದ ಅಪರಿಚಿತವಾದ ಅನೇಕ ಅನಾಹುತಗಳನ್ನು ತಂದೊಡ್ಡುವ ತನ್ನ ಸಾಮಾಜಿಕ ಬದುಕನ್ನು, ಸ್ವಾತಂತ್ರ್ಯವನ್ನು ಮೊಟಕು ಮಾಡುವ ಒಂದು ನೋವಿನ ಕ್ರಿಯೆ. ಹಲವಾರು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಟ್ಟುಪಾಡುಗಳಿಂದಾಗಿ ಮತ್ತು ಮೂಢ ನಂಬಿಕೆಗಳಿಂದಾಗಿ ಆಕೆಯ ದೇಹದ ನೈಸರ್ಗಿಕ ಕ್ರಿಯೆಗಳು ನೈಜ ಅರ್ಥ ಕಳೆದುಕೊಂಡು ಪುರುಷ ಪ್ರಧಾನ ಸಮಾಜದ ಸಾಮಾಜಿಕ ಅನುಕೂಲಗಳಿಗಾಗಿ ಸಾಂಸ್ಕೃತಿಕ ಅರ್ಥ ಪಡೆದುಕೊಂಡು ಆ ಹಿನ್ನೆಲೆಯಲ್ಲಿಯೇ ಆಕೆಗೆ ಪರಿಚಯಿಸಲ್ಪಟ್ಟವೆ. ಬದುಕಿನಲ್ಲಿ ಹಲವಾರು ಸೂಕ್ಷ್ಮ ಸಮಸ್ಯೆಗಳನ್ನು ಮತ್ತು ಸಂದರ್ಭಗಳನ್ನು ತಂದೊಡ್ಡುವ ಆಕೆಯ ಪ್ರಾಯ ಆಕೆಗೇ ಅಪರಿಚಿತವಾಗುಳಿದು ಆಕೆಯನ್ನು ಸಹಜ ಸುಖದಿಂದ ವಂಚಿಸಿ ಹೆಣ್ಣಾಗಿ ಹುಟ್ಟುವುದೇ ಒಂದು ಶಾಪ ಎನ್ನುವ ನಮ್ಮ ಸಮಾಜದ ನಂಬಿಕೆಗೆ ಒಗ್ಗಿಕೊಳ್ಳುವಂತಹ ಮೌಢ್ಯದತ್ತ ಆಕೆಯನ್ನು ತಳ್ಳುತ್ತಿದೆ. ಅನೇಕ ಸಂಪ್ರದಾಯಸ್ಥ ಕುಟುಂಬಗಳು ಇಂದಿಗೂ ತಮ್ಮ ಮಗಳು ಪ್ರಾಯಕ್ಕೆ ಬಂದಳು ಎನ್ನುವ ಕಾರಣದಿಂದಲೇ ಆಕೆಯ ಸ್ವಾತಂತ್ರ್ಯವನ್ನು ಕಸಿದುಕೊಂಡು ಅರಳುವ ಪ್ರತಿಭೆಗಳನ್ನು ಹೊಸಕಿ ಹಾಕುತ್ತಾರೆ. ತಮ್ಮ ಮೌಢ್ಯವನ್ನು ಮುಗ್ಧತೆಯನ್ನು ತಮ್ಮ ಮಕ್ಕಳಿಗೂ ರವಾನಿಸಿ ಅವರ ನೈತಿಕತೆಯನ್ನು, ತಮ್ಮ ಸಂಸ್ಕೃತಿಯನ್ನು ಕಾಪಾಡುವ ಹೆಸರಿನಲ್ಲಿ ಅಪಾಯಕಾರಿಯಾದ ಅನಾಹುತಗಳಿಗೆ ಗೊತ್ತಿಲ್ಲದ್ದಂತೆ ಕಾರಣರಾಗುತ್ತಾರೆ.

ಹೆಣ್ಣಿನ ದೇಹದ ನೈಸರ್ಗಿಕ ಕ್ರಿಯೆಗಳ ಬಗೆಗಿನ ಈ ಅಸ್ಪೃಶ್ಯ ಮನೋಭಾವನೆಯನ್ನು ಮೌಢ್ಯವನ್ನು ಅಳಿಸಿ ಹಾಕಿ ಆಕೆಗೆ ಆಕೆಯ ದೇಹ ಅಪರಿಚಿತವಾಗುಳಿಯುವಂತಹ ದುರಂತವನ್ನು ತಪ್ಪಿಸಿ ಪ್ರಕೃತಿ ಸಹಜ ಪ್ರಕ್ರಿಯೆಗಳನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಆಕೆಗೆ ತಿಳಿಯ ಪಡಿಸಬೇಕಾಗಿದೆ. ಇದು ಆಕೆಯ ಆರೋಗ್ಯಕರ


ಕೆ. ಪಿ. ಶೈಲಜಾ

ಬದುಕಿಗೆ, ಉತ್ತಮವಾದ ದಾಂಪತ್ಯ ಜೀವನಕ್ಕೆ ಅಲ್ಲದೆ ಹೆಣ್ಣು ಅಬಲಳು ಎಂಬ ಕೀಳರಿಮೆಯನ್ನು ಹೊತ್ತು ಹಾಕಿ ಹೆಚ್ಚು ಆತ್ಮವಿಶ್ವಾಸದಿಂದ ಸಾಮಾಜಿಕ ಬದುಕಿನಲ್ಲಿ ತೊಡಗಲು ಅತ್ಯಂತ ಅವಶ್ಯಕ. ಈ ಕಾಳಜಿಯ ಹಿನ್ನೆಲೆಯಲ್ಲಿ ಈ ಲೇಖನ ಪ್ರಾಯಕ್ಕೆ ಬರುವ ಸ್ತ್ರೀಯ ದೈಹಿಕ, ಮಾನಸಿಕ ಕ್ರಿಯೆಗಳನ್ನು ಪರಿಚಯಿಸುವ ಸಣ್ಣ ಪ್ರಯತ್ನ ಮಾಡಿದೆಯಷ್ಟೆ.

ಪುರುಷ ಪ್ರಧಾನ ಸಮಾಜ ತನ್ನ ದೇಹ ಮನಸ್ಸಿನೊಂದಿಗೆ ಸಂತೋಷವಾಗಿರುವ ಶಕ್ತಿವಂತ ಮಹಿಳೆಯರ ಬಗ್ಗೆ ಭಯವುಳ್ಳದ್ದಾಗಿರುವುದರಿಂದ ಅವರ ಅಸ್ತಿತ್ವವನ್ನು ಅವರ ದೈಹಿಕ ಸ್ಥಿತಿಯಿಂದಾಗಿ ಸಾಕಷ್ಟು ಶಾಪಗ್ರಸ್ತವಾಗಿಸಿ ಸ್ವತಃ ಅವರಲ್ಲಿಯೂ ಆ ಪ್ರಜ್ಞೆಯನ್ನು ಬೆಳೆಸಲು ಸದಾ ಹೆಣಗುತ್ತದೆ. ಇಂದು ಸಮಾನತೆಗಾಗಿ

ಹೋರಾಡುತ್ತಿರುವ, ಹೋರಾಟದ ಮಾರ್ಗವನ್ನು ಪ್ರವೇಶಿಸುತ್ತಿರುವ ಸ್ತ್ರೀ ವರ್ಗ ಮೊಟ್ಟ ಮೊದಲು ತಮ್ಮೊಳಗೆ ಹುದುಗಿಸಿಕೊಂಡಿರುವ ಅನೇಕ ಮೌಢ್ಯಗಳನ್ನುಸಂಕೋಚಗಳನ್ನು ಕಿತ್ತೊಗೆಯಬೇಕಾಗಿದೆ. ತನ್ನಲ್ಲಿ ಬೇರುಬಿಟ್ಟಿರುವ ಸಂಸ್ಕೃತಿಯ ಒತ್ತಡಗಳನ್ನು ಪ್ರಶ್ನಿಸಿ ಕೊಳ್ಳಬೇಕಾಗಿದೆ. ತನ್ನ ಬಗ್ಗೆ ಆಕೆ ಹೆಚ್ಚು ಆತ್ಮ ವಿಶ್ವಾಸಉಳ್ಳವಳಾಗಿ 'ಅಬಲೆ' ಹಣೆಪಟ್ಟಿಯನ್ನು ಕಿತ್ತೆಸೆಯಬೇಕಾಗಿದೆ.

ಅನೇಕ ತಾಯಂದಿರು ಅವರ ಹೆಣ್ಣುಮಕ್ಕಳಿಗೆ ಅವರ 'ಪ್ರಾಯ'ದ ನೈಜ ಸ್ವರೂಪವನ್ನು ತಿಳಿಸದೆ ಅದನ್ನು ಗೌಪ್ಯವಾಗಿರಿಸುತ್ತಾರೆ. ಅವರ ದೇಹದ



ಸ್ತ್ರೀ ಜನನೇಂದ್ರಿಯವ್ಯೂಹ
(ಅಂಡೋತ್ಪತ್ತಿ ಮತ್ತು ಋತುಸ್ರಾವ)

ಪ್ರಕ್ರಿಯೆಗಳ ಬಗ್ಗೆ ಅವರಿಗೇ ಅಶ್ಲೀಲ ಭಾವನೆಯನ್ನು ಬೆಳೆಸಿ ಆ ಬಗ್ಗೆ ಓದುವುದು ಅಥವಾ ಮಾತಾಡುವುದು ಕೂಡ ತಪ್ಪೆಂಬ ಕಲ್ಪನೆಯನ್ನು ಮೂಡಿಸುತ್ತಾರೆ. ಇದರಿಂದಾಗಿ ಅನೇಕ ಹುಡುಗಿಯರಲ್ಲಿ ತಮ್ಮ ಬಗ್ಗೆ ಭಯ ಅಸಹಾಯಕತೆ, ಕೀಳರಿಮೆ, ನಾಚಿಕೆ ಮುಂತಾದ ಅನೇಕ ಅನಾರೋಗ್ಯಕರ ಭಾವನೆಗಳು ಬೆಳೆದು ಅವರ ವ್ಯಕ್ತಿತ್ವದ ಬೆಳವಣಿಗೆಯನ್ನು ಕುಂಟಿತಗೊಳಿಸುತ್ತವೆ. ಅನೇಕ ಅನಾಹುತಗಳಿಗೆ ಎಡೆಮಾಡಿಕೊಡುತ್ತವೆ.

ಹುಡುಗಿಯರು ಸಾಮಾನ್ಯವಾಗಿ 11-14 ವರ್ಷ ವಯಸ್ಸಿನೊಳಗೆ ಪ್ರಾಯಕ್ಕೆ ಬರುತ್ತಾರೆ. ಆಕೆಯ ದೇಹದಲ್ಲಿ ಅನೇಕ ಅಂತರಿಕ ಮತ್ತು ಬಾಹ್ಯ ಬದಲಾವಣೆಗಳಾಗುತ್ತವೆ. ಮಿದುಳಿನಲ್ಲಿರುವ ಪಿಟ್ಯುಟರಿ ಗ್ರಂಥಿಯು ಸ್ರವಿಸುವ ಗೊನೆಡೊಟ್ರೊಫಿಕ್ ಹಾರ್ಮೋನುಗಳು ಅಂಡಾಶಯದಲ್ಲಿ ಅಂಡಾಶಯವನ್ನು ಪ್ರಚೋದಿಸಿ ಅಂಡಾಶಯದಲ್ಲಿ ಅಂಡಾಣುಗಳು ಅಥವಾ ತತ್ತಿಗಳು ಉತ್ಪತ್ತಿಯಾಗುವಂತೆ ಮಾಡುತ್ತವೆ. ಅಂಡಾಶಯ ಸ್ರವಿಸುವ ಈಸ್ಟ್ರೊಜೆನ್ ಹಾರ್ಮೋನುಗಳು ಪಿಟ್ಯುಟರಿ ಗ್ರಂಥಿಯನ್ನು ತಲುಪಿ ಮತ್ತೊಂದು ರೀತಿಯ ಹಾರ್ಮೋನು ಸ್ರವಿಕೆಗೆ ಕಾರಣವಾಗುತ್ತದೆ. ಈ ಹಾರ್ಮೋನುಗಳು ಅಂಡಾಶಯವನ್ನು ತಲುಪಿ ತತ್ತಿಗಳು ಬಿಡುಗಡೆಯಾಗುವಂತೆ ಮಾಡುತ್ತವೆ. ಬಿಡುಗಡೆಯಾದ ತತ್ತಿಯು 6½ ದಿನಗಳ ಕಾಲ ಫೆಲೋಪಿಯನ್ ನಾಳಗಳ ಮೂಲಕ ಗರ್ಭಕೋಶದ ಕಡೆ ಚಲಿಸುತ್ತದೆ.

ಈ ಪಿಟ್ಯುಟರಿ ಗ್ರಂಥಿಯು ಸಾಮಾಜಿಕ ಮತ್ತು ಭಾವನಾತ್ಮಕ ಸಂಗತಿಗಳಿಂದ ಪ್ರಭಾವಕ್ಕೊಳಪಡುತ್ತದೆ ಯಾದ್ದರಿಂದ ನಮ್ಮ ಮಾನಸಿಕ ಕ್ರಿಯೆಗಳ ಒತ್ತಡ ನಮ್ಮ ದೈಹಿಕ ಕ್ರಿಯೆಗಳ ಮೇಲೆ, ಅಂದರೆ ಋತುಚಕ್ರದ ಮೇಲೆಯೂ ಪ್ರಭಾವ ಬೀರುತ್ತದೆ. ಪ್ರಮುಖ ನಿರ್ನಾಳ ಗ್ರಂಥಿಯಾದ ಪಿಟ್ಯುಟರಿ ಗ್ರಂಥಿಯ ಸ್ರವಿಕೆ ಇತರೆ ಗ್ರಂಥಿಗಳನ್ನು ಪ್ರಭಾವಿಸುವುದರಿಂದ ಅನೇಕ ಅಂತರಿಕ ಬದಲಾವಣೆಗಳಿಗೂ ದೇಹ ಒಳಗಾಗುತ್ತದೆ. ಅಲ್ಲದೆ ಇವುಗಳಿಗನುಗುಣವಾಗಿ ಮನಸ್ಸಿನಲ್ಲಿ ಯೌವನ ಸಹಜ ಅಭಿಲಾಷೆ ಆಸಕ್ತಿಗಳು ಹುಟ್ಟಿಕೊಳ್ಳುತ್ತವೆ.

ದೇಹದೊಳಗಡಗಿರುವ ಈ ಪುಟ್ಟ ಪುಟ್ಟ ಗ್ರಂಥಿಗಳ ಸ್ರವಿಕೆ ಸ್ತ್ರೀ ಮತ್ತು ಪುರುಷ ಇಬ್ಬರಲ್ಲಿಯು ಅವರ ಬದುಕಿನಲ್ಲಿ ಮಹತ್ವದ ತಿರುವನ್ನು ತಂದುಕೊಡುತ್ತವೆ. ಪುರುಷನ ದೇಹ ಆತನ ಲೈಂಗಿಕ ಬದುಕಿಗಾಗಿ ಪಕ್ವವಾದರೆ ಸ್ತ್ರೀಯ ದೇಹ ಲೈಂಗಿಕ ಬದುಕಿನ ಜೊತೆ ತಾಯಿಯಾಗಲು ಬೇಕಾದ ಬದಲಾವಣೆಗಳಿಗೂ ಒಳಗಾಗುತ್ತದೆ.

ಪಿಟ್ಯುಟರಿ ಗ್ರಂಥಿಯ ಸ್ರವಿಕೆಯಿಂದ ಕ್ರಿಯಾಶೀಲಗೊಂಡ ಅಂಡಾಶಯಗಳಿಂದಾಗಿ 'ಋತುಚಕ್ರ' ಪ್ರಾರಂಭವಾಗುತ್ತದೆ. ಒಂದು ಋತುಚಕ್ರ ಪೂರ್ಣಗೊಳ್ಳಲು ಸಾಮಾನ್ಯವಾಗಿ 28 ದಿನಗಳು ಬೇಕು. ಈ ಅವಧಿಯಲ್ಲಿ ಸ್ತ್ರೀಯ ದೇಹದಲ್ಲಿ ಗರ್ಭ ಕಟ್ಟಲು ಅವಶ್ಯಕವಾದ ಸಿದ್ಧತೆಗಳು ನಡೆಯುತ್ತವೆ.

ಋತುಚಕ್ರದಲ್ಲಿ ನಾಲ್ಕು ಹಂತಗಳು

1) 1 ರಿಂದ 7 ದಿನಗಳವರೆಗೆ — ರಕ್ತಸ್ರಾವ ಮತ್ತು ಗರ್ಭಾಶಯಂದ ಪುನರ್ ನಿರ್ಮಾಣ

2) 7 ರಿಂದ 14 ದಿನಗಳವರೆಗೆ— ಗರ್ಭಕೋಶದ ಗೋಡೆಯ ಬೆಳವಣಿಗೆ

3) 14ನೇ ದಿನ — ಅಂಡಾಣುಗಳ ಉತ್ಪಾದನೆ.

4) 14 ರಿಂದ 28ನೇ ದಿನಗಳವರೆಗೆ — ಗರ್ಭಕೋಶದ ಗೋಡೆಯಲ್ಲಿ ರಕ್ತ ಸಂಚಯ ಮತ್ತು ಗರ್ಭ ಕಟ್ಟುವಿಕೆಗಾಗಿ ತಯಾರಿಕೆಗಳು.

ಒಂದು ಮತ್ತು ಎರಡನೆ ಹಂತಗಳಲ್ಲಿ ಪಿಟ್ಯುಟರಿ ಗ್ರಂಥಿಯ ಮುಂಭಾಗ ಅಂಡಾಶಯವನ್ನು ಪ್ರಚೋದಿಸುವಂತಹ (ಗೊನೆಡೊಟ್ರೊಫಿಕ್) ಹಾರ್ಮೋನುಗಳನ್ನು ಉತ್ಪಾದಿಸುತ್ತದೆ. ಈ ಹಾರ್ಮೋನುಗಳ ವರ್ತನೆಯಿಂದಾಗಿ ಅಂಡಾಶಯ ಈಸ್ಟ್ರೊಜೆನ್ ಹಾರ್ಮೋನುಗಳನ್ನು ಬಿಡುಗಡೆ ಮಾಡುತ್ತದೆ. ಈಸ್ಟ್ರೋಜೆನ್ ಹಾರ್ಮೋನುಗಳು ರಕ್ತ ಪ್ರವಾಹದಲ್ಲಿ ಹರಿಯುವುದರ ಪರಿಣಾಮವಾಗಿ ಗರ್ಭಕೋಶದ ಹಳೆಯ ಗೋಡೆಯು ಕಳಚಿ ಹೋಗಿ ಜನನಾಂಗದ ಮೂಲಕ 'ಋತುಸ್ರಾವ'ವಾಗಿ ಹೊರ ಹೋಗುತ್ತವೆ. ಮತ್ತೆ ಹೊಸ ಗೋಡೆಯು ಮೊದಲ 7 ದಿನಗಳಲ್ಲಿ ನಿರ್ಮಾಣವಾಗುತ್ತದೆ. ಏಳು ದಿನಗಳ ನಂತರ ಈ ಹೊಸ ಗೋಡೆಯು ಬೆಳವಣಿಗೆ ಹೊಂದಲು ಪ್ರಾರಂಭಿಸುತ್ತದೆ. ಇದೇ ಸಮಯದಲ್ಲಿ ಒಂದು ಅಂಡಾಣು (ತತ್ತಿ) ತನ್ನ ಚೀಲದಲ್ಲಿ ಮಾಗಲು ಪ್ರಾರಂಭವಾಗುತ್ತದೆ ಮತ್ತು ಅಂಡಾಶಯದ ಮೇಲ್ಮೈ ಕಡೆಗೆ ಬೆಳೆಯುತ್ತದೆ. 'ಗ್ರಿಫಿಯನ್ ಫಾಲಿಕಲ್' ಎಂದು ಕರೆಸಿಕೊಳ್ಳುವ ಈ ಚೀಲವು ದ್ರವದಿಂದ ತುಂಬಿರುತ್ತದೆ.

ಮೂರನೇ ಹಂತದಲ್ಲಿ ಋತುಚಕ್ರದ ಹದಿನಾಲ್ಕನೇ ದಿನ ಗ್ರಾಫಿಯನ್ ಚೀಲವು ಒಡೆದು ಅಂಡಾಣುವು ಅಂಡಾಶಯದ ಹೊರಮೈಗೆ ಬರುತ್ತದೆ. ಇದನ್ನು ಪಿಟ್ಯುಟರಿ ಸ್ರವಿಸುವ 'ಲ್ಯುಟೋಟ್ರೋಫಿಕ್' ಹಾರ್ಮೋನು ನಿಯಂತ್ರಿಸುತ್ತದೆ.

ನಾಲ್ಕನೇ ಹಂತದಲ್ಲಿ ಪಿಟ್ಯುಟರಿ ಗ್ರಂಥಿ ಸ್ರವಿಸುವ 'ಲ್ಯುಟಿನೈಜಿಂಗ್' ಹಾರ್ಮೋನು ಗ್ರಾಫಿಯನ್ ಫಾಲಿಕಲ್ ಚೀಲದಲ್ಲಿ ರಕ್ತವು ತುಂಬಿಕೊಂಡು ಅದರ ಮೇಲೆ ಒಂದು ಪೊರೆ ಬೆಳೆಯಲು ಕಾರಣವಾಗುತ್ತದೆ. ಈ ದ್ರವ ತುಂಬಿದ ಚೀಲವನ್ನು 'ಕಾರ್ಪಸ್ ಲ್ಯುಟವ್' ಎಂದು ಕರೆಯಲಾಗುತ್ತದೆ.

ಕಾರ್ಪಸ್ ಲ್ಯುಟವ್ ಸ್ರವಿಸುವ ಪ್ರೊಜೆಸ್ಟ್ರಾನ್ ಹಾರ್ಮೋನುಗಳು ಗರ್ಭಕೋಶದ ಗೋಡೆಯಲ್ಲಿ ಮುಂದಿನ ಬದಲಾವಣೆಗಳನ್ನುಂಟು ಮಾಡುತ್ತದೆ. ಗರ್ಭಕೋಶದ ಗೋಡೆಯು ಮೃದುವಾಗುತ್ತವೆ ಮತ್ತು ದಪ್ಪವಾಗುತ್ತದೆ. ಗರ್ಭ ಕಟ್ಟಿದ ತತ್ತಿಯನ್ನು ಸ್ವೀಕರಿಸಲು ತಯಾರಾಗುತ್ತದೆ.

ಋತುಚಕ್ರದ ಮಧ್ಯಂತರ ದಿನಗಳಲ್ಲಿ ಅಂದರೆ ಮೊದಲ ಏಳು ಮತ್ತು ಕೊನೆಯ ಏಳು ದಿನಗಳನ್ನುಳಿದು ಮಧ್ಯದ 14 ದಿನಗಳಲ್ಲಿ ಸ್ತ್ರೀಯು ಪುರುಷನ ಸಂಪರ್ಕ ಹೊಂದಿದರೆ ಆತನಲ್ಲಿ ಉತ್ಪತ್ತಿಯಾಗುವ ವೀರ್ಯಾಣುಗಳು ಜನನದ್ವಾರದ ಮೂಲಕ ಗರ್ಭಕೋಶವನ್ನು ಪ್ರವೇಶಿಸಿ ಅವು ತತ್ತಿಯೊಂದಿಗೆ ಸಂಯೋಗ ಹೊಂದಿ ಗರ್ಭ ಕಟ್ಟುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಒಂದು ತತ್ತಿಯು 2 ವಾರಗಳ ಕಾಲ ಮಾತ್ರ ಫಲಿತಗೊಳ್ಳಲು ಕಾಯುತ್ತದೆ. ಆ ವೇಳೆಯಲ್ಲಿ ಗರ್ಭ ಕಟ್ಟದಿದ್ದರೆ ತತ್ತಿಯು ಪೆರಿಟೋನಿಯಲ್ ಕ್ಯಾವಿಟಿಯಲ್ಲಿ ಕರಗಿ ಹೋಗುತ್ತದೆ. ಅಥವಾ ಮುಂದಿನ ಋತುಸ್ರಾವದಲ್ಲಿ ಹೊರ ಹಾಕಲ್ಪಡುತ್ತದೆ. ಅಲ್ಲದೆ ಕಾರ್ಪಸ್‌ಲ್ಯುಟವ್ ಸತ್ತುಹೋಗಿ ಪ್ರೊಜೆಸ್ಟ್ರಾನ್ ಹಾರ್ಮೋನಿನ ಸ್ರವಿಕೆ ನಿಲ್ಲುತ್ತದೆ. ಪುನಃ ಅಂಡಾಶಯವನ್ನು ಪ್ರಚೋದಿಸುವ ಹಾರ್ಮೋನುಗಳ ಕೆಲಸ ಪ್ರಾರಂಭವಾಗುತ್ತದೆ ಹಾಗೂ ಈ ಪ್ರಕ್ರಿಯ ಆಕೆಯ 40–45 ವರ್ಷದವರೆಗೆ ಪುನರಾವರ್ತನೆಯಾಗುತ್ತದೆ. ಈ ಅವಧಿಯಲ್ಲಿ ಸಾಮಾನ್ಯವಾಗಿ ಎಲ್ಲ ಮಹಿಳೆಯರಲ್ಲೂ ಕಂಡು ಬರುವ ಅಂಶವೆಂದರೆ ದೈಹಿಕ ನೋವು. ಈ ನೋವು ಎರಡು ಬಗೆಯಲ್ಲಿರುವುದು ಕಂಡು ಬರುತ್ತದೆ. 1) ಋತುಸ್ರಾವ ಪ್ರಾರಂಭವಾಗುವುದಕ್ಕೆ ಮುಂಚೆ ಬರುವ ಬೆನ್ನು ಅಥವಾ ಸೊಂಟ ನೋವು. ಈ ನೋವು ಋತುಸ್ರಾವ ಪ್ರಾರಂಭವಾದ ತಕ್ಷಣವೇ ನಿಂತು ಹೋಗುತ್ತದೆ. 2) ಋತುಸ್ರಾವ ಪ್ರಾರಂಭವಾದ ಮೊದಲ ದಿನ

ಪ್ರಾರಂಭವಾದ ಸೊಂಟ ಅಥವಾ ಕೆಳಹೊಟ್ಟೆಯ ನೋವು ಇದು ಒಂದು ಅಥವಾ ಎರಡು ದಿನಗಳ ನಂತರ ಕಡಿಮೆಯಾಗುತ್ತದೆ. ಇಂತಹ ದೈಹಿಕ ನೋವುಗಳಲ್ಲದೆ ನಿರುತ್ಸಾಹ, ಸಿಡುಕುತನ, ಕೀಳರಿಮೆ ಅಸಹಾಯಕತನ, ಅನವಶ್ಯಕ ಉದ್ವೇಗ ಮುಂತಾದ ಭಾವನೆಗಳಿಗೆ ಅವರು ಹೆಚ್ಚು ಒಳಗಾಗುವ ಸಾಧ್ಯತೆಯಿದೆ.

ಋತುಚಕ್ರದ ಬಗ್ಗೆ ಗಮನದಲ್ಲಿರಿಸಿಕೊಳ್ಳಬೇಕಾದ ಕೆಲವು ಸತ್ಯಗಳು:–

1) ಋತುಚಕ್ರ ಸಾಮಾನ್ಯವಾಗಿ 9 ರಿಂದ 18 ವರುಷದ ಮಧ್ಯದಲ್ಲಿ ಪ್ರಾರಂಭವಾಗುತ್ತದೆ.

2) ಅತ್ಯಂತ ನಿಕರವಾದ ಮತ್ತು ಕ್ರಮವಾದ ಋತುಚಕ್ರ ಹೊಂದಿರುವ ಮಹಿಳೆಯ ದಾಖಲೆ ಇಲ್ಲ. ಒಂದು ಋತುಚಕ್ರದ ಅವಧಿ 20 ರಿಂದ 40 ದಿನಗಳ ವರೆಗೆ ಲಂಬಿಸಬಹುದು.

3) ಋತುಸ್ರಾವದ ಅವಧಿ ಸಾಮಾನ್ಯವಾಗಿ 2 ರಿಂದ 8 ದಿನಗಳವರೆಗೆ.

4) ಎಲ್ಲ ಮಹಿಳೆಯರಲ್ಲೂ ಸಾಮಾನ್ಯವಾಗಿ ತಿಳಿಯಾದ ಬಿಳಿಯ (ಅಥವಾ ಒಣಗಿದಾಗ ಹಳದಿ ಯಾದ) ದ್ರವ ಯೋನಿಯಿಂದ ಹೊರ ಹೋಗುತ್ತದೆ.

ಬಹುತೇಕ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಮತ್ತು ಹಳ್ಳಿಗಳಲ್ಲಿ ಋತುಸ್ರಾವದ ಕಾಲದಲ್ಲಿ ಈಗಲೂ ಹೆಣ್ಣು ಅಸ್ಪೃಶ್ಯಳು. ಈ ಸಮಯದಲ್ಲಿ ಆಕೆ ಬೆಳೆಯು ತ್ತಿರುವ ಸಸಿಗಳನ್ನು, ಚಿಕ್ಕ ಮಕ್ಕಳನ್ನು ಮುಟ್ಟಕೂಡದು ಮುಟ್ಟಿದರೆ ಅವು ಸೊರಗುತ್ತವೆಯಂತ ಆಕೆಯನ್ನು ಅವಮಾನಗೊಳಿಸಲಾಗುತ್ತದೆ ಋತುಸ್ರಾವದ ಮೂರು ದಿನ ಸ್ನಾನ. ಸ್ವಚ್ಛವಾದ ಬಟ್ಟೆಗಳಿಲ್ಲದೆ ಆಕೆಯನ್ನು ದೂರವಾಗಿರಿಸುವ ಇವರು ಮತ್ತಷ್ಟು ಅನಾರೋಗ್ಯಕರ ವಾತಾವರಣ ಸೃಷ್ಟಿಸುತ್ತಾರೆ. ಇಂತಹ ಅವಮಾನಗಳ ನೋವುಗಳು ಹೆಣ್ಣಾಗಿ ಹುಟ್ಟಿರುವುದಕ್ಕೆ ಅಥವಾ ಅದಕ್ಕೆ ಕಾರಣವಾದ ಪೂರ್ವಜನ್ಮದ ಪಾಪಗಳೇ ಕಾರಣ ಎಂದು ನಂಬುವ ನಮ್ಮ ಜನ ಆ ಅವಧಿಯಲ್ಲಿನ ಆಕೆಯ ದೈಹಿಕ ಮಾನಸಿಕ ಸಮಸ್ಯೆಗಳ ಬಗ್ಗೆ ಯೋಚಿಸುವುದಾಗಲೀ ಸಂಶೋಧಿಸುವುದಾಗಲೀ ಅವಶ್ಯಕತೆ ಇಲ್ಲ ಎನ್ನುವ ಅಮಾನವೀಯ ನಿಲುವಿಗೆ ಜೋತು ಬಿದ್ದಿದ್ದಾರೆ.

ಪುರುಷ ಪ್ರಧಾನ ಸಮಾಜ ತನ್ನ ಪ್ರಾಬಲ್ಯ ಸಾಧಿಸಲು ಅನುಕೂಲವಾಗುವಂತೆ ಕೆಲವು ಸಂಗತಿಗಳನ್ನು ವಾಸ್ತವದಿಂದ ಬೇರೆಯಾಗಿಸಿ ಅವುಗಳೇ ಸರ್ವಕಾಲಿಕ ಸತ್ಯಗಳೆಂಬಂತೆ ನೀರೆರೆದು ಬೆಳೆಸಿದ್ದಾರೆ. ಇಂದು ವೈಜ್ಞಾನಿಕ ತಿಳುವಳಿಕೆಯೊಂದಿಗೆ ಹೆಚ್ಚು ಆತ್ಮಬಲವುಳ್ಳ ವಳಾದ ಸ್ತ್ರೀ ಈ ಸತ್ಯಗಳ ಬೇರುಗಳನ್ನು ಅಲ್ಲಾಡಿಸಲು ಪ್ರಾರಂಭಿಸಿದ್ದಾಳೆ. ತನ್ನ ದೈಹಿಕ ಸತ್ಯಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡ ಆಕೆ ತನ್ನ ದೇಹವನ್ನು ಪ್ರೀತಿಸತೊಡಗಿದ್ದಾಳೆ. ಈ ಕಾಳಜಿ ಆಕೆಯನ್ನು ಹೆಚ್ಚು ಕ್ರಿಯಾಶೀಲವಾಗಿಸುವುದರ ಮೂಲಕ ಆಕೆಯ ಸರ್ವತೋಮುಖ ಬೆಳವಣಿಗೆ ಮತ್ತು ಸಮಾನ ಬದುಕಿನ ಕನಸಿನಲ್ಲಿ ನನಸಾಗಿಸಲು ಪೂರಕವಾಗಬೇಕಾಗಿದೆ. ಪೂರಕವಾಗಲಿದೆ ಎನ್ನಬಹುದೇನೋ.

> ಋತುಸ್ರಾವ ಉಂಟುಮಾಡುವ ನೋವು, ನಿರುತ್ಸಾಹ, ಅಸಹಾಯಕತೆ ನಮ್ಮ ಕೆಲಸದಲ್ಲಿ ನಮಗಿರುವ ಆತ್ಮವಿಶ್ವಾಸವನ್ನು ಕುಂದಿಸಬಲ್ಲವೆ? ಹಾಗಾದರೆ ಈ ಕೆಳಗಿನ ಅಂಶಗಳನ್ನು ಗಮನಿಸಿ.
>
> 1. ಒಲಂಪಿಕ್ ಆಟಗಳಲ್ಲಿ ಋತುಸ್ರಾವದ ಅವಧಿಯಲ್ಲಿದ್ದ ಮಹಿಳೆಯರು ತಮ್ಮ ಆಟಗಳಲ್ಲಿ ವಿಶ್ವದಾಖಲೆ ಸ್ಥಾಪಿಸಿ ಸ್ವರ್ಣಪದಕಗಳನ್ನು ಗಳಿಸಿದ್ದಾರೆ.
>
> 2. ತೀವ್ರವಾದ ಹೃದಯದ ಕಾಯಿಲೆಗಳನ್ನು ಹೊಂದಿರುವ ಪುರುಷರು ಅತ್ಯಂತ ಜವಾಬ್ದಾರಿಯುತ ಕೆಲಸಗಳಲ್ಲಿ ಮುಂದುವರಿಯುತ್ತಿರುವಾಗ ಕೇವಲ ಋತುಚಕ್ರದ ಕಾರಣದಿಂದ ಜವಾಬ್ದಾರಿಯಿಂದ ಜಾರಿಕೊಳ್ಳುವುದು ಸರಿಯೆ ?


ನಾಗಾಲೋಟದಲ್ಲಿ ಓಡುತ್ತಿರುವ ವೈಜ್ಞಾನಿಕ ಸಂಶೋಧನೆಗಳು ಪೌಷ್ಠಿಕಾಂಶಗಳ ಕೊರತೆ, ಅತಿಯಾದ ಶ್ರಮದಿಂದಾಗಿ ರಕ್ತಹೀನಳಾಗುತ್ತಿರುವ ಮಹಿಳೆಯತ್ತಲೂ ಗಮನ ಹರಿಸಿ ಆಕೆಯ ಬೌದ್ಧಿಕ ಮತ್ತು ದೈಹಿಕ ಶಕ್ತಿಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕಾಗಿದೆ. ಆರೋಗ್ಯಕರವಾದ ಸ್ತ್ರೀ ಪುರುಷರನ್ನು ಹೊಂದಿದ ಸಮಾಜವೇ ಆರೋಗ್ಯಕರವಾದ ಅವ-ಅವಿಕೆಯ ಬದುಕನ್ನು ಸೃಷ್ಟಿಸಬಲ್ಲದು. ಈ ಹಿನ್ನೆಲೆಯಲ್ಲಿ ಮೂಢ ನಂಬಿಕೆಗಳ ಜಾಲದಲ್ಲಿ ಬಂಧಿಸಲ್ಪಟ್ಟಿರುವ ಸ್ತ್ರೀಯನ್ನು ವಿಮುಕ್ತಗೊಳಿಸುವುದು ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ಪ್ರತಿಯೊಬ್ಬರ ತೀವ್ರ ಕಾಳಜಿಯಾಗಬೇಕಾಗಿದೆ ; ಹೊರ ಬರುವ ಬಲವಾದ ಪ್ರಯತ್ನ ಸ್ತ್ರೀಯರದಾಗಬೇಕಾಗಿದೆ. ●

ಗರಿಕೆ

● ಭಾಗೀರಥಿ ಹೆಗಡೆ

ತಳಗೂಡಿ ಕಿತ್ತು
ಒಗೆಯುವಿರ ನನ್ನ ?
ಕಳೆಯೆಂದು ಕಸವೆಂದು ತೆಗಳುವಿರ ನನ್ನ ?
ಮಣ್ಣಿನೊಂದಿಗೆ ಕೊಚ್ಚಿ ಮುಚ್ಚುವಿರ ನನ್ನ ?

ಇಗೊ—
ಇನ್ನೊಂದು ಚಿಗುರುತ್ತೇನೆ.
ಸುಡು ಬಿಸಿಲು ಜಡಿಮಳೆ
ಬಡಿವ ಬಿರುಗಾಳಿಗಳ
ಉತ್ತರಿಸುತ್ತೇನೆ ಅಕ್ಷಯ ವೈರಸ್ಸುಗಳ
ನುಂಗುತ್ತೇನೆ ಇಬ್ಬನಿಯ ಪರಮಾಣುವಿಗೂ
ವರ್ತಿಸಿ ತಲೆಯೆತ್ತುತ್ತೇನೆ
ಮತ್ತೊಂದು ತುಳಿತಕ್ಕೆ.




ನೆಲದವ್ವನ ಕರುಣೆಯೊಡಲಿನ ಮೂಲ
ಕಣಕ್ಕೂ ಕಚ್ಚಿಕೊಳ್ಳುತ್ತೇನೆ ಹರಿದ್ರೇಣುಗಳ
ಬಿಚ್ಚುತ್ತೇನೆ ಅನಂತ ಅವಕಾಶಕ್ಕೆ—
—ಗುರಿಯಲ್ಲ ನಾನು ಗೊತ್ತು.

ರಸವಲ್ಲ ರುಚಿಯಿಲ್ಲ ಬಣ್ಣ...?
ಬಣ್ಣದ ಬೆರಗು ಬೆಡಗಿಲ್ಲ ಆದರೂ
ಇಡಿಯಾಗುತ್ತೇನೆ ನನ್ನೊಳಗೊಳಗೆ
ಪುಟಿವ ಜೀವದ್ರವ್ಯಕ್ಕೆ.

ಚರಿತ್ರಾ

ಸಂವೇದನಾಶೀಲ ಲೇಖಕಿ

ನಂಜನಗೂಡು ತಿರುಮಲಾಂಬಾ



ಮನುಕುಲದ ನಾಗರಿಕತೆಯ ಇತಿಹಾಸದಲ್ಲಿ ಗಂಡು–ಹೆಣ್ಣಿನ ಮಧ್ಯದ ಅಸಮಾನತೆಯ ಸಂಸ್ಕೃತಿ, ಹೆಣ್ಣಿನ ಬದುಕನ್ನು ದಮನ ಮಾಡಿದೆ. ಮಾಸ್ತಿಕಲ್ಲುಗಳು, ಬಾಲವಿಧವೆಯರು, ಸತಿ ಪದ್ಧತಿ ಪರದೆಗಳ ಮುಸುಕಿನೊಳಗೆ ಮಿಡಿಯುವ ಮನಸ್ಸುಗಳು, ಹೃದಯಗಳ ಸ್ಪಂದನಗಳಿಲ್ಲಿ ದಾಖಲಾಗಿಲ್ಲ. ಆದರೂ ಹೆಣ್ಣು, ತನ್ನ ಅಂತರಂಗದ ಅಳಲುಗಳಿಗೆ, ಅನುಭವಗಳಿಗೆ ಅಭಿವ್ಯಕ್ತಿ ನೀಡಿದ ಕೆಲವು ಪ್ರಯತ್ನಗಳೂ ಚರಿತ್ರೆಯಲ್ಲಿದೆ. ಮಹಿಳಾ ಚಳವಳಿಯ ಹೊಸ ಹೆಜ್ಜೆಗಳಿಗೆ ನೆಲೆಯಾಗುವಂತಹ, ಪರಂಪರೆಯ ಬೇರುಗಳಾಗುವಂತಹ ಇಂತಹ ಪ್ರಯತ್ನಗಳ ಪರಿಚಯ, ಹಾಗೂ ವಿಶ್ಲೇಷಣೆಯ ಮಹತ್ವಾಕಾಂಕ್ಷೆಯನ್ನು ಈ ಸಂಚಿಕೆಯಿಂದ ಆರಂಭವಾಗುತ್ತಿರುವ “ಚರಿತ್ರಾ” ಅಂಕಣ ಹೊಂದಿದೆ.

ಮನುಕುಲದ ನಾಗರಿಕತೆಯ ಇತಿಹಾಸದಲ್ಲಿ ಗಂಡು-ಹೆಣ್ಣಿನ ಮಧ್ಯದ ಅಸಮಾನತೆಯ ಸಂಸ್ಕೃತಿ, ಹೆಣ್ಣಿನ ಬದುಕನ್ನು ದಮನ ಮಾಡಿದೆ. ಮಾಸ್ತಿಕಲ್ಲುಗಳು, ಬಾಲ ವಿಧವೆಯರು, ಸತಿಪದ್ಧತಿ, ಪರದೆಗಳ ಮುಸುಕಿನೊಳಗೆ ಮಿಡಿಯುವ ಮನಸ್ಸುಗಳು, ಹೃದಯಗಳ ಸ್ಪಂದನಗಳಿಲ್ಲಿ ದಾಖಲಾಗಿಲ್ಲ. ಆದರೂ, ಹೆಣ್ಣು, ತನ್ನ ಅಂತರಂಗದ ಅಳಲುಗಳಿಗೆ, ಅನುಭವಗಳಿಗೆ ಅಭಿವ್ಯಕ್ತಿ ನೀಡಿದ ಕೆಲವು ಪ್ರಯತ್ನಗಳೂ ಚರಿತ್ರೆಯಲ್ಲಿದೆ. ಈ ಶತಮಾನದ ಕನ್ನಡದ ಮೊದಲ ಲೇಖಕಿ ನಂಜನಗೂಡು ತಿರುಮಲಾಂಬಾ ಅವರು, ಇದಕ್ಕೊಂದು ಉದಾಹರಣೆ. ಈ ಶತಮಾನದ ಕನ್ನಡದ ಮೊದಲ ಪತ್ರಕರ್ತೆ, ಪ್ರಕಾಶಕಿ ಹಾಗೂ ಮುದ್ರಕಿ ಎಂಬ ಹೆಗ್ಗಳಿಕೆಯೂ ಈಕೆಗಿದೆ.

ಸದ್ದುಗದ್ದಲವಿಲ್ಲದ ಪುಟ್ಟ ಊರಾದ ನಂಜನಗೂಡಿನ ತಮ್ಮ ಮನೆ "ಮಾತೃಮಂದಿರ"ದಿಂದ ತಿರುಮಲಾಂಬಾ ಅವರ ಮನಸ್ಸು, ಜಗತ್ತಿನ ಆಗುಹೋಗುಗಳಿಗೆ ಸ್ಪಂದಿಸಿದ ರೀತಿ, ಅವರದೇ ಪ್ರಕಾಶನ ಮಾಲೆಯಲ್ಲಿ ಪ್ರಕಟವಾದ ಕೃತಿಗಳಲ್ಲಿ ವ್ಯಕ್ತವಾಗಿದೆ.

''ನಾನು ವಿದ್ಯಾಗಂಧವನ್ನೇ ತಿಳಿಯದ ಅಲ್ಪಮತಿಯಾದ ಸಾಮಾನ್ಯ ಸ್ತ್ರೀ. ನವನಾಗರಿಕತೆಯ ಸುಳಿವಾಗಲೀ, ತಿಳುವಳಿಕೆಯ ತಿರುಳಾಗಲೀ ತಿಳಿಯದ ಬಾಲಿಕೆ. ಆದರೂ ನಮ್ಮ ಸೋದರೀ ವರ್ಗಕ್ಕೆ ನನ್ನ ಕೈಯ್ಯಲ್ಲಾಗುವ ಸೇವೆಯನ್ನು ಮಾಡಬೇಕೆಂಬ ಅತ್ಯುತ್ಕಟೇಚ್ಛೆಯು ನನ್ನನ್ನು ಬಿಡಲೊಲ್ಲದು''– ಅಕ್ಟೋಬರ್, 1913ರಲ್ಲಿ ತಿರುಮಲಾಂಬಾ ಅವರು ಆರಂಭಿಸಿದ 'ಸತಿಹಿತೈಷಿಣಿ' ಪ್ರಕಾಶನದ ಗ್ರಂಥಮಾಲೆಯಲ್ಲಿ ಪ್ರಕಟವಾದ ಅವರ ಮೊದಲನೆ ಕಾದಂಬರಿ ''ಸುಶೀಲೆ''ಯ ಪ್ರಸ್ತಾವನೆಯಲ್ಲಿ ಈ ಮಾತುಗಳಿವೆ. ಮಹಿಳಾ ಚಳವಳಿಗೆ ಕರ್ನಾಟಕದಲ್ಲೇ ಇರುವ ಇತಿಹಾಸದ ಬೆನ್ನೆಲುಬಿನ ಬಗ್ಗೆ ಅರಿವು ಮೂಡಿಸುತ್ತದೆ.

''ಮಹಿಳಾಭ್ಯುದಯ'' ಎಂಬ ಹೆಸರಿನ ಒಂದು ಸ್ತ್ರೀ ಸಮಾಜ ಸ್ಥಾಪಿಸಬೇಕೆಂದಿದ್ದ ತಮ್ಮ ಉದ್ದೇಶ ಸಫಲವಾಗಲಿಲ್ಲವೆಂದು ಒಂದು ಕಡೆ ಉಪನ್ಯಾಸ ಮಾಡುವಾಗ ತಿರುಮಲಾಂಬಾ ಅವರು ಹೇಳಿಕೊಂಡಿದ್ದಾರೆ. ಆದರೆ, ಈಗಲೂ, ''ಪತ್ರಿಕೋದ್ಯಮದಲ್ಲಿನ್ನೂ ಹೆಣ್ಣು ಹೊಸಬಳು'' ಎಂಬ ಅಭಿಪ್ರಾಯ ಪ್ರಚಲಿತವಿರುವ ಸಂದರ್ಭದಲ್ಲಿ, ಈ ಶತಮಾನದ ಆದಿ ಭಾಗದಲ್ಲೇ ಒಬ್ಬಂಟಿಯಾಗಿ ಪತ್ರಿಕೆ ಪ್ರಕಟಣೆ ಹಾಗೂ ಪುಸ್ತಕ ಪ್ರಕಾಶನ ಕಾರ್ಯ ಕೈಗೊಂಡು ಯಶಸ್ವಿಯಾಗಿ ನಡೆಸಿದುದು ಈ ಧೀಮಂತ ಮಹಿಳೆಯ ವಿಶಿಷ್ಟತೆ ಇಂತಹ ವಿಶಿಷ್ಟ ವ್ಯಕ್ತಿತ್ವಗಳು, ಮಹಿಳಾ ಚಳವಳಿಯ ಹೊಸ ಹೆಜ್ಜೆಗಳಿಗೆ ನೆಲೆಯಾಗುವಂತಹವು: ಪರಂಪರೆಯ ಬೇರುಗಳಾಗುವಂತಹವು.

ಮಾರ್ಚ್ 25, 1887ರಂದು ಜನಿಸಿದ ತಿರುಮಲಾಂಬಾ ಅವರು ಹತ್ತನೆ ವಯಸ್ಸಿಗೆ ವಿವಾಹವಾಗಿ, 14ನೆ ವಯಸ್ಸಿಗೆ ಬಾಲ ವಿಧವೆಯ ಪಟ್ಟ ಹೊತ್ತರು. ಬದುಕನ್ನು ಬರಡುಗೊಳಿಸುವ ಬಾಲ ವಿಧವೆಯ ಬದುಕಿನ ಏಕತಾನತೆಯನ್ನು ಮೀರಿ, ತಂದೆಯ ಉತ್ತೇಜನದಿಂದ ಸೃಜನಶೀಲತೆಯ ಅಭಿವ್ಯಕ್ತಿಗೆ ಬರವಣಿಗೆಯನ್ನು ಮಾಧ್ಯಮವನ್ನಾಗಿಸಿಕೊಂಡರು.

ಅರ್ಧ ಸಂಖ್ಯಾಕರು

ತಿರುಮಲಾಂಬಾ ಅವರ ಪತ್ರಿಕೆಯ ಲೇಖನಗಳಲ್ಲಿ, ಕೃತಿಗಳಲ್ಲಿ "ಅರ್ಧಸಂಖ್ಯಾಕರಾದ" ಸ್ತ್ರೀಯರನ್ನು ಸಮಾಜ ನೋಡುವ ದೃಷ್ಟಿ ಕೋನದ ಬಗ್ಗೆ ಪ್ರತಿಭಟನೆಯಿದೆ. ಸ್ತ್ರೀಯರ ಹಕ್ಕುಗಳನ್ನಾಕೆ ಗುರುತಿಸುತ್ತಾರೆ. ಆದರೂ ಅವರಿದ್ದ ಕಾಲದ ಮಿತಿ ಹಾಗೂ ಸಂಪ್ರದಾಯಶೀಲತೆ ಈ ಹಕ್ಕುಗಳ ಪೂರ್ಣ ಅಭಿವ್ಯಕ್ತಿಯನ್ನು ನಿಯಂತ್ರಿಸುತ್ತದೆ. ಹೀಗಿದ್ದೂ ವೈಯಕ್ತಿಕ ಬದುಕಿನಲ್ಲಿ ಸಂಪ್ರದಾಯದ ಜಡತೆ ತೊರೆದು, ಕ್ರಿಯಾಶೀಲತೆ ಮೆರೆದ ತಿರುಮಲಾಂಬಾ ಅವರು ವಿಶಿಷ್ಟ ಚೇತನವಾಗುತ್ತಾರೆ.

''ಸತೀ ಹಿತೈಷಿಣಿ ಗ್ರಂಥಮಾಲೆ'' ಪ್ರಕಟಣೆಗೆ ಪ್ರೇರಕವಾದ ಅಂಶಗಳನ್ನು ವಿವರಿಸುವ ತಿರುಮಲಾಂಬಾ ಹೀಗ ಹೇಳುತ್ತಾರೆ: ''ಸ್ತ್ರೀಯರ ಉನ್ನತಿ, ಅವನತಿಗಳ ಪ್ರತಿಯೊಂದು ವಿಚಾರದಲ್ಲಿಯೂ ಪುರುಷ ಲೇಖಕರಲ್ಲಿ ಭಿನ್ನಮತವು ಕಂಡು ಬರುತ್ತಲಿರುವುದು. ಈ ಬಗೆಯ ಭಿನ್ನಮತವು ಪುರುಷ ವರ್ಗದವರಲ್ಲಿ ಕಂಡು ಬರುವುದಕ್ಕೆ ಸ್ತ್ರೀಯರ ಬುದ್ಧಿ, ಮನಸ್ಸು, ಅಂತಃಕರಣಗಳ ಪ್ರಾಕೃತಿಕ ರಚನೆ, ಸ್ವಭಾವಗಳ ವಿಷಯಕವಾಗಿಯೂ ಸಾವಿರಾರು ವರ್ಷಗಳಿಂದ ಆನುವಂಶಿಕವಾಗಿ ಅವರ ಮನಸ್ಸಿನ ಮೇಲೆ ಉಂಟಾಗಿರುವ ಸಂಸ್ಕಾರ ವಿಷಯಕವಾಗಿಯೂ ಪುರುಷ

ರಿಗಿರುವ ಅಪೂರ್ಣವಾದ ಪರಿಚಯವೇ ಕಾರಣವಾಗಿರುವುದೆಂಬುದು ನಮ್ಮ ಮತವಾಗಿರುವುದು''. ಈ ಹಿನ್ನೆಲೆಯಲ್ಲಿ ''ನಮ್ಮ ವಿಚಾರಗಳನ್ನು ಜನರ ಮುಂದೆ ಇಡುವುದು ನಮ್ಮ ಕರ್ತವ್ಯವಾಗಿರುವುದೆಂದು ತಿಳಿದು 'ಸತೀ ಹಿತೈಷಿಣೀ ಗ್ರಂಥಮಾಲೆ' ಪ್ರಕಟಿಸಲು ಉದ್ಯುಕ್ತರಾಗಿರುವೆವು'' ಎಂದಿದ್ದಾರೆ.

ಸತಿ ಹಿತೈಷಿಣಿ ಗ್ರಂಥಮಾಲೆಯಲ್ಲಿ ಒಟ್ಟು 41 ಪುಸ್ತಕಗಳು ಪ್ರಕಟವಾಗಿವೆ. ಇದರಲ್ಲಿ 28 ಪುಸ್ತಕಗಳು ತಿರುಮಲಾಂಬಾ ಅವರ ಸ್ವಂತ ರಚನೆಗಳು. ಈ ಮಾಲೆಯಲ್ಲಿಯೇ ''ಸನ್ಮಾನ ಗ್ರಂಥಾವಳಿ'' ಎಂಬ ಶಾಖೆಯಲ್ಲಿ ಬೇರೆಯವರು ಬರೆದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

'ಸುಶೀಲೆ' ಕಾದಂಬರಿ ಬಗ್ಗೆ ಒಂದು ಪ್ರತಿಕ್ರಿಯೆ

"ಕರ್ನಾಟಕ ಸ್ತ್ರೀ ಜಗತ್ತಿನಲ್ಲಿ ನಮ್ಮ ದೇಶ ಭಾಷಾ ಸೇವೆಯ ಮೂಲಕ ಮಹಿಳೆಯರನ್ನು ಜ್ಞಾನ ವಿಶಿಷ್ಟರನ್ನಾಗಿ ಮಾಡಬೇಕೆಂಬ ಶ್ರದ್ಧೆಯನ್ನು ವಹಿಸಿ ಪತ್ರಿಕೆಯನ್ನು ಪ್ರಕಟಿಸಿದ ಸತೀಮಣಿಗಳಲ್ಲಿ ನಾನು ಕಂಡಂತೆ ನೀವು ಮೊದಲನೆಯವರು..."

–ಆರ್. ಶ್ರೀನಿವಾಸ ರಾವ್
25–12–1913

ಕಾದಂಬರಿ, ಸಣ್ಣಕಥೆ, ಪತ್ತೇದಾರಿ ಕಾದಂಬರಿ, ಪದ್ಯ, ನಾಟಕ, ಪ್ರಬಂಧ ಇತ್ಯಾದಿ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳನ್ನು ತಿರುಮಲಾಂಬಾ ಅವರು ತಮ್ಮ ಸಾಹಿತ್ಯಾಭಿವ್ಯಕ್ತಿಗೆ ಬಳಸಿದ್ದಾರೆ.

ಬಾಲ ವಿಧವೆಯ ಸಮಸ್ಯೆ, ಸ್ತ್ರೀ ಶಿಕ್ಷಣ, ಸತೀತ್ವದ ಮಹತ್ವ ಇತ್ಯಾದಿ ತತ್ವಗಳಲ್ಲದೆ, ಹೆಂಗಸರ ಹರಟೆ, ಕುಟುಂಬದಲ್ಲಿನ ಸದಸ್ಯರ ಸಣ್ಣತನಗಳು, ಅಸೂಯೆ ಇತ್ಯಾದಿ ದಿನ ನಿತ್ಯದ ಸಂಗತಿಗಳೂ ಅವರ ಕೃತಿಗಳ ಕಥಾವಸ್ತುಗಳಾಗಿವೆ.

''ತಲೆಯನ್ನು ಬೋಳಿಸಿಕೊಂಡ ಮಾತ್ರಕ್ಕೆ ಪವಿತ್ರರಾಗುವರೋ ?'' ಹಾಗೂ ''ಹೆಣ್ಣು ಮಕ್ಕಳೇನು ಬೀದಿಯಲ್ಲಿ ಬಿದ್ದಿರುವರೆ ? ಗಂಡ ಸತ್ತ ಮಾತ್ರಕ್ಕೆ ಅವರೇನು ಮನುಷ್ಯ ಜಾತಿಯನ್ನು ಬಿಟ್ಟಂತೆಯೇ ?'' ('ನಭಾ', ಕಾದಂಬರಿ, 1914) ಎಂದು ಸಾಮಾಜಿಕ ರೂಢಿಯನ್ನು ಪ್ರಶ್ನಿಸುವ ಅವರ ಕಾದಂಬರಿಯ ಪಾತ್ರಗಳು. "ಹೆಂಗಸರಿಗೆ ಎಂದೂ ಹೆದರಿಕೆಯಿದ್ದೇ ಇರಬೇಕು. ಏಕೆಂಬೆಯೊ ? ಅವರೆಂದೂ ಅಬಲೆಯರು, ದುಷ್ಟರು, ಕುಡಿದವರು, ಹುಚ್ಚರು ಮೊದಲಾದ ಪೋಲಿಗಳಾದರೂ ಅತ್ಯಾಚಾರವನ್ನು ನಡೆಯಿಸಲು ಪ್ರಯತ್ನಪಟ್ಟರೆ ಅವರೇನು ಮಾಡಬಲ್ಲರು ! ಇದಕ್ಕಾಗಿಯೇ ಒಂಟಿಯಾಗಿ ಹೆಂಗಸು ಹೊರಗೆ ಹೋಗಬಾರದೆನ್ನುವರು'' ('ಸುಶೀಲೆ' ಕಾದಂಬರಿ, 1913) ಎಂಬಂತಹ ಸಾಮಾಜಿಕ ರೂಢಿಗೇ ಬದ್ಧವಾಗುವಂತಹ ನಿಲುವು ತಾಳುವ ವೈರುಧ್ಯವಾದ ಪಾತ್ರಗಳು ತಿರುಮಲಾಂಬಾ ಅವರ ಸಾಹಿತ್ಯ ಮನೋಧರ್ಮವನ್ನು ರೂಪಿಸಿವೆ.

ತಿರುಮಲಾಂಬಾ ಅವರು ತಮ್ಮ ಕೃತಿಗಳ ಪಾತ್ರಗಳಲ್ಲಿ ಸೃಷ್ಟಿಸುವ ಬಂಡಾಯ ಪ್ರವೃತ್ತಿ, ಸಂಪ್ರದಾಯದ ಬೇರುಗಳನ್ನೇ ಹಿಡಿದು ಅಲುಗಾಡಿಸುವಂತಹದ್ದಲ್ಲ. ಅವರ ಪ್ರತಿಭಟನೆ, ಸಂಪ್ರದಾಯದ ಅನಿಷ್ಟ, ಕ್ರೂರ ಪದ್ಧತಿಗಳ ವಿರುದ್ಧ, ಈ ಪ್ರತಿಭಟನೆ ಬಲವಾದ ಮಾತುಗಳಲ್ಲಿ ಮೂಡಿದೆ. ಇಲ್ಲೆಲ್ಲಾ ಸ್ತ್ರೀ ಸಂವೇದನಾಶೀಲತೆಯ ಹೊಳಹುಗಳ ಸ್ಪಷ್ಟ ಚಿತ್ರಣವಿದೆ.

'ವಿಧವಾ ತತ್ವ', 'ಸೇವಾವಿಚಾರ', 'ಅಬಲಾ ದೌರ್ಜನ್ಯಂ' ಇತ್ಯಾದಿ ಪ್ರಬಂಧಗಳಲ್ಲಿ ಸ್ತ್ರೀ ಸಮಸ್ಯೆಗಳನ್ನು ತಮ್ಮ ಅನುಭವಗಳ ಮಿತಿಯಲ್ಲಿ ಅರ್ಥೈಸಿದ್ದಾರೆ. ಆದರೆ ಆಳವಾದ ವಿಶ್ಲೇಷಣೆ ಇಲ್ಲ. 'ವಿಧವಾ ತತ್ವ' ಪ್ರಬಂಧದಲ್ಲಿ ಬರುವ 'ನನ್ನ ಅಭಾಗಿನಿ ಭಗಿನಿಯರೆ' ಎಂಬಂತಹ ಸಂಬೋಧನೆಗಳು ಆತ್ಮೀಯತೆಯ ಸೆಲೆಯನ್ನು ಚಿಮ್ಮಿಸುತ್ತದೆ. ''ಮಹಿಳೆಯರಲ್ಲಿರುವ ದೌರ್ಜನ್ಯಾಂಶಗಳನ್ನು ಆರಿಸಿ ತೆಗೆದು ಹೊರಗೆ ಹಾಕಿ ನಮ್ಮಲ್ಲಿ ಸೌಜನ್ಯಕ್ಕೆ ಅನವುಂಟು ಮಾಡಿಕೊಳ್ಳಬೇಕೆಂಬ" ಮಹತ್ವಾಕಾಂಕ್ಷೆಯನ್ನು 'ಅಬಲಾದೌರ್ಬನ್ಯಂ' ಪ್ರಬಂಧ ವ್ಯಕ್ತಪಡಿಸುತ್ತದೆ. ಪುರಾಣದಲ್ಲಿನ ಕೈಕೇಯಿಯ ನಿದರ್ಶನ ಕೊಡುವ ಅವರು "ಅಬಲೆಯರ ಈ ವಿಧವಾದ ಅವಿಚಾರಾಂಧತೆಗೆ ಕಾರಣವೆಂದರೆ ಸುಶಿಕ್ಷಾ ರಹಿತವಾದ ಅವಿದ್ಯೆ" ಹಾಗೂ ''ಸ್ತ್ರೀಯರ ಅವಿದ್ಯೆಗೆ ಪುರುಷರ ಉಪೇಕ್ಷೆಯೇ ಕಾರಣ'' ಎಂದೂ ವಿವೇಚಿಸುತ್ತಾರೆ.

ತಿರುಮಲಾಂಬಾ ಅವರ ಮಹತ್ವದ ಸಾಧನೆ,

''ಕರ್ನಾಟಕ ನಂದಿನಿ'' ಮತ್ತು ''ಸನ್ಮಾರ್ಗದರ್ಶಿ'' ಎಂಬ ಮಾಸಪತ್ರಿಕೆಗಳ ಪ್ರಕಟಣೆ, 1917ರಲ್ಲಿ 'ಕರ್ನಾಟಕ ನಂದಿನಿ'ಯನ್ನಾರಂಭಿಸಿದ ಅವರು ಸತತವಾಗಿ ನಾಲ್ಕು ವರ್ಷಗಳ ಕಾಲ ನಡೆಸಿದರು. ಆನಂತರ 'ಸನ್ಮಾರ್ಗದರ್ಶಿ'ಯನ್ನು ಮೂರು ವರ್ಷಗಳ ಕಾಲ ನಡೆಸಿದರು.

ಈ ಪತ್ರಿಕೆಗಳ ಸಂಚಿಕೆಯ ಪ್ರತಿ ಪುಟಗಳಲ್ಲಿ ವೈವಿಧ್ಯವಿದೆ. 'ಸ್ತ್ರೀವಿದ್ಯಾಭ್ಯಾಸ', 'ಶಿಶುಮರಣ ನಿವಾರಣೆ', 'ಮೋಸದ 100ರೂ. ನೋಟಿನ ಬಗ್ಗೆ ಎಚ್ಚರಿಕೆ' 'ಪುರಾತನ ಹಿಂದೂ ಸ್ತ್ರೀಯರ ಔನ್ನತ್ಯ', 'ಆಂಧ್ರಕವಯಿತ್ರಿ ವೆಂಕಮ್ಮ' ವಿಮರ್ಶೆಗಾಗಿ ಬಂದಿರುವ ಪುಸ್ತಕಗಳು', 'ಲೋಕಮಾನ್ಯ ಬಾಲಗಂಗಾಧರ ತಿಲಕ ಸ್ಮರಣಂ' ಎಂಬಂತಹ ಲೇಖನಗಳು, ಧಾರಾವಾಹಿ ಕಥೆಗಳು, ಕಾವ್ಯ, ಯಕ್ಷಗಾನ ರೂಪಕಗಳು ಇತ್ಯಾದಿಗಳನ್ನು ಪ್ರಕಟಿಸಲಾಗಿದೆ. 'ಪಿತೃವಾಕ್ಯ ಪರಿಪಾಲನಂ' ಎಂಬ ಮಾಲೆಯಲ್ಲಿ ಪರಶುರಾಮ, ಪುರುಚಕ್ರವರ್ತಿ, ಗೌತಮ-ಅಹಲ್ಯೆಯರ ಪುತ್ರ ಚಿರಕಾರ ಇತ್ಯಾದಿ ಪುರಾಣದ ನಾಯಕರ ಪಾತ್ರ ಚಿತ್ರಣವಿದೆ. ತಂದೆ-ಮಗ, ಅಕ್ಕ-ತಂಗಿ ಹಾಗೂ ಪತಿ-ಪತ್ನಿ ಮಧ್ಯೆ ಪತ್ರ ಸಂವಾದಗಳ ಮೂಲಕ ಮಧ್ಯಮವರ್ಗದ ಪ್ರಚಲಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಲಾಗಿದೆ. ಅನೇಕ ಫೋಟೊಗಳ 'ಬ್ಲಾಕ್' ಬಳಸಲಾಗಿದೆ.

ಮುದ್ರಣಾಲಯ

ಪ್ರತಿ ತಿಂಗಳೂ ಪತ್ರಿಕೆ ಹೊರತರಬೇಕಾದ ಹೊಣೆ ಹೊತ್ತಿದ್ದ ತಿರುಮಲಾಂಬಾ ಅವರು ಮನೆಯಲ್ಲಿ ತಮ್ಮದೇ ಸ್ವಂತ ಮುದ್ರಣಾಲಯ ಸಹ ಹೊಂದಿದ್ದರು. ಪ್ರೂಫುಗಳನ್ನು ನೋಡುವುದು, ಲೇಖನಗಳನ್ನು ಸಿದ್ಧ ಮಾಡುವುದು, ಲೇಖನಗಳನ್ನು ಬರೆಸುವುದು, ಪತ್ರಿಕೆಗಳಿಗೆ ವಿಳಾಸ ಬರೆದು ಅಂಚೆಗೆ ಹಾಕುವುದು ಇತ್ಯಾದಿ ಕೆಲಸಗಳನ್ನೆಲ್ಲಾ ಒಬ್ಬರೇ ಯಶಸ್ವಿಯಾಗಿ ನಿರ್ವಹಿಸಿದವರು ತಿರುಮಲಾಂಬಾ.

ಕನ್ನಡ ಸಾಹಿತ್ಯ ಪರಿಷತ್ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಾಗಿದ್ದ ಈಕೆ, ಬೆಂಗಳೂರಿನಲ್ಲಿ 1982ರ ಆಗಸ್ಟ್ 31 ರಂದು, ತಮ್ಮ 95ರ ತುಂಬು ವಯಸ್ಸಿನಲ್ಲಿ ನಿಧನರಾದರು.

ಆಧುನಿಕ ಕನ್ನಡ ಗದ್ಯ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆಯಲ್ಲಿ ಮುಖ್ಯವಾಗುವ ತಿರುಮಲಾಂಬಾ ಅವರ ಹೆಸರು ಹೆಚ್ಚು ಪ್ರಚಲಿತವಾಗಿಲ್ಲ. ತಿರುಮಲಾಂಬಾ ಅವರೇ ಈ ಕೆಳಕಂಡಂತೆ ಮಾಡಿರುವ ವಿಶ್ಲೇಷಣೆ ಇದಕ್ಕೆ ಉತ್ತರವಾದೀತೆ ?

" 'ಚಂದ್ರವದನೆ' (ತಿರುಮಲಾಂಬಾ ಅವರು ರಚಿಸಿದ ನಾಟಕ)ಯನ್ನು ನೋಡಿ ಹಲವರು, ಅದ್ಭುತವೆಂದಾಗಲೀ, ಈ ಕಾಲಕ್ಕೆ ಅಸಂಭವವೆಂದಾಗಲಿ ಆಕ್ಷೇಪಿಸುವರಾದೀತು. ಆದರೆ ನಾವು ಹೇಳುವುದೇನಿದೆ ? ಸ್ತ್ರೀಯರು ಲೇಖನ ಕ್ರಿಯೆಗೆ ಅನರ್ಹರೆಂದೂ ಸ್ತ್ರೀಯರಿಂದ ಇಂತಹ ಗ್ರಂಥಗಳು ಎಂದಿಗೂ ಬರೆಯಲ್ಪಡಲಾರವೆಂದೂ, ಆರೋ ಸುಶಿಕ್ಷಿತರಾದ ಪುರುಷರೇ ಇದನ್ನು

"ನಂಜನಗೂಡು ತಿರುಮಲಾಂಬಾ ಪ್ರಶಸ್ತಿ"

ಎಲ್ಲಿಯೂ ದೊರೆಯದ ಅಪರೂಪದ ಗ್ರಂಥಗಳಾಗಿಬಿಟ್ಟಿರುವ ನಂಜನಗೂಡು ತಿರುಮಲಾಂಬಾ ಅವರ ಪುಸ್ತಕಗಳ ಸಂಗ್ರಹಣೆಯಲ್ಲಿ ನಗರದ ಎನ್.ಎಂ.ಕೆ.ಆರ್.ವಿ. ಕಾಲೇಜಿನ "ಶಾಶ್ವತಿ" ಮಹಿಳಾ ವಸ್ತು ಸಂಗ್ರಹಾಲಯ ಪಾತ್ರ ಹಿರಿದು.

"ವಾಸ್ತವವಾಗಿ ಸ್ವತಃ ತಿರುಮಲಾಂಬಾ ಅವರಿಂದ ಪಡೆದ ಪುಸ್ತಕಗಳೇ "ಶಾಶ್ವತಿ" ಅಧ್ಯಯನ ಕೇಂದ್ರ ರೂಪುಗೊಳ್ಳಲು ಸ್ಫೂರ್ತಿಯಾಯಿತು. ಈ ಗ್ರಂಥಗಳು "ಶಾಶ್ವತಿ"ಯ ಮೊದಲ ಆಸ್ತಿಯಾಯಿತು" ಎನ್ನುತ್ತಾರೆ, 'ಶಾಶ್ವತಿ' ನಿರ್ದೇಶಕಿ ಚಿ. ನ. ಮಂಗಳಾ ಅವರು.

ಸತಿ ಹಿತೈಷಿಣಿ ಗ್ರಂಥಮಾಲೆಯ 41 ಗ್ರಂಥಗಳಲ್ಲಿ 38 ಕೃತಿಗಳನ್ನು ಈವರೆಗೆ 'ಶಾಶ್ವತಿ' ಸಂಗ್ರಹಿಸಿದೆ.

ತಿರುಮಲಾಂಬಾ ಅವರ ಜನ್ಮ ಶತಾಬ್ದಿ ಅಂಗವಾಗಿ ಮುಂದಿನ 1987ರ ಮಾರ್ಚಿ 25 ರಿಂದ ಆರಂಭಿಸಿ ಇಡೀ ವರ್ಷ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಈಸಂಸ್ಥೆ ಹಮ್ಮಿಕೊಂಡಿದೆ.

ಅಲ್ಲದೆ, ತಿರುಮಲಾಂಬಾ ಅವರ ಹೆಸರಿನಲ್ಲಿ, ರಾಷ್ಟ್ರ ಮಟ್ಟದಲ್ಲಿ ಮಹಿಳೆಯರು ಬರೆದ ಅತ್ಯುತ್ತಮ ಕೃತಿಗಾಗಿ "ನಂಜನಗೂಡು ತಿರುಮಲಾಂಬಾ ಪ್ರಶಸ್ತಿ"ಯನ್ನು ಶಾಶ್ವತಿ ಸ್ಥಾಪಿಸಿದೆ.

ಬಹುಮಾನ

ಈ ಶತಮಾನದ 40ರ ದಶಕದವರೆಗೂ ತಿರುಮಲಾಂಬಾ ಅವರ ಕೃತಿಗಳು ಸಾಕಷ್ಟು ಜನಪ್ರಿಯವಾಗಿದ್ದವು. 1917 ರಿಂದ ಸುಮಾರು ಇಪ್ಪತ್ತು ದಶಕಗಳವರೆಗೆ ಅವರ ಅನೇಕ ಗ್ರಂಥಗಳಿಗೆ ಮೈಸೂರು, ಮದರಾಸು ಮತ್ತು ಬೊಂಬಾಯಿ ಸರಕಾರಗಳಿಂದ ಬಹುಮಾನಗಳು ದೊರೆತಿವೆ. ಪ್ರತಿ ವರ್ಷವೂ ಯಾವುದಾದರೂ ಒಂದೆರಡು ಪುಸ್ತಕಗಳು ಈ ಸರಕಾರಗಳಲ್ಲಿ, ಕಾಲೇಜು ಶಾಲಾ ತರಗತಿಗಳಿಗೆ ಪಠ್ಯ ಪುಸ್ತಕಗಳಾಗಿರುತ್ತಿದ್ದವು. ಕನ್ನಡದ ಹಿರಿಯ ಸಾಹಿತಿ ಪು. ತಿ. ನರಸಿಂಹಾಚಾರ್ ಅವರು ಶಾಲೆಯಲ್ಲಿದ್ದಾಗ, ಒಮ್ಮೆ ತಿರುಮಲಾಂಬಾ ಅವರು ಬರೆದ ಪುಸ್ತಕವೇ ಬಹುಮಾನವಾಗಿ ದೊರೆತಿತ್ತಂತೆ.

ಹೀಗೆ ಸ್ತ್ರೀ ಕರ್ತೃತ್ವವಲ್ಲಿ ಹೊರಡುವಂತೆ ಗುಪ್ತವಾಗಿದ್ದು ವಿಚಾರಿಸುತ್ತಿರುವರೆಂದೂ, ಇನ್ನೂ ಹಲವು ಸಂದೇಹಗಳಿಂದ ಹುಚ್ಚು ಹುರುಳಾಗಿ ಹೇಳುತ್ತಿರುವಲ್ಲಿ ಇಂತಹ ಆಕ್ಷೇಪವುಂಟಾಗುವುದೇನೂ ಅತಿಶಯವಲ್ಲ, ಆದರೆ ನಮ್ಮ ಸಮಾಧಾನವಿಷ್ಟೆ. ಸಂಶಯ ರೋಗಕ್ಕೆ ಚಿಕಿತ್ಸೆಯಿಲ್ಲ. ಪ್ರಯತ್ನ ಮತ್ತು ಅಭ್ಯಾಸಗಳಿಗೆ ಅಸಾಧ್ಯವಾದ ಕೆಲಸಗಳು ಪ್ರಾಯಃ ಇರಲಾರವು. ಪುರುಷನಿಗೆ ಇರುವಷ್ಟು ಮೇಧಾಶಕ್ತಿ, ಪ್ರತಿಭಾ ಸಂಪನ್ನತೆಗಳು ಸ್ತ್ರೀಯರಲ್ಲಿಯೂ ಸ್ವಾಭಾವಿಕ ಗುಣಗಳಾಗಿದ್ದು, ಕೆಲವು ಸಂದರ್ಭಗಳಲ್ಲಿ ಅಧಿಕತರವಾಗಿಯೇ ಕೌಶಲ್ಯದಂತೆ ಹೊರಹೊಮ್ಮುವುದೂ ಉಂಟು. ಇದೇನೂ ಅಜ್ಞಾನ ವಿಷಯವಲ್ಲ. ಹಾಗಿದ್ದೂ, ಹಿತೈಷಿಣಿಯ ವಿಷಯದಲ್ಲಿ ಆಕ್ಷೇಪಿಸುವವರು ಇಲ್ಲವೆ ಅನುಮಾನಿಸುವವರು ಇರುವುದಾದರೆ ನಾವು ಮಾಡುವುದೇನು ?" ●

ಸಿ. ಜಿ. ಮಂಜುಳಾ

ಸಹನಾ ಮೂರ್ತಿ

ತಾ ಬಂದ ಕರ್ತವ್ಯ ಮುಗಿಯಿತೆಂದು,
ಕರುಳ ಬಳ್ಳಿಯ ಆಡವಿಗೆಸೆದು
ಸಾಗಿದಳು... ದೇವಲೋಕದ ದಾರಿಯಲಿ,
ಮರದ ನೆರಳಲಿ, ಪಕ್ಷಿಯ ಅಭಯದಲಿ,
ನಗುವ ನಿನ್ನ ಮುದ್ದು ಮೊಗವ ಕಂಡು
ಕರುಣೆಯಿಂದೊಯ್ದ ತನ್ನಾಶ್ರಮಕ್ಕೆ
ಅರಳಿ ನಗುವ ಹೂ ಕಂಡು
ದುಂಬಿಯೊಂದು ಝೇಂಕರಿಸಿ ಬಂದು
ಮತ್ತಿನಿಂದ ಗುಂಯ್ಗುಡುತ್ತ ಮತ್ತೆ
ಬರುವೆನೆಂದ್ಹೇಳಿ ಮರಳಿತ್ತು......
ಅಂದೊಂದು ದಿನ, ನಿನ್ನನಿಯನ ನೆನಹಿನಲಿ,
ಜಗವ ಮರೆತ ನಿನ ಕಂಡು,
ತನ್ನ ಮನ್ನಿಸಲಿಲ್ಲೆಂದು ಶಾಪ ನೀಡಿದ
ತಪಸ್ವಿಯೆಂಬ ಅತಿ ಕೋಪಿ......
ಮಹಾ ಚಕ್ರವರ್ತಿಯ ಪ್ರತಿರೂಪ ಹೊತ್ತ
ನೀನು, ''ನಾ, ನಿಮ್ಮ ಹೆಂಡತಿ ಮರೆತೀರಾ ?''
ಎಂದಂದ ಪ್ರಿಯತಮೆಗೆ ''ನೀನಾರೋ ?''
ಎಂಬ ಅಹಂಕಾರದ ಠೇಂಕಾರ
ಸ್ವಾಭಿಮಾನ ಬದಿಗೊತ್ತಿ
ಸೆರಗೊಡ್ಡಿ ಬೇಡಿದ ಅಬಲೆಯ,
ನ್ಯಾಯಕೆ ಮತ್ತೇ ಅಡವಿ ವಾಸ......
ಮತ್ತೇ ಎಂದೋ ನಿನ್ನ ನೆನಪಾಗಿ
''ನೀನೆ ನನ್ನ ಹೆಂಡತಿ'' ಎಂದವನ
ಪಾಲಿಗೆ ನೀ ಕ್ಷಮಾ ಮೂರ್ತಿ
'ಸ್ತ್ರೀ ಸಹನಾ ಮೂರ್ತಿ' ಎಂಬ
ಹೆಗ್ಗಳಿಕೆ ನಿಮ್ಮಿಂದಲ್ಲವೇ......?
ನಿನ್ನ ತುಳಿದು, ಅಹಂಕಾರದಿ ಮೆರೆದವರ......
ನಿನ್ನ ಬದುಕು, ಚಿಂದಿ ಚಿಂದಿ ಮಾಡಿದವರ,
ಮಾಡುತ್ತಿರುವವರ ಕ್ಷಮಿಸುತ್ತಲೇ
ನಡೆದಿರುವೆ......
ಓ......ಹೆಣ್ಣೆ......
ಇನ್ನಾದರೂ ನಿನ್ನ ಮನದ ಕೂಗಿಗೆ
ಪ್ರತಿಸ್ಪಂದಿಸವೆಯಾ......?

—ಶಿವಲೀಲಾ ತೇರದಾಳ್

ನವಪಲ್ಲವಿ

ನ್ಯಾಯದ ನಿರೀಕ್ಷೆಯಲ್ಲಿ



ಶ್ಯಾಮಲ

ಬಾಳಿಗೊಬ್ಬ ಸಂಗಾತಿಯನ್ನಪೇಕ್ಷಿಸುವ ಹೆಣ್ಣಿಗೆ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಮದುವೆ ಅನಿವಾರ್ಯ ವಾಗುತ್ತದೆ. ಅಂತೆಯೇ ಶ್ಯಾಮಲಮ್ಮ ಮದುವೆಯಾಗಿ ಗಂಡನ ಕೈಹಿಡಿದಿದ್ದಳು; ಆಶೆ-ಆಕಾಂಕ್ಷೆಗಳ ಹೊಂಗನಸು ಹೊತ್ತು, ಸುಂದರಜೀವನ ತನ್ನದಾಗಬೇಕೆಂಬ ಹಂಬಲ ದಿಂದ ಗಂಡನ ಮನೆ ಸೇರಿದ್ದಳು.

ಮದುವೆಯ ನಂತರ ಆರು ತಿಂಗಳ ಸುಖಜೀವನ ಮತ್ತು ಗಂಡನ ಪ್ರೀತಿ ಸ್ವರ್ಗದ ಬಾಗಿಲನ್ನೇ ತೆರೆದಿತ್ತು. ಆರುತಿಂಗಳ ನಂತರ ಅವಳ ಸುಖಜೀವನದಲ್ಲಿ ಮೆಲ್ಲ ಮೆಲ್ಲನೆ ಬಿರುಗಾಳಿ ಬೀಸಲು ಆರಂಭಿಸಿತು. ಶ್ಯಾಮಲಮ್ಮ ಮಧ್ಯಮ ವರ್ಗದ ಕುಟುಂಬದ ಒಬ್ಬ ಹೆಣ್ಣುಮಗಳು. ಜಂಗಮಕೋಟೆಯ ನಿವಾಸಿಯಾದ ನಾರಾಯಣಪ್ಪನವರ ಮಗಳಾದ 19 ವರ್ಷದ ಶ್ಯಾಮಲ ಹತ್ತನೇ ತರಗತಿ ಯನ್ನು ಮುಗಿಸಿದ ಕೂಡಲೇ ಅದೇ ಗ್ರಾಮದ ನಿವಾಸಿ ಯಾದ ವೆಂಕಟಾಚಲಯ್ಯನವರ ಮಗ ನಾಗರಾಜನೊಡನೆ ದಿನಾಂಕ 18-5-85 ರಂದು ಮದುವೆ ಮಾಡಿಕೊಟ್ಟರು. ನಾಗರಾಜ ಗ್ರಾಮೀಣಾಭಿವೃದ್ಧಿ ಬ್ಯಾಂಕೊಂದರಲ್ಲಿ ಉದ್ಯೋಗಸ್ಥನಾಗಿದ್ದನು. ನಾರಾಯಣಪ್ಪನು ನಾಗ ರಾಜನ ವಿದ್ಯೆಯನ್ನೂ ಉದ್ಯೋಗವನ್ನೂ ನೋಡಿ, ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದರೆ ಮಗಳು ಸುಖವಾಗಿ ಬಾಳುವಳೆಂಬ ಉದ್ದೇಶದಿಂದ ನಾಗರಾಜನ ಮನೆಯವರು ಕೇಳಿದಷ್ಟು ವರದಕ್ಷಿಣೆಯನ್ನು ಕೊಟ್ಟು ಮದುವೆಮಾಡಲು ಒಪ್ಪಿ, ಐದುಸಾವಿರ ನಗದು ಹಣ ಮತ್ತು ತನ್ನ ಮಗಳಿಗೆ ಚಿನ್ನದ ಒಡವೆಗಳನ್ನೂ ಕೊಟ್ಟು, ಮದುವೆಯ ಖರ್ಚನ್ನೂ ತಾವೇ ವಹಿಸಿಕೊಂಡರು.

ಮದುವೆಯಾದ ಆರುತಿಂಗಳ ನಂತರ ನಾಗರಾಜನು ಸ್ಟೀಲ್‌ಬೀರೋ, ಸ್ಕೂಟರನ್ನೂ ತೆಗೆದುಕೊಡ ಬೇಕೆಂದೂ, ಮತ್ತು ತಾನು ಬ್ಯಾಂಕ್ ನೌಕರನಾದ್ದರಿಂದ ಹೆಂಡತಿ ರೇಷ್ಮೆ ಸೀರೆಗಳನ್ನೇ ಉಡಬೇಕೆಂದೂ, ಆ ಎಲ್ಲ ವನ್ನೂ ತಾಯಿ ಮನೆಯಿಂದಲೇ ತಂದುಕೊಡಬೇಕೆಂದೂ ಒತ್ತಾಯಿಸಿ, ಕೆಲವು ರೀತಿಗಳಲ್ಲಿ ಕಿರುಕುಳ ಕೊಡಲು ಪ್ರಾರಂಭಿಸಿದನು. ಅವನು ಮೆಲ್ಲನೆ ಕೊಡುತ್ತಿದ್ದ ಹಿಂಸೆ ಯನ್ನು ಸಹಿಸಿಕೊಂಡು ತಾಯಿಯ ಮನೆಗೆ ಬಾರದೇ ಅಲ್ಲೇ ಇದ್ದಳು ಶ್ಯಾಮಲಾ.

ಶ್ಯಾಮಲಾಳ ಚಿಕ್ಕತ್ತೆ ಉಮಾದೇವಿ, ಶ್ಯಾಮಲಾ ಯಾವ ಕೆಲಸ ಮಾಡಿದರೂ ಯಾವುದಾದರೂ ಒಂದು ತಪ್ಪನ್ನು ಹೊರಿಸಿ ಬಯ್ಯುತ್ತಿದ್ದಳು. ಮುಸುರೆ ಪಾತ್ರೆ ಗಳನ್ನು ತೊಳೆಯಬೇಕಾದರೆ, ಎದ್ದು ನಿಂತು, ಬಗ್ಗಿ ತೊಳೆಯಬೇಕೆಂದು, ಮನೆಯನ್ನು ಬಗ್ಗಿ ಸಾರಿಸ ಬೇಕೆಂದು, ಹಾಗೇನಾದರೂ ಕುಳಿತು ಕೆಲಸಮಾಡುವು ದನ್ನು ಕಂಡರೆ ತಕ್ಷಣ ಅವಳನ್ನು "ನೀನು ಮುದುಕಿ ಯೇನು ? ನಿನ್ನಿಂದ ಯಾವ ಕೆಲಸವನ್ನೂ ಮಾಡಲಾಗು ವುದಿಲ್ಲವೆ ? ನಿನಗೆ ಅದೂ ಬರುವುದಿಲ್ಲವೇ ಎಂದು, ಚೆನ್ನಾಗಿ ಬಯ್ದು, ಹೊಡೆಯುತ್ತಿದ್ದಳು. ಅಡುಗೆ ಅವಳೇ ಮಾಡಿದರೂ ಮನೆಯವರೆಲ್ಲರ ಊಟ ಮುಗಿದ ನಂತರ ಮಿಕ್ಕಿದ್ದರೆ ಮಾತ್ರ ತಿನ್ನಬೇಕು. ಇಲ್ಲದಿದ್ದರೆ ಹಾಗೆಯೇ ಮಲಗಬೇಕು. ಒಂದು ದಿವಸ ಮಗಳನ್ನು ನೋಡಲು ಹೋದ ನಾರಣಪ್ಪನಿಗೆ, ಆ ಸಮಯ ಅವರ ಮನೆಯ ಊಟದ ಸಮಯವೆಂದು ತಿಳಿದಿರಲಿಲ್ಲ. ಎಲ್ಲರೂ ಊಟಕ್ಕೆ ಕುಳಿತಿದ್ದರು. ನಾರಣಪ್ಪನನ್ನೂ ಊಟಕ್ಕೆ ಕರೆದರು. ಊಟಕ್ಕೆ ಕುಳಿತ ನಾರಣಪ್ಪನಿಗೆ ಬಡಿಸಿದ ಅನ್ನವನ್ನು ನೋಡಿ, ತನ್ನ ಕಣ್ಣನ್ನು ತಾನೇ

ನಂಬಲು ಸಾಧ್ಯವಾಗದಾಯಿತು. ಕಾರಣ ಅವರು ತಾವು ಉಣ್ಣುತ್ತಿದ್ದ ಎಂಜಲನ್ನವನ್ನೇ ಬಡಿಸಿದ್ದರು. ಆ ಮಗಳಿಗಾಗಿ, ಮರುಮಾತನಾಡದೇ ಊಟ ಮುಗಿಸಿದ್ದರು. ಆಗಲೂ ಗಂಡನ ಮನೆಯವರು ಕೊಡುತ್ತಿದ್ದ ಹಿಂಸೆಯನ್ನು ಚೂರೂ ಸಹ ತಂದೆಯವರೊಡನೆ ಹೇಳದೇ, ಶ್ಯಾಮಲಾ ತಂದೆಯನ್ನು ಸಂತೋಷದಿಂದಲೇ ಕಳಿಸಿಕೊಟ್ಟಳು.

ಮಗಳನ್ನು ನೋಡಲು ಬಂದ ತಂದೆಯನ್ನು ಏನೂ ಕೇಳಲಿಲ್ಲವಲ್ಲಾ ಎಂಬ ಸಿಟ್ಟಿನಿಂದ ನಾಗರಾಜ ಮೇಲ್ಕಂಡ ವಸ್ತುಗಳನ್ನು ಇಪ್ಪತ್ತು ದಿನಗಳಲ್ಲಿ ತೆಗೆದುಕೊಂಡು ಬರುವಂತೆ ಬಯ್ದು, ಹೊಡೆದು ಅವಳನ್ನು ತವರು ಮನೆಗೆ ಅಟ್ಟಿದನು. ತನ್ನ ಸುಂದರವಾದ ಬಾಳಿನಲ್ಲಿ ಇಂಥ ಒಂದು ಸುಂಟರಗಾಳಿ ಏಳುವುದೆಂದು ಕನಸಿನಲ್ಲಿಯೂ ಊಹಿಸದ ಶ್ಯಾಮಲಾ ದುಃಖದಲ್ಲಿ ತವರುಮನೆ ಸೇರಿದಳು. ಅಳುತ್ತಾ ಮನೆಗೆ ಬಂದ ಮಗಳನ್ನು ಬರಮಾಡಿಕೊಂಡ ತಂದೆ, ತಾಯಿಗಳಿಗೆ ಅವಳ ದುಃಖದ ಮಾತುಗಳನ್ನು ಕೇಳಿ ತುಂಬಾ ಸಂಕಟವಾಯಿತು. ಈಗಷ್ಟೇ ಮದುವೆ ಮಾಡಿದ ಕಾರಣ, ಅಳಿಯನು ಕೇಳಿದ ವಸ್ತುಗಳನ್ನು ಕೊಂಡುಕೊಡಲು ಸಾಧ್ಯವಿಲ್ಲದೆ ಮಗಳಿಗೆ ಒದಗಿದ ಸ್ಥಿತಿಯನ್ನು ಕಂಡು ಸಂಕಟಪಡುತ್ತಿರುವ ಸಮಯದಲ್ಲಿ ನಾಗರಾಜನು ಶ್ರೀರಾಮಪುರದ ನಿವಾಸಿಯಾದ ವಾಸುದೇವಮೂರ್ತಿಯವರ ಎರಡನೇ ಮಗಳಾದ ವಸಂತಕುಮಾರಿಯನ್ನು ದಿನಾಂಕ 15.5.85 ರಂದು ಎರಡನೇ ಮದುವೆ ಮಾಡಿಕೊಂಡನೆಂಬ ವಿಷಯವು ವಿಷದ ಗಾಳಿಯಂತೆ ಎಲ್ಲೆಡೆ ಹಬ್ಬಿತ್ತು. ಈ ವಿಷಯವನ್ನು ತಿಳಿದ ಶ್ಯಾಮಲಾಳ ತಂದೆತಾಯ್ಗಳಿಗೆ, ತಲೆಯಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ನಿಜ ಸಂಗತಿ ಏನೆಂದು ತಿಳಿದುಬರಲು ಶ್ಯಾಮಲಾ ತನ್ನ ಅಕ್ಕ ನಾಗರತ್ನಮ್ಮನೊಂದಿಗೆ ಗಂಡನ ಮನೆಗೆ ಹೋದಳು. ದಿಢೀರನೆ ಆಗಮಿಸಿದ ಶ್ಯಾಮಲಾಳನ್ನು ನೋಡಿದ ಅವಳ ಗಂಡ ನಾಗರಾಜ, ಅವನ ಚಿಕ್ಕಮ್ಮ ಉಮಾದೇವಿ, ರುಕ್ಮಿಣಿಯಮ್ಮ, ಶಾರದಮ್ಮ, ಅಶ್ವತ್ಥನಾರಾಯಣಪ್ಪ ಇವರೆಲ್ಲರೂ ಸೇರಿ ಹೀನಾಮಾನ ಘಾಯಗೊಳಿಸಿದರು. ರುಕ್ಮಿಣಿಯಮ್ಮ ಮತ್ತು ಅಶ್ವತ್ಥಮ್ಮ ಅವಳ ಕತ್ತನ್ನು ಹಿಸುಕಲು ಪ್ರಯತ್ನಿಸಿದಾಗ ಶ್ಯಾಮಲ ಪ್ರಾಣಭೀತಿಯಿಂದ ಜೋರಾಗಿ ಕಿರುಚಿಕೊಂಡಳು.

ಅವಳ ಚೀರುದನಿಯನ್ನು ಕೇಳಿಸಿಕೊಂಡ ಶ್ಯಾಮಲಳ ಅಕ್ಕ, ನಾಗರತ್ನಮ್ಮ ಹೊರಗಿನಿಂದ ಒಳಗೋಡಿಬಂದು ಅವರ ಬಂಧನದಲ್ಲಿದ್ದ ತಂಗಿಯನ್ನು ಬಿಡಿಸಲು ಹೆಣಗಾಡುತ್ತಿದ್ದ ಸಮಯದಲ್ಲಿ ಅವಳನ್ನೂ ಉಮಾದೇವಿ ಗಾಯಗೊಳಿಸಿದಳು.

ಅಕ್ಕ–ತಂಗಿಯರಿಬ್ಬರೂ ಕಿರುಚುತ್ತಿದ್ದ ಶಬ್ದವು ಜೋರಾಗಿ ಕೇಳಿಸಲು, ಪಕ್ಕದಮನೆಯವರಾದ ರಾಜಣ್ಣ ಗೌರಮ್ಮ ಸಹಾಯಕ್ಕೆ ಬಂದು ಅವರಿಂದ ಅಕ್ಕ ತಂಗಿಯರನ್ನು ಬಿಡಿಸಿದರು. ಅವರಿಂದ ತಪ್ಪಿಸಿಕೊಂಡ ಅಕ್ಕ ತಂಗಿಯರಿಬ್ಬರೂ ಗಾಯಗಳೊಂದಿಗೆ ರಕ್ತ ಸುರಿಸುತ್ತಾ ಬಂದು ತಂದೆಯವರಿಗೆ ನಡೆದ ವಿಷಯವೆಲ್ಲವನ್ನೂ ತಿಳಿಸಿದರು. ಆ ತಕ್ಷಣ ನಾರಾಯಣಪ್ಪ ತನ್ನ ಇಬ್ಬರೂ ಹೆಣ್ಣು ಮಕ್ಕಳೊಂದಿಗೆ ಶಿಡ್ಲಘಟ್ಟ ಪೊಲೀಸ್ ಠಾಣೆಯಲ್ಲಿ ನಾಗರಾಜ ಮತ್ತು ಅವನ ಮನೆಯವರ ವಿರುದ್ಧ ದೂರನ್ನು ಕೊಟ್ಟರು. ಇವರು ಕೊಟ್ಟದೂರನ್ನು ದಾಖಲೆ ಮಾಡಿಕೊಂಡ ಪೋಲಿಸಿನವರು ಗಾಯಗೊಂಡಿದ ಆ ಇಬ್ಬರಿಗೂ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿದರು. ಶ್ಯಾಮಲಮ್ಮನ ಗಂಡ ನಾಗರಾಜನು ಎರಡನೇ ಮದುವೆ ಮಾಡಿಕೊಂಡಿರುವ ಸುದ್ದಿಯನ್ನು ನಾರಣಪ್ಪನಿಂದ ತಿಳಿದ ಪೋಲಿಸರು ಅದಕ್ಕೆ ಸಾಕ್ಷ್ಯಾಧಾರಗಳನ್ನು ಕೇಳಿದರು. ಅದರ ಮೇರೆಗೆ, ದೊಡ್ಡಬಳ್ಳಾಪುರದಲ್ಲಿ ವಾಸಿಸುತ್ತಿದ್ದ ನಾಗರಾಜ ಮತ್ತು ಅವನ ಎರಡನೇ ಹೆಂಡತಿ ವಸಂತಕುಮಾರಿಯನ್ನು ಖುದ್ದಾಗಿ ಸಾಬೀತು ಪಡಿಸಿದರು.

ಪೊಲೀಸ್ ಅಧಿಕಾರಿಗಳು ನಾಗರಾಜನ ವಿರುದ್ಧ ತಕ್ಕ ಕ್ರಮವನ್ನು ಕೈಗೊಂಡು ನಾರಾಯಣಪ್ಪನು ಕೊಟ್ಟಿದ್ದ ವರದಕ್ಷಿಣೆಯಾದ ಐದು ಸಾವಿರ ರೂ, ಮತ್ತು ಉಡುಗೊರೆಗಳನ್ನು ಅವನಿಂದ ತಮ್ಮ ವಶಕ್ಕೆ ತೆಗೆದುಕೊಂಡರು.

ನಾಗರಾಜನ ವಿರುದ್ಧ ವರದಕ್ಷಿಣೆ ನಿಷೇಧ ಕಾಯ್ದೆಯ ಮೇಲೆ ಚಾರ್ಜ್‌ಶೀಟ್ ಹಾಕಲಾಗಿದೆ.

ಈ ಪ್ರಾಯೋಜಿತ ಅಂಕಣಕ್ಕೆ
ಹಣ ನೀಡಿದವರು :

ಪಾರ್ವತಿ ಬಾಳಿಕೆ

ಅತ್ತೆ ಮಾವಂದಿರ, ನಾದಿನಿಯರ, ಮೈದುನರ ಮತ್ತು ಗಂಡಂದಿರ ಹಿಂಸೆಗೆ ಗುರಿಯಾಗಿ, ಶತಶತಮಾನಗಳಿಂದ ನೋವುಗಳ ಗೂಡುಗಳಾಗಿ ತವರುಮನೆಗೆ ಮರಳಿ ಬರುತ್ತಿರುವ ಹೆಣ್ಣುಮಕ್ಕಳು ಸುಮಾರು ಲೆಕ್ಕದಲ್ಲಿದ್ದರೂ ಸ್ಹಹ, ಬೆಳಕಿಗೆ ಬಂದಿರುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಸಮಾಜಕ್ಕೆ ಹೆದರಿ, ನಾಲ್ಕು ಗೋಡೆಗಳ ನಡುವೆ ಕೊಳೆಯುತ್ತಿರುವುದರಿಂದಲೇ, ದಿನ ಬೆಳೆದಂತೆ ಇಂಥ ಅನ್ಯಾಯಗಳು ಬೆಳೆಯುತ್ತಲೇ ಇವೆ.

ಸಂಘ-ಸಂಸ್ಥೆಗಳು ಎಷ್ಟೇ ಹೋರಾಡಿದರೂ ನಮ್ಮ ಸಮಾಜದ ಜನರು ಆಂತರಿಕವಾಗಿ ಎಚ್ಚೆತ್ತುಕೊಳ್ಳುವ ವರೆಗೂ ಕೊಲೆಗಳೂ, ವಿವಾಹ ವಿಚ್ಛೇದನಗಳೂ ಅನ್ಯಾಯ ಅತ್ಯಾಚಾರಗಳೂ ಬೆಳೆಯುತ್ತಲೇ ಇರುತ್ತವೆ. ಹೀಗೆ ಬೆಳೆಯುತ್ತಾ ಹೋದರೆ ಮಹಿಳೆಯರಿಗೆ ವಿಮೋಚನೆ ಎಂದು ?

–ಛಾಯಾ

ಇನ್ನಾದರೂ ಬಿಟ್ಟುಬಿಡಿ

ಹದ್ದು ಕಾಗೆಗಳೆ
ಈಗಲಾದರೂ ದೂರ ಹೋಗಿ
ಇನ್ನೂ ಸಾಕಿಲ್ಲವೆ ?
ನಿಮ್ಮ ಖುಷಿಗಾಗಿ
ಎಂದೋನಿಮ್ಮ
ಬೇಡಿಕೆಯ ಹೆಣವಾಗಿ
ನನ್ನ ರಕ್ತ–ಮಾಂಸ
ನನ್ನತನವೆಲ್ಲವೂ
ನಿಮ್ಮಲ್ಲಿ ಚೆಲ್ಲಿ
ಸುಟ್ಟ ಬಟ್ಟೆಯಾಗಿ
ಹಿಡಿದಲ್ಲೆಲ್ಲ ಬಂಧಿಯಾಗುತ್ತ
ಕರಗಿ ಹೋಗುತ್ತಿರುವ
ನನ್ನ
ಇನ್ನಾದರೂऽऽ ಬಿಟ್ಟುಬಿಡಿ

–ಪ್ರೇಮಾಸಿರ್ಸಿ

ನ್ಯಾಯಾಲಯ

ಸುಪ್ರೀಂ ಕೋರ್ಟಿನ ಮಹತ್ವದ ತೀರ್ಪು

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬ ಪರಂಪರಾಗತ ಮೌಲ್ಯಗಳನ್ನು ಪ್ರಶ್ನಿಸುವಂತಹ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ. ಸ್ತ್ರೀಯರ ಮೂಲಭೂತ ಬದುಕುವ ಹಕ್ಕನ್ನು ಸಮರ್ಥಿಸುವ ಈ ತೀರ್ಪು ಸಿರಿಯನ್ ಕ್ರಿಶ್ಚಿಯನ್ ಸಮುದಾಯದಲ್ಲಿ ಬಿರುಗಾಳಿಯ ಅಲೆಯನ್ನೆಬ್ಬಿಸಿದೆ.

ಸುಪ್ರೀಂಕೋರ್ಟ್, ಷಾಬಾನು ಪ್ರಕರಣದಲ್ಲಿ ನೀಡಿದ ತೀರ್ಪಿನಿಂದಾಗಿ ದೇಶದಾದ್ಯಂತ ಉಂಟಾದ ವಾದ ವಿವಾದ ಅಲೆಗಳ ನಡುವೆಯೇ, ಇನ್ನೊಂದು ಮಹತ್ವವಾದ ತೀರ್ಪನ್ನು ನೀಡಿದೆ. ಸಿರಿಯನ್ ಕ್ರಿಶ್ಚಿಯನ್ ಮಹಿಳೆಯರ ಆಸ್ತಿ ಹಕ್ಕಿನ ಬಗ್ಗೆ ಪ್ರಗತಿಪರ ನಿಲುವು ಹೊಂದಿದ ಈ ತೀರ್ಪು, ಕತ್ತಲಲ್ಲಿ ಕುಂಟುತ್ತಿದ್ದ ಮಹಿಳೆಯರಿಗೊಂದು ಆಶಾಕಿರಣವಾಗಿ ಮಿಂಚಿದೆ,

ಜಿಡ್ಡುಗಟ್ಟಿದ, ಸ್ತ್ರೀಯರಿಗೆ ತಾರತಮ್ಯವೆಸಗುತ್ತಿದ್ದ, ಸುಮಾರು ಎಪ್ಪತ್ತು ವರ್ಷದ ಹಳೆಯ ಕ್ರಿಶ್ಚಿಯನ್ ಉತ್ತರಾಧಿಕಾರದ ಕಾನೂನಿನಲ್ಲಿ ಬದಲಾವಣೆಯಾಗ ಬೇಕೆಂದು ನೊಂದ ಮೂವರು ಮಹಿಳೆಯರು ಸವಾಲೆಸೆದರು. ಕೊಟ್ಟಾಯಂನ ಪ್ರಖ್ಯಾತ ಸ್ಕೂಲೊಂದರಲ್ಲಿ ಪ್ರಧ್ಯಾಪಕರಾಗಿರುವ ಮೇರಿ, ಏಲಿಕುಟ್ಟಿ, ನಿವೃತ್ತ ಉಪಾಧಾಯಯಿನಿಯಾದ ಮಾರಿಯೊಕುಟ್ಟಿ ಪಕ್ಷಪಾತ ಕಾನೂನಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಮನವಿಯೊಂದನ್ನು ಸಲ್ಲಿಸಿದ್ದರು.

ಶ್ರೀಮಂತ ಸಿರಿಯನ್ ಕ್ರಿಶ್ಚಿಯನ್ ಕುಟುಂಬಕ್ಕೆ ಸೇರಿದ ಮೇರಿ ರಾಯ್, ಬಂಗಾಳಿ ಬ್ರಾಹ್ಮಣನೊಬ್ಬನೊಡನೆ ವಿವಾಹವಾದರೂ, ಎರಡು ಎಳೆಯ ಕಂದಮ್ಮಗಳೊಡನೆ ಗಂಡನಿಂದ ಬೇರೆಯಾಗ ಬೇಕಾಯಿತು. ಇತ್ತ ತಂದೆ ತಾಯಿಯ ನೆರವಿಲ್ಲದೆ, ಅತ್ತ ಗಂಡನ ಸಹಾಯವಿಲ್ಲದೆ ಮೇರಿಯ ಸ್ಥಿತಿಯು ಸಲ್ಲದ ಸ್ಥಿತಿಯಾಯಿತು.

ತನ್ನ ಶ್ರೀಮಂತ ಕುಟುಂಬದಲ್ಲಿನ ತನ್ನ ಹಕ್ಕು ಬಾಧ್ಯತೆಗಳ ಸಮರ್ಥನೆಗಾಗಿ, ಮೇರಿ ಆಲೋಚಿಸುತ್ತಿದ್ದಾಗಲೇ ಸಿರಿಯನ್ ಕ್ರಿಶ್ಚಿಯನ್ ಕಾನೂನಿನಲ್ಲಿ ತಂದೆಯ ಆಸ್ತಿಯಲ್ಲಿ ಮಗಳಿಗೆ "ಮಗನ ಪಾಲಿನ ಕಾಲು ಭಾಗ ಅಥವಾ 5,000" ಎಂದು ತಿಳಿದು ಚಿಂತೆಯ ಮೋಡ ದಟ್ಟೈಸಿದವು.

ಸಿರಿಯನ್ ಕ್ರಿಶ್ಚಿಯನ್ ಕಾನೂನಿನಡಿಯಲ್ಲಿ ಸ್ತ್ರೀಯರಿಗಾಗುತ್ತಿದ್ದ ವಂಚನೆ, ಪಕ್ಷಪಾತದ ಅರಿವುಂಟಾದ ಕೂಡಲೆ, ಮೇರಿಯ ನಿರ್ಧಾರ ದೃಢವಾಯಿತು. ಪ್ರಸ್ತುತ ಕಾನೂನಿನಲ್ಲಿರುವ ಮಿತಿಗಳಿಂದ ಮೇರಿ ಕುಗ್ಗಲಿಲ್ಲ. ಸರ್ವೋನ್ನತ ನ್ಯಾಯಾಲಯದಲ್ಲಿ ಉತ್ತರಾಧಿಕಾರದ ಈ ಕಾನೂನಿನಿಂದ ಸ್ತ್ರೀಯರಿಗುಂಟಾಗುತ್ತಿದ್ದ ನ್ಯಾಯವನ್ನು ಪ್ರಶ್ನಿಸುವ ನಿರ್ಧಾರ ಮಾಡಿದಳು. ಈ ಅಚಲ ನಿರ್ಧಾರದಿಂದಾಗಿ, ಸಂಬಂಧಿಕರ, ಜಾತಿಬಾಂಧವರು, ಅಣ್ಣ, ಕೊನೆಗೆ ಹೆತ್ತತಾಯಿ, ಎಲ್ಲರಿಂದಲೂ, ಅವಮಾನದ ದೂಷಣೆಯ, ಹೆಬ್ಬಂಡೆಗಳು ಉರುಳ ತೊಡಗಿದವು.

ಈ ಪ್ರಕರಣವು ಹೆಚ್ಚು ಹೆಚ್ಚು ಚರ್ಚೆಗೆ ಒಳಗಾಗುತ್ತಲೇ ಪ್ರವಾಹದ ವಿರುದ್ಧ ತಾನೊಬ್ಬಳೆ ಒಬ್ಬಂಟಿಯಾಗಿ ಈಜುತ್ತಿಲ್ಲವೆಂಬ ಅರಿವು ಮೇರಿಗುಂಟಾಯಿತು. ಸಿರಿಯನ್ ಜನಾಂಗದಲ್ಲಿ ಬಹಳಷ್ಟು ಮಹಿಳೆಯರು ಈ ರೀತಿಯ ಪಕ್ಷಪಾತಕ್ಕೊಳಗಾಗುತ್ತಿದ್ದರು. ಅರವತ್ತು ವರ್ಷದ ಇಳಿ ವಯಸ್ಸಿನಲ್ಲಿ ಏಲಿಕುಟ್ಟಿಯನ್ನು ಆಕೆಯ ಸಹೋದರ ಮನೆಯಿಂದ ಹೊರಹಾಕಿದ. 65 ವರ್ಷ ವಯಸ್ಸಿನ ನಿವೃತ್ತ ಉಪಾಧ್ಯಾಯಿನಿಯಾದ ಮಾರಿಯೊ ಕುಟ್ಟಿ ಆಶ್ರಯವಿಲ್ಲದೆ ಅನಾಥಳಾದಳು. ಈ ಇಬ್ಬರು ಮಹಿಳೆಯರು ಮೇರಿ ರಾಯ್ ಯೊಂದಿಗೆ ನ್ಯಾಯಾಲಯಹ ಮೊರೆ ಹೊಕ್ಕರು.

ಮೂರು ವರ್ಷಗಳ ಹಿಂದೆ ಸರ್ವೋನ್ನತ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರೂ. ತೀರ್ಪಿನ ಬಗ್ಗೆ ಆಸೆಯನ್ನು ಕೈಬಿಟ್ಟಿದ್ದರು. ಆದರೆ ಫೆಬ್ರವರಿ 23. 1986 ರಂದು ಸುಪ್ರೀಂಕೋರ್ಟ್ ಮೇರಿ ರಾಯ್ ಅವರ ಪರವಾಗಿ ತೀರ್ಪು ನೀಡಿತು. ಪಿ.ಎನ್. ಭಗವತಿ, – ನ್ಯಾಯಾಧೀಶ ಪಾಠಕ್ ಅವರನ್ನೊಳಗೊಂಡ ಪೀಠ

ಸ್ತ್ರೀಯರಿಗೆ ಪಕ್ಷ ಪಾತ ವೆಸಗುತ್ತಿದ್ದ ಟ್ರಾವಾಂಕೂರ್ ಕ್ರಿಶ್ಚಿಯನ್ ಉತ್ತರಾಧಿಕಾರದ ಕಾನೂನನ್ನು ತಳ್ಳಿ ಹಾಕಿತು.

ನ್ಯಾಯಲಯ ಸ್ತ್ರೀಯರ ಪರವಾಗಿ ನೀಡಿದ ಈ ತೀರ್ಪು, ಮನವಿ ಸಲ್ಲಿಸಿದ ಮೂವರು ಮಹಿಳೆಯರಲ್ಲಿ, ಭರವಸೆ ಆತ್ಮವಿಶ್ವಾಸದ ಬೀಜವನ್ನು ಬಿತ್ತಿದೆ. ಅವರ ನೆಲೆಇಲ್ಲದ ಬದುಕಿಗೆ ಆಸರೆಯಾಗಿದೆ. ಅವರಲ್ಲಡಗಿದ್ದ ಹೋರಾಟದ ಮನೋಭಾವನೆಗೆ ನೀರೆರೆದಿದೆ.

ಈ ತೀರ್ಪಿನಿಂದಾಗಿ, ಮನುಷ್ಯ ಸಂಬಂಧ ಹಾಗೂ ಸ್ವಭಾವಗಳಲ್ಲಿ ಉಂಟಾದ ಬದಲಾವಣೆಗಳು ಕುತೂಹಲ ಕಾರಿಯಾಗಿವೆ ಎನ್ನುವ ಮೇರಿ, "ತಂದೆಯ ಹೆಸರಿನಲ್ಲಿರುವ ಆಸ್ತಿಯು ಹೇಗೆ ಹಂಚಲಾಗುತ್ತಿದೆಯೆಂದು ಕಾದು ನೋಡಬೇಕಾಗಿದೆಯಾದರು, ತಾಯಿ ತನ್ನ ಪಾಲನ್ನು ಮಗನಿಗೆ ನೀಡುತ್ತಾಳೆ. ಹಾಗೂ ನನ್ನ ಸಹೋದರಿ ತನ್ನ ಪಾಲನ್ನೂ ಪಡೆಯುವುದು ಅನಿವಾರ್ಯ ವಾಗುತ್ತವೆ.

ಸ್ತ್ರೀಯರ ಅಮಾಯಕ ಸ್ಥಿತಿಗೆ ಸ್ಪಂದಿಸಿದ ಈ ತೀರ್ಪು ಅವಿವಾಹಿತ ಮಹಿಳೆಯರು, ಅಸಹಾಯಕ ವಿಧವೆಯರು ವಿಚ್ಛೇದಿತ ಸ್ತ್ರೀಯರ ಬದುಕಿನಲ್ಲಿ ಭರವಸೆಯ ಬೆಳ್ಳಿ ಗೆರೆಗಳನ್ನು ಮೂಡಿಸಿದೆ. ●

ಎಚ್.ಎಸ್. ರಾಜೇಶ್ವರಿ

ಪ್ರಶ್ನೆಗಳು

ನಿನಗೆ ಗೊತ್ತಿಲ್ಲ ಹುಡುಗಿ
ಮೌನಗಳಿಗೆ ಆಕಾರ ಕೊಡುವಲ್ಲಿ
ಖುಷಿ ಖುಷಿ ಅರ್ಥ ಕೊಡುವಲ್ಲಿ
ನೀನು ತರುಣಿಯಾಗುತ್ತೀ ಎಂದು

ಮೌನಗಳು ಮಾತನಾಡುತ್ತವೆ
ನದಿ ಕಣಿವೆಗಳಲ್ಲಿ
ಸಹ್ಯಾದ್ರಿಯ ಕಾಡುಪೊದೆಗಳಲ್ಲಿ
ಆಕಾಶವನ್ನಪ್ಪುವ ಬಟಾಬಯಲ ಬೆತ್ತಲೆಯಲ್ಲಿ
ಮಾತನಾಡುತ್ತವೆ ಮೌನಗಳು
ಮುದಿ ಸೂಳೆಯರ ಕಣ್ಣಿನಲ್ಲಿ
ತುಡುಕುತ್ತವೆ ಮೌನಗಳು ತಲೆಹಿಡುಕರ
ಭದ್ರ ಜೇಬುಗಳಲ್ಲಿ
ನಟಿಸುವ ನಾಯಕರ ಸಿಹಿಮಾತುಗಳಲ್ಲಿ

ಹುಡುಗಿ ಮೌನ ಬಾಯ್ಬಿಚ್ಚುವುದಿಲ್ಲ
ಹಾಗಿದ್ದೂ ಬೆಳೆಯುತ್ತಿ
ಆದಿಯಿಂದ ಅನಂತದವರೆಗೆ
ಇಲ್ಲ ಸಲ್ಲದ ಊಹಾಪೋಹಗಳಲ್ಲಿ
ಹೆಣ್ಣೆಂಬ ಸುಳ್ಳುಪೊಳ್ಳು ಅಭಿಮಾನದಲ್ಲಿ
ಮುದ್ದಿನ ಮರಿ
ನಿನಗೆ ಈ ಸದ್ದುಗದ್ದಲಗಳ ನಡುವೆ
ರಾಗವಾಗಿ ವ್ಯಾಪಿಸುವ ವರಸೆ ಗೊತ್ತಿಲ್ಲ.
ಬೆಂಬತ್ತುವ ಗಾಳಿಯ ಸುಳಿವಿಲ್ಲ.
ಆದರೂ ಹೊಗುತ್ತೀ
ಗುಹೆಯ ಆಳಕ್ಕೆ
ಕತ್ತಲಿನ ಪವರಕ್ಕೆ
ಬೆನ್ನಬಳಸುವ ಆಧಾರಗಳಲ್ಲಿ
ತೆರೆಯಿಸುವ ಎದೆಯಿಲ್ಲ
ಹುಡುಗಿ ಮುಳುಗಿದ್ದೀ ಈ ಅನಂತ
ಆಳ ನಿರಾಳಗಳಲ್ಲಿ
ನೋವಿನಲ್ಲಿ ಅರಳಿ ನಲಿವಿನಲ್ಲಿ ಕುಗ್ಗುವ
ನನ್ನ ಹುಡುಗಿ
ನೀನೆಂದು ಬಾಯ್ಬಿಡುತ್ತೀ
ಸತ್ತ ಪ್ರಶ್ನೆಗಳಿಗೆ ಎಂದು ಉತ್ತರ ಕೊಡುತ್ತೀ.

–ಪುಷ್ಪ ಎಚ್.ಎಲ್.

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ ? ಅಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮೊದಲ ಬಾರಿಗೆ ಬರೆಯಲು ಯತ್ನಿಸುವ ಲೇಖಕಿ-ಲೇಖಕರಿಗಾಗಿ "ಮೌನ ಮಾತಾದಾಗ" ಅಂಕಣವಿದೆ. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನ ವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗೂ ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

-ಸಂ. ಮಂಡಳಿ

ಇಂದಿನ ಕಾಲದಲ್ಲಿ ಮೂರು ಜನ ಹೆಣ್ಣು ಮಕ್ಕಳಿದ್ದರೆ ಸಾಕು. ತಂದೆ ತಾಯಿಗಳು ದಿನದಿಂದ ದಿನಕ್ಕೆ ಕೃಶರಾಗುತ್ತ ಸಾಗುತ್ತಾರೆ. ಆದರೆ ಮೂರು ಜನ ಗಂಡು ಮಕ್ಕಳಿದ್ದರೆ ಹೀಗಾಗರು. ಕಾರಣ ಪ್ರತಿಯೊಬ್ಬ ಹೆಣ್ಣು ಮಗಳಿಗೂ ಉಚ್ಚ ವ್ಯಾಸಂಗದೊಂದಿಗೆ ಉದ್ಯೋಗ ಕೊಡಿಸಿ ನಂತರ ೨೦-೩೦ ಸಾವಿರ ವರದಕ್ಷಿಣೆ ಕೊಟ್ಟು ಮದುವೆ ಮಾಡಿಕೊಡಬೇಕಲ್ಲ ಎಂಬ ಬಿಡಲಾಗದ ಚಿಂತೆ. ತಾವು ಉಪವಾಸ, ವನವಾಸ ಅನುಭವಿಸಿ ಇಷ್ಟು ಮಾಡಿದರೂ ಮುಂದೆ ಅವರಿಂದ ಸಹಾಯ (ಮುಖ್ಯವಾಗಿ ಧನ ಸಹಾಯ)ವೇನಾದರೂ ಉಂಟಾ ? ಎಂದು ಹೆತ್ತವರ ಪ್ರಶ್ನೆ. ಕನ್ನೆ ಪರರೊಡವೆಗಡ. ಆಕೆಯ ಸಂಬಳಕ್ಕೂ ಕೈಹಾಕದ ಸ್ಥಿತಿ. ಇದನ್ನು ಅರಿತೇ ಎಷ್ಟೋ ಜನ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಅಕ್ಷರಸ್ಥರನ್ನಾಗಿ ಮಾಡಿ ದಾಟಿಸಿಬಿಡಬೇಕೆಂಬ ಹೊಂಚು ಹಾಕುತ್ತಾರೆ.

ಉದ್ಯೋಗಸ್ಥ ಗಂಡಸು ತನ್ನ ತಂದೆ ತಾಯಿಗಳಿಗೆ ಆರ್ಥಿಕವಾಗಿ ಸಹಾಯ ಮಾಡಬಲ್ಲನು. ಆದರೆ ಉದ್ಯೋಗಸ್ಥ ಮಹಿಳೆ ಈ ವಿಷಯದಲ್ಲಿ ಸ್ವತಂತ್ರವಾಗಿಲ್ಲ. ಈ ವಿಷಯವಾಗಿ ಆಕೆಯೂ ಸ್ವಾತಂತ್ರ್ಯವನ್ನು ಪಡೆದರೆ, ಸ್ತ್ರೀಯರನ್ನು ಹೆಚ್ಚು ಕಲಿಸಲು, ಉದ್ಯೋಗಸ್ಥರನ್ನಾಗಿ ಮಾಡಲು ಅವರ ತಂದೆ ತಾಯಿಗಳು ಮುಂದೆ ಬರುವರು. ಹೆಣ್ಣು ಮಕ್ಕಳನ್ನು ಹೆರಲು ತವಕಪಡುವರು.

ಸ್ತ್ರೀ ಮುಂದೆ ಸಹಾಯ ಮಾಡುವದು ಎಂದರೆ ಮದುವೆಯಾದ ಮೇಲಲ್ಲವೆ ? ಅಂದ ಮೇಲೆ ವರದಕ್ಷಿಣೆ ಎಂಬ ದೈತ್ಯಾಕಾರದ ದೆವ್ವ ತಂದೆ ತಾಯಿಗಳಿಗೆ ಒಡಿದುಕೊಳ್ಳದೇ ಬಿಟ್ಟೀತೆ ? 'ಅವರು ಮುಂದೆ ಸಹಾಯ ಮಾಡುವದು ಯಾರಿಗೆ ಬೇಕಾಗಿದೆ. ಮೊದಲು ಅವರಿಗೆ ಲೆಕ್ಕವಿಲ್ಲದಷ್ಟು ಹಣ ಪೀಕಬೇಕಲ್ಲ' ಎಂಬ ಭಾವನೆ ಸ್ತ್ರೀಯ ಭವಿಷ್ಯಕ್ಕೆ ಮುಳುವಾಗುತ್ತದೆ.

ಮದುವೆಗೆ ಮುಂಚೆ ವರದಕ್ಷಿಣಾ ವಿರೋಧಿಯಂತೆ ಭಡಾಯಿಕೊಚ್ಚಿಕೊಳ್ಳುವ ಗಂಡು ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಗೆ ಕಾರಣಗಳನ್ನು ಮುಂದೊಡ್ಡುವ ಹಿರಿಯರ ಉಪದೇಶಗಳಿಗೆ ಸಾಚಾ ಆಗಿ ಅವರನ್ನು ಬೆಂಬಲಿಸುವದು ಇಂದಿನ ದುರಂತಗಳಿಗೆ ಕಾರಣವಾಗಿದೆ. ಹಿರಿಯರ ದಬ್ಬಾಳಿಕೆಯನ್ನು ದಬಾಯಿಸಿ ತನ್ನ ಸ್ವತಂತ್ರ ಅಭಿಪ್ರಾಯವನ್ನು ವ್ಯಕ್ತಪಡಿಸುವ ಯೋಗ್ಯತೆ ಗಂಡಿಗೆಲ್ಲಿದೆ ? ಅಲ್ಲಲ್ಲಿ ಯೋಗ್ಯತೆಯಿರುವ ಗಂಡುಗಳು ತಲೆಯೆತ್ತುತ್ತಿವೆಯಾದರೂ ಆಸೆಬುರುಕ ಗಂಡುಗಳ ಸಂಖ್ಯೆ ಕಡಿಮೆಯೇನಿಲ್ಲ. ಹಿರಿಯರ ಅಂಧತ್ವವನ್ನು ಅಳಿಸಿ ತಮ್ಮ ಯೋಗ್ಯತೆಯನ್ನು ತೋರಿಸುವ ಗಂಡುಗಳ ಸಂಖ್ಯೆ ಹೆಚ್ಚಾಗಲಿ. ವರದಕ್ಷಿಣೆಯ ದಹನದಲ್ಲಿ ಸ್ತ್ರೀಯೂ ಮುಖ್ಯ ಪಾತ್ರವಹಿಸುತ್ತಾಳೆ. ವರದಕ್ಷಿಣೆಯನ್ನು ವಿರೋಧಿಸುವ ಅಲ್ಲೊಬ್ಬ ಇಲ್ಲೊಬ್ಬ ಅವಿವಾಹಿತೆಯರು ಮೂಲೆಗುಂಪಾಗುತ್ತಿದ್ದಾರೆ. ಅವಿವಾಹಿತ ಸ್ತ್ರೀಯರಲ್ಲಿ ಒಗ್ಗಟ್ಟು, ಸಂಘಟನೆ ಉಂಟಾದಲ್ಲಿ ಈ ವರದಕ್ಷಿಣೆಯ ಭೂತಚೇಷ್ಟೆಗಳು ಕಾಲಿಗೆ ಬುದ್ಧಿ ಹೇಳುತ್ತವೆ.

ಮದುವೆ ಮಾಡಿಕೊಡುವದಕ್ಕಾಗಿಯೇ ಎಂಬಂತೆ ಹೆಣ್ಣು ಮಕ್ಕಳನ್ನು ಶಾಲೆಗೆ ಸೇರಿಸುತ್ತಾರೆ. ಅವರು ಪ್ರಾಪ್ತ ವಯಸ್ಸಿಗೆ ಕಾಲಿಟ್ಟ ಕೂಡಲೇ ಶಾಲೆ ಬಿಡಿಸಿ ಮನೆಯಲ್ಲಿ ಸೂಳೆಯ ತರಹ ಆಕೆಯ ಪ್ರದರ್ಶನ ಮಾಡಲು ಪ್ರಾರಂಭಿಸುತ್ತಾರೆ. ಸ್ವಲ್ಪ ವಿದ್ಯಾವಂತ ತಂದೆ ತಾಯಿಗಳಿದ್ದರೆ ಆಕೆಯನ್ನು ಸ್ವಲ್ಪ ಹೆಚ್ಚು ಕಲಿಸಿಯಾರು ಅಷ್ಟೆ. ಮುಂದೆ ಕೈಗೊಳ್ಳುವ ಕಾರ್ಯ ಮಾತ್ರ ಒಂದೇ. ತನ್ನನ್ನು ನೋಡಲು ಬರುವ ಗಂಡುಗಳಿಗೆಲ್ಲಾ ಕನಸಿನ ರಾಣಿಯಾಗಿ ಅವರನ್ನೆಲ್ಲಾ ತನ್ನ ಹೀರೋ ಸ್ಥಾನದಲ್ಲಿ ಕಂಡು ನಂತರ ಯಾವನೋ ಒಬ್ಬನಿಗೆ ನಿಶ್ಚಿತಾರ್ಥ

ಮಾಡಿಕೊಳ್ಳುವಾಗ ಆಕೆಯ ಮಾನಸಿಕ ತೊಳಲಾಟ ಯಾವ ಹಂತದಲ್ಲಿರಬಹುದು ? ಯಾವದೇ ಒಬ್ಬ ಹುಡುಗನನ್ನು ಆತ್ಮೀಯವಾಗಿ ಕಂಡರೆ ಸಾಕು. ಏನೇನೋ ಅರ್ಥ ಹಚ್ಚಿ ಬೈಗಳಗಳ ಮಳೆಯನ್ನೇ ಸುರಿಸುವ ಹಿರಿಯರೇ ಆಕೆಯ ಮುಂದೆ ಹಲವಾರು ಗಂಡುಗಳನ್ನು ಕುಕ್ಕರಿಸಿ ಆಕೆಯ ಮನಸ್ಸನ್ನು ಭುಗಿಲೆಬ್ಬಿಸುವುದು ಸರಿಯೆ ? ಇದು ನೈತಿಕವಾಗಿಯಾದರೂ ಎಷ್ಟು ಸರಿ ? ಒಂದು ವೇಳೆ ಇದೇ ಸರಿಯಾಗಿದ್ದರೆ ಮನೆ ಮನೆ ಹೊಕ್ಕು ತನಗೊಪ್ಪುವ ಹೆಣ್ಣನ್ನು ನೋಡಿ ಬರುವ ಗಂಡುಗಳಂತೆ ಹೆಣ್ಣಿಗೂ ಅವಕಾಶವಿದ್ದರೆ ತಪ್ಪೇನು ?

ಒಟ್ಟಿನಲ್ಲಿ ಈ ಹಾಳು ಸಂಪ್ರದಾಯ ಸ್ತ್ರೀಗೆ ಆರೋಗ್ಯಕರವಾಗಿಲ್ಲ. ಕಾರಣ ಆಕೆ ಈ ಕುರುಡು ಕವಚವನ್ನು ಕಳಚದೇ ಗತ್ಯಂತರವಿಲ್ಲ.

–ಸುನಂದಾ ಮಾಧವನವರ

ವರದಕ್ಷಿಣೆ ಪಿಡುಗು

ನಮ್ಮ ದೇಶದಲ್ಲಿ ಹೆಣ್ಣಿನ ಸಂಖ್ಯೆ ಹೆಚ್ಚಾದಂತೆ ವರದಕ್ಷಿಣೆ ಎಂಬ ಬೆಲೆಯೂ ಸಹ ಗಗನಕ್ಕೇರುತಿದೆ. ಆದ್ದರಿಂದ ಹೆಣ್ಣು ಹುಟ್ಟಿತೆಂದರೇ ಸಾಕು, ಅದನ್ನು ಹುಣ್ಣಿಗೆ ಹೋಲಿಸುತ್ತಾರೆ. ಇದಕ್ಕೆ ಕಾರಣ ವರದಕ್ಷಿಣೆ ಎಂಬ ಭೂತವು ಗಂಡಿನ ಕಡೆಯವರಿಗೆ ಮೆಟ್ಟಿಕೊಂಡಿದೆ. ಈ ವರದಕ್ಷಿಣೆ ಎಂಬ ಪದವು ನಿರ್ನಾಮವಾಗುವವರೆಗೂ ಹೆಣ್ಣು ಹೆತ್ತ ತಂದೆ ತಾಯಿಗಳಿಗೆ ಕಷ್ಟ ತಪ್ಪಿದ್ದಲ್ಲ. ಇಂದು ಈ ವರದಕ್ಷಿಣೆ ಎಂಬುದು ಚಂಡಮಾರುತದಂತೆ ಬೀಸುತ್ತಿದೆ. ಈ ಗಾಳಿಗೆ ಕೊನೆ ಇಲ್ಲದಂತಿದ್ದು ಇದರಲ್ಲಿ ಎಷ್ಟೋ ಹೆಣ್ಣು ಮಕ್ಕಳ ಹುನೆತನಗಳು ನಾಶವಾಗಿವೆ. ಶಿಕ್ಷಣ ಪಡೆದ ನಾಗರೀಕನು ಅನಾಗರಿಕನಾಗಿ ವರ್ತಿಸುತ್ತಿದ್ದಾನೆ ತನ್ನ ಶಿಕ್ಷಣ ಮುಗಿಸಿದ ಬಳಿಕ ತಾನೊಬ್ಬ "ವರ" ನೆಂದು ಹೇಳಿಕೊಂಡು ತನಗೆ ಬಾಳಸಂಗಾತಿಯನ್ನು ಜೊತೆ ಮಾಡಿಕೊಳ್ಳಬೇಕಾದರೆ ವರದಕ್ಷಿಣೆ ಕೇಳುತ್ತಾನೆ. ಹಲವರು ನೇರವಾಗಿ ಹಣ ಕೇಳಿದರೆ ಇನ್ನೂ ಕೆಲವು ಜನರು "ವರೋಪಚಾರ" ಏನು ಮಾಡ್ತೀರಿ ಎಷ್ಟು ತೊಲ "ಬಂಗಾರ ಕೊಡುತ್ತೀರಿ ವಾಚ್ ಯಾವುದು, ಬಟ್ಟೆ ಯಾವ ಕಂಪನಿಯವು ಎಂದೆಲ್ಲ ವಿಧವಿಧವಾಗಿ ಕೇಳುತ್ತಾರೆ. ವಸ್ತುವಿನ ರೂಪದಲ್ಲಿ, ವಿನಿಮಯರೂಪದಲ್ಲಿ, ಬಂದ ವರದಕ್ಷಿಣೆ ಬಿರುಗಾಳಿಯು ಹೆಣ್ಣು ಹೆತ್ತವರಿಗೆ ಚಿತ್ರಹಿಂಸೆ ಕೊಡುತ್ತದೆ. ಆದರೆ ಆ ಹಣ ತೆಗೆದುಕೊಳ್ಳುವ ವರನು ತನ್ನ ಕೈಗೆ ಆಕಾಶವೇ ಮುಟ್ಟುತ್ತಿರುವಷ್ಟು ಸಂತೋಷಭರಿತನಾಗುತ್ತಾನೆ. ತಾನು ಗಂಡಾಗಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು ಎಂದು ಹೇಳಿಕೊಳ್ಳುವ ಜನ ವಿಪರೀತ ಸಂಖ್ಯೆಯಲ್ಲಿದ್ದಾರೆ. ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು ಎಂದು ಹಿರಿಯರು ಹೇಳುತ್ತಾರೆ. ಈ ರೀತಿ ನಡೆಸಿದಲ್ಲಿ ತಮ್ಮ ಮಗಳು ತನ್ನ ಗಂಡನ ಮನೆಯಲ್ಲಿ ಅನುಭವಿಸಬೇಕಾದ ನರಕ ಯಾತನೆ ಅಷ್ಟಿಷ್ಟಲ್ಲ. ಮುಂದೆ ಅವಳ ಬಾಳು ಬರಡಾಗುವುದಲ್ಲದೆ ಮಾತಾಪಿತರೂ ಸಹ ಕಣ್ಣೀರಕೋಡಿಯಲ್ಲಿ ಮುಳುಗಬೇಕಾಗುತ್ತದೆ. ಅಂತೂ ಹೆಣ್ಣನ್ನು ಹೆತ್ತವರು ತಮ್ಮ ಹುಟ್ಟಿದ ದಿನ ನೆನೆಸಿಕೊಳ್ಳಬೇಕಾಗುತ್ತದೆ. ಇಂತಹ ತೊಂದರೆಯು ನಮ್ಮ ದೇಶದಲ್ಲಿ ವಿಪರೀತವಾಗಿದೆ. ನೂರಕ್ಕೆ ತೊಂಬತ್ತು ಮಂದಿ ಹೆಣ್ಣು ಮಕ್ಕಳ ಬಾಳು ಕಣ್ಣೀರಿನಲ್ಲಿ ಕೈತೊಳೆಯಬೇಕಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ವರದಕ್ಷಿಣೆ ಪಡೆಯುವುದು ಒಂದು ದಾನವೀಯ ಗುಣವಲ್ಲದೆ ಅಮಾನುಷ ಕೃತ್ಯವಾಗಿದೆ. ನಮ್ಮ ಘನ ಸರ್ಕಾರದವರಿಗೆ ವರದಕ್ಷಿಣೆ ತೆಗೆದುಕೊಳ್ಳುವ ವಿಚಾರ ಗೊತ್ತಾದರೂ ಅವರನ್ನು ಶಿಕ್ಷಿಸದೇ ಬಿಡುವುದಿಲ್ಲಾ. ವರದಕ್ಷಿಣೆ ಎಂಬುದು ಗುಪ್ತವಾಗಿಯೇ ನಡೆಯುತ್ತಿದೆ. ವರದಕ್ಷಿಣೆ ಕೊಡುವವರು (ಹೆಣ್ಣಿನ ಕಡೆಯವರು) ಸರ್ಕಾರಕ್ಕೆ ವರದಕ್ಷಿಣೆ ಕೊಡುತ್ತಿದ್ದೇನೆ ಎಂದು ಹೇಳಿ ಕೊಡುವುದಿಲ್ಲ. ಹಾಗೇನಾದರೂ ಸರ್ಕಾರಕ್ಕೆ ತಿಳಿಸಿದ್ದೇ ಆದರೆ ತಮ್ಮ ಮಗಳ ಗತಿ ಏನಾಗುತ್ತದೆ ಮುಂದೇನಾಗುವುದು ಎನ್ನುವ ಗೊಂದಲಕ್ಕೆ ಒಳಗಾಗುವುದಲ್ಲದೆ ತಮ್ಮ ಮಗಳ ಭವಿಷ್ಯಕ್ಕೇ ಬೆಂಕಿ ಹಚ್ಚಿದಂತಾಗುತ್ತದೆ.

ನಾನು ಹೆಣ್ಣಿನ ಕಡೆಯವರಿಗೆ ಹೊಗಳಬೇಕು ಗಂಡಿನ ಕಡೆಯವರಿಗೆ ತೆಗಳಬೇಕೆಂದು ಇದನ್ನು ಬರೆಯುತ್ತಿಲ್ಲ. ಪ್ರತಿಯೊಬ್ಬ ಯುವಕ–ಯುವತಿಯರು ತಿಳಿಯಬೇಕಾದ ಸಂಗತಿಯಾಗಿದೆ. ಒಂದು ಗಂಡು ತಾನು ವರದಕ್ಷಿಣೆ ತೆಗೆದುಕೊಳ್ಳದ ಹಾಗೆ ಮದುವೆ ಮಾಡಿಕೊಳ್ಳುವೆನೆಂದು ಹೆಣ್ಣಿನ ಕಡೆಯವರಿಗೇನಾದರೂ ಮಾತು ಕೊಟ್ಟಿದ್ದಲ್ಲಿ ಆಗ ಹೆಣ್ಣಿನ ಕಡೆಯುವರು ಗಂಡಿನಲ್ಲಿ ಏನೋ ದೋಷವಿದೆ, ಅಥವಾ ಗಂಡಿನ ಕಡೆಯವರಲ್ಲಿ ಏನೋ ದೋಷವಿದೆ ಎಂದೆಲ್ಲಾ ಆಡಿಕೊಳ್ಳುತ್ತಾರೆ. ಅಲ್ಲದೇ ತಮ್ಮ ಮಗಳನ್ನು ಮದುವೆ ಮಾಡಿಕೊಡುವುದಕ್ಕೆ ಅನುಮಾನ ಮಾಡಿಕೊಳ್ಳುತ್ತಾರೆ. ಅಂತೂ ಈ ವರದಕ್ಷಿಣೆ ಎಂಬ ಮರವನ್ನು ಕಡಿದರೂ ಮರದ ಬೆಳವಣಿಗೆಗಾಗಿ ನಿಂತ ಬೇರು ಎಲ್ಲೆಲ್ಲಿಯೂ ಹರಡಿಕೊಂಡಿದ್ದು ಆ ಬೇರನ್ನು ನಿರ್ನಾಮಮಾಡಲು ಸಾಧ್ಯವಿಲ್ಲ. ಎಷ್ಟೇ ಆದರೂ ಈ ವರದಕ್ಷಿಣೆ ಎಂಬ ಪದವನ್ನು ನಿರ್ಮೂಲನ ಮಾಡುವುದು ಅಸಾಧ್ಯವಾದ ಮಾತಾಗಿದೆ.

–ಕೆ. ಪಿ. ಎಂ. ನಾಗರಾಜಯ್ಯ

ಕಣ್ಬಿಡುವ ಮೊದಲೇ

ಕೊಲೆಯಾಗುವ ಕಂದಮ್ಮಗಳು

ಹಲವು ಗೊಂಚಲುಗಳ ಬಳಿ ಸುಳಿದು ಕೊನೆಗೆ ತನ್ನ ಮನಕ್ಕೆ ಹಿಡಿಸಿದ ಹೂವಿನ ಮೇಲೆ ಕುಳಿತ ಚಿಟ್ಟೆ ರಂಗು ರಂಗು ವಿನ್ಯಾಸದ ರೆಕ್ಕೆಗಳನ್ನು ನಿಧಾನಕ್ಕೆ ತೆರೆಯುತ್ತಾ ಜೋಡಿಸುತ್ತಾ ಮಕರಂದವನ್ನು ಹೀರುವುದರಲ್ಲಿ ತಲ್ಲೀನವಾಗಿತ್ತು. ಅದನ್ನು ಏಕಾಗ್ರವಾಗಿ ವಿಡಿಯೋದಲ್ಲಿ ಚಿತ್ರಿಸುತ್ತಿದ್ದವನಿಗೆ ಚಿಕ್ಕಂದಿನಲ್ಲಿ ಅದೇ ರೀತಿಯ ಚಿತ್ತಾರದೊಡಲ ಲಂಗದಲ್ಲಿ ಹಾರಾಡಿಕೊಂಡು ಜೊತೆಜೊತೆಯಲ್ಲೆ ಆಟವಾಡುತ್ತಿದ್ದ ತಂಗಿ ನೆನಪಾಗುತ್ತಿದ್ದಳು. ಪಕ್ಕದಲ್ಲಿ ಇವನ್ನೆನಾದರೂ ಸಾಧಿಸಿಬಿಟ್ಟರೆ ಅದು ತನ್ನ ಸಾಧನೆಯೂ ಹೌದು ಎಂಬ ದೊಡ್ಡಕ್ಕನ ತಾದ್ಯಾತ್ಮ ಗತ್ತಿನಲ್ಲಿ ಆ ಮಹಿಳೆ ವಿಡಿಯೋ ರೆಕಾರ್ಡರನ್ನು ನೇತು ಹಾಕಿಕೊಂಡು ನನ್ನ ಚಲನವಲನವನ್ನು ಅನುಸರಿಸಿ ಸಹಕರಿಸುತ್ತಿದ್ದಳು.

> ಕಳೆದ ಹತ್ತು ವರ್ಷಗಳಿಂದೀಚೆ ಕಲ್ಲಾರ ಜನಾಂಗದವರಲ್ಲಿ ಈ ಪದ್ಧತಿ ಬೆಳೆದು ಬಂದಿದೆ. ಈ ಹತ್ತು ವರ್ಷಗಳಲ್ಲಿ ಹೆಣ್ಣು ಮಗುವೊಂದನ್ನು ಕೊಂದಿಲ್ಲದ ಕಲ್ಲಾರು ಕುಟುಂಬ ಇಲ್ಲವೆಂದೇ ಹೇಳಬಹುದು.
>
> ಉಸಲಂಪಟ್ಟಿ ಸರ್ಕಾರಿ ಆಸ್ಪತ್ರೆಯಲ್ಲಿ ಕಲ್ಲಾರು ಜನಾಂಗಕ್ಕೆ ಸೇರಿದ ಸುಮಾರು 600 ಹೆಣ್ಣುಮಕ್ಕಳು ವರ್ಷವೊಂದಕ್ಕೆ ಜನಿಸುತ್ತವೆ. ಅವುಗಳಲ್ಲಿ >70 ಮಕ್ಕಳು ಈ ಪ್ರಪಂಚಕ್ಕೆ ಕಣ್ಣು ಬಿಡುವುದರಲ್ಲಿ ತಾಯಿ ಸಮೇತ ಮಾಯರಾಗಿಬಿಡುತ್ತವೆ. ಇದು ಸರ್ಕಾರಿ ಆಸ್ಪತ್ರೆಗೆ ಬರುವವರ ಅಂಕಿ ಅಂಶ. ಇನ್ನೂ ಹಲವಾರು ನರ್ಸಿಂಗ್ ಹೋಂಗಳಿವೆ. ಮನೆಯಲ್ಲೇ ಹೆರಿಯಾಗುವ ಮಕ್ಕಳ ಅಂಕಿ ಅಂಶ ಸಿಗುವುದಾದರೂ ಎಲ್ಲಿ ?
>
> ಹೀಗೆ ಕಣ್ಮರೆಯಾದ ಕೇಸುಗಳಲ್ಲಿ ಬಹುಪಾಲು ತಾಯಂದಿರು ಮರಳಿ ಬರುತ್ತಾರೆ. ಅವರೆಲ್ಲರ ತೊಂದರೆ ಎದೆಯಲ್ಲಿ ಹಾಲು ಹೆಪ್ಪುಗಟ್ಟಿರುವುದು. ಹಾಲು ಕುಡಿಯ ಬೇಕಿದ ಮಗು ಮಣ್ಣಾಗಿರುತ್ತದೆ.

ಗು. ಪರಮೇಶ್ವರ

ಆಕೆಯ ಹೆಸರು ಮರೆತು ಹೋಗಿದೆ. ಆದರೆ ತಮಿಳು ನಾಡಿನ ಮಧುರೆಯ ಉಸಿಲಂಪಟ್ಟಿ ಎಂಬ ಹಳ್ಳಿಯಲ್ಲಿ ನಡೆದ ವಿಡಿಯೋ ಕಮ್ಮಟದಲ್ಲಿ ನನ್ನ ಹಾಗೇ ಭಾಗವಹಿಸಿದ್ದ ಆಕೆ 15–6–86ರ ಇಂಡಿಯಾಟುಡೆಯಲ್ಲಿನ ಲೇಖನವನು ಓದುತ್ತಿರುವಾಗ ನೆನಪಾಗುತ್ತಿದ್ದಾಳೆ. ಜೊತೆಗೆ ಅವಳೊಡನೆ ನಾನು ನಡೆಸಿದ ಕೆಲವು ಮಾತುಕತೆಗಳು ಸಹ.

ಕಮ್ಮಟದ ಅಂಗವಾಗಿ ಪಕ್ಕದ ಒಂದು ಹಳ್ಳಿಯಲ್ಲಿನ ನೀರಿನ ಸಮಸ್ಯೆಯನ್ನು ಕುರಿತು ನಾವು ಒಂದು ಚಿತ್ರವನ್ನು ತಯಾರಿಸಬೇಕಿತ್ತು. ಆಕೆ ಆ ಹಳ್ಳಿಗೆ ಸೇರಿದವಳಾಗಿದ್ದಳು. ನೀರಿನ ಅಭಾವದಿಂದಾಗಿ ಹಳ್ಳಿಯ ಹೆಣ್ಣು ಮಕ್ಕಳು ಪಡುತ್ತಿರುವ ಬವಣೆಗಳನ್ನು ದಾಖಲಿಸುತ್ತಿದ್ದಾಗ ಒಬ್ಬ ಹೆಂಗಸು ನೀರಿನ ಸಮಸ್ಯೆಯು ವರದಕ್ಷಣೆಯ ಜೊತೆಗೆ ತಳಕು ಹಾಕಿಕೊಂಡಿರುವುದನ್ನು ತಿಳಿಸುತ್ತಾ ಇದರಿಂದ ಪಾರಾಗಲು ತಾವು ಹೆಣ್ಣು ಮಕ್ಕಳನ್ನು ಹುಟ್ಟಿದಾಗಲೇ ಸಾಯಿಸಿಬಿಡುತ್ತೇವೆ ಎಂದಿದ್ದಳು. ನನಗೆ ತಮಿಳು ಸರಿಯಾಗಿ ಬರುವುದಿಲ್ಲವಾದ್ದರಿಂದ ಆ ದಿನದ ಚಿತ್ರೀಕರಣ ಮುಗಿದ ನಂತರ, ನಾನು ಈ ರೀತಿ ಗ್ರಹಿಸಿದೆ, ಆ ಹೆಂಗಸು ಹೇಳಿದ್ದು ಅದೇ ರೀತಿಯೋ ಅಲ್ಲವೋ, ಹಾಗೆ ಆಕೆ ಹೇಳಿದ್ದರೆ ಅದು ನಿಜವೋ ಸುಳ್ಳೋ ಎಂದು ಈಕೆಯನ್ನು ವಿಚಾರಿಸಿದೆ. ಅದಕ್ಕೆ ಅವಳು "ನೀನು ಸರಿಯಾಗಿ ಅರ್ಥಮಾಡಿಕೊಂಡಿದ್ದಿ. ಅದು ನಿಜ. ನಮ್ಮ ದೇವರ್ ಜನರಲ್ಲಿ ಮೊದಲ ಹೆಣ್ಣುಮಗುವನ್ನುಳಿದು ಆ ಮೇಲೆ ಹುಟ್ಟುವ ಎಲ್ಲ ಹೆಣ್ಣು ಮಕ್ಕಳನ್ನು ಹುಟ್ಟಿದ ಕೂಡಲೇ ಕೊಂದು ಬಿಡುತ್ತೇವೆ" ಎಂದು ತಾವು, ದೇವರ್ ಜನಾಂಗದ ಜನ ಬಹಳ ಬುದ್ಧಿವಂತರು, ಸಮಸ್ಯೆಯನ್ನು ಹೀಗೆ ಮೂಲದಲ್ಲೆ ನಿವಾರಿಸಿಕೊಂಡು ಬಿಡುತ್ತೇವೆ ಗೊತ್ತಾ ಎಂಬ ರೀತಿಯಲ್ಲಿ ಹೇಳಿದ್ದಳು. ನನಗೆ ನಂಬವುದಕಾಗಲಿಲ್ಲ ಈ ಪದ್ಧತಿ ಬಹಳ ಹಿಂದೆ ಇದ್ದದ್ದೋ ಅಥವಾ ಈಗಲೂ ಇದೆಯೋ ಎಂದು ಕೇಳಿದೆ.. ತಮ್ಮ ಕರುಳಬಳ್ಳಿಯನ್ನು ಈ ಜನ ಬಹಳ ಹಿಂದೆ ಎಂದರೆ ಶಿಲಾಯುಗದಲ್ಲೋ

ನಾಗರಿಕತೆಯ ಗಂಧವೇ ಇರದಿದ್ದ ಕಾಲದಲ್ಲೂ ಈ ರೀತಿ ಕೊಲ್ಲುತ್ತಿದ್ದಿರಬಹುದು. ಈಗ ಸಾಧ್ಯವೇ ಇಲ್ಲ ಎಂಬ ನನ್ನ ನಂಬಿಕೆ ಆ ಪ್ರಶ್ನೆಯಲ್ಲಿ ಅಡಗಿತ್ತು. ಅದಕ್ಕವಳು ಹಿಂದೆ ಹೇಗೋ ಏನೋ ತನಗೆ ಗೊತ್ತಿಲ್ಲ. ಆದರೆ ಈಗ ಮಾತ್ರ ರೂಢಿಯಲ್ಲಿದೆ ಎಂದಳು.

ನನ್ನನ್ನು ಕುಚೋದ್ಯ ಮಾಡುವುದಕ್ಕೆ ಅವಳು ಹೀಗೆ ಹೇಳುತ್ತಿರಬಹುದೆಂದು ಭಾವಿಸಿ ಅವಳ ಮಾತನ್ನು ನಂಬುವುದಕ್ಕೆ ನಾನೇನು ಹೆಡ್ಡನಲ್ಲ ಎಂಬುದನ್ನು "ಯಾವ ರೀತಿ ಕೊಲ್ಲುತ್ತೀರಿ ?" ಎಂಬ ಪ್ರಶ್ನೆಯ ಮೂಲಕ ಅವಳಿಗೆ ತಿಳಿಸಲು ಪ್ರಯತ್ನಿಸಿದೆ. ಕಪಟವನ್ನು ಈ ಪ್ರಶ್ನೆಗೆ ಎತ್ತರಿಸುವಾಗ ಅವಳ ಮುಖದಲ್ಲಿ ಈಗ ಓದಿಬಿಡುತ್ತೇನೆ ಎಂದುಕೊಂಡು ಅವಳ ಕಣ್ಣುಗಳೊಳಕ್ಕೆ ನನ್ನ ದಿಟ್ಟಿಯನ್ನು ಆಳವಾಗಿ ಇಳಿಬಿಟ್ಟೆ. ಆ ಅಗಲ ಕಣ್ಣುಗಳೊಳಗಿನ ಯಾವುದೇ ಸ್ಪಂದನವನ್ನೂ, ಯಾವುದೇ ಭಾವನೆಯ ಸಣ್ಣ ತರಂಗವನ್ನೂ ಲವಲೇಶವೂ ಬಿಟ್ಟುಕೊಡದೆ ಗುರುತಿಸಬಲ್ಲೆ ಎಂಬ ಆತ್ಮವಿಶ್ವಾಸದ ಹಠ ನನ್ನ ದೃಷ್ಟಿಯಲ್ಲಿತ್ತು.

ಇಷ್ಟು ಹೊತ್ತು ನನ್ನೊಡನೆ ಯಾವುದೋ ದಿನ ನಿತ್ಯದ ಕೆಲಸಬೊಗಸೆಗಳ ಕುರಿತು ಮಾತನಾಡುತ್ತಿರುವ ಹಾಗೆ ಇದ್ದವಳ ಕಣ್ಣುಗಳ ಆಳದಲ್ಲಿ ಮೊಟ್ಟಮೊದಲ ಬಾರಿಗೆ ಅಪರಾಧೀ ಪ್ರಜ್ಞೆಯ ಸೆಲೆ ಮಿಸುಕಾಡಿತು. ಕ್ಷಣ ತಡವರಿಸಿದವಳು "ಹುಟ್ಟಿದ ಸ್ವಲ್ಪ ಹೊತ್ತಿಗೇ ಮಗುವಿನ ಗಂಟಲಿಗೆ ಹಿಡಿ ಭತ್ತವನ್ನು ತುರುಕುತ್ತಾರೆ" ಎಂದಳು. ಇಷ್ಟು ಹೇಳುವುದಕ್ಕೆ ನಿಜವಾಗಲೂ ತಾನು ಹಾಗೆ ಒಂದು ಕಂದಮ್ಮನನ್ನು ಕೊಲ್ಲುತ್ತಿದ್ದೇನೆ ಎಂಬಂತೆ ಚಡಪಡಿಸಿದಳು. ಅವಳು ದಿನನಿತ್ಯದ ಸಹಜ ಘಟನೆ ಎಂದು ಕೊಂಡಿದ್ದದ್ದು ಈಗ ಹೊರಲಾರದ ಹೊರೆಯನ್ನಾಗಿ ಅನುಭವಿಸುತ್ತಿದ್ದಾಳೆ ಎನಿಸಿತು. ನನಗೂ ಮುಂದೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಇನ್ನು ಇಲ್ಲಿ ಕುಳಿತರೆ ಇವನು ತನ್ನ ಕೈಯಲ್ಲಿ ಸತ್ಯದ ಯಾವ ಪಾತಾಳದ ಬಾಗಿಲನ್ನು ತೆರೆಯಿಸಿಬಿಡುತ್ತಾನೋ ಎಂಬ ಹೆದರಿಕೆಯಿಂದ ಎಂಬಂತೆ "ಹೊತ್ತಾಯಿತು, ಬೆಳಿಗ್ಗೆ ಬೇಗ ಎದ್ದು ಚಿತ್ರೀಕರಣಕ್ಕೆ ಹೋಗಬೇಕು. ನಾನು ಹೋಗಿ ಮಲಗುತ್ತೇನೆ" ಎಂದು ಎದ್ದು ಹೊರಟಳು.

ಮಾರನೆಯ ದಿನ ಅವಕಾಶ ಕಲ್ಪಿಸಿಕೊಂಡು ನಾನು ಕೇಳಿದ ಪ್ರಶ್ನೆಗಳು ಬಹುಶಃ ಕ್ರೂರ ಎನಿಸುತ್ತದೆ. ಯಾವ ಪೀಠಿಕೆಯೂ ಇಲ್ಲದೆ, "ನಿಮ್ಮ ತಂದೆತಾಯಿಗೆ ನೀವೇನಾದರೂ ಎರಡನೆಯ ಮಗಳಾಗಿದ್ದರೆ ಹೀಗೆ ನಾವು ಇಲ್ಲಿ ಮಾತನಾಡುವುದಕ್ಕೆ ನೀವು ಈಗ ಇರುತ್ತಿರಲೇ ಇಲ್ಲ ಅಲ್ಲವೆ?" ಎಂದು ಕೇಳಿದೆ. ಅವಳಿಗೆ ಏನು ಉತ್ತರಿಸಬೇಕೆಂದು ಗೊತ್ತಾಗಲಿಲ್ಲ. ಜೊತೆಗೇ ಇನ್ನೊಂದು ಪ್ರಶ್ನೆ ಕೇಳಿದೆ." ನೀವೂ ನಿಮ್ಮ ಎರಡನೆಯ ಹೆಣ್ಣು ಮಗುವನ್ನು ಕೊಲ್ಲುವಿರಾ ?" ಆಕೆ ಹುಲಿಯ ಕೈಗೆ ಸಿಕ್ಕ ಜಿಂಕೆಯಾದಳು. ಆದರೂ ಸಾವರಿಸಿಕೊಂಡು ನಿರ್ಧಾರದಿಂದ ಹೇಳಿದಳು. "ನನಗೀಗ ಒಬ್ಬ ಮಗ ನಿದ್ದಾನೆ. ಎರಡನೆಯದು ಹೆಣ್ಣಾದರೆ ನನಗೆ ಆ ಸಂದರ್ಭ ಬರುವುದಿಲ್ಲ. ಮೂರನೆಯ ಮಗು ಮಾಡಿಕೊಳ್ಳುವುದಿಲ್ಲ."

•'ಇಂಡಿಯಾ ಟುಡೆ' ಪತ್ರಿಕೆಯ ವೆಂಕಟರಮಣಿಯವರು ತಮ್ಮ "ಹುಟ್ಟಿದ್ದೇ ಸಾಯೋಕೆ" ಎಂಬ ಲೇಖನಕ್ಕಾಗಿ ಸಂದರ್ಶಿಸಿದವರಲ್ಲಿ 26 ವರ್ಷವಯಸ್ಸಿನ ಚಿನ್ನಮ್ಮಾಳ್ ಸಹ ಒಬ್ಬಳು. ಅವಳು ಹೇಳಿದ್ದಾಳೆ, "ಸರಿಯಾದ ವರದಕ್ಷಿಣೆಯನ್ನು ತೆರಲಾಗದ ಬಡವರ ಮನೆಯ ಮಗಳಾಗಿ ಜೀವನವಿಡೀ ಅಪಮಾನದ ಜೀವನವನ್ನು ಬದುಕುವುದರಿಂದ ರಕ್ಷಿಸುವುದಕ್ಕಾಗಿ ನನ್ನ ಕಂದನನ್ನು ಕೊಂದೆ" ಚಿನ್ನಮಾಳ್ ಮತ್ತವಳ ಗಂಡ ಕುಪ್ಪುಸ್ವಾಮಿ ಬೆಳಿಗ್ಗೆ ಹುಟ್ಟಿದ ಎರಡನೆಯ ಹೆಣ್ಣುಮಗುವಿಗೆ ಸಂಜೆ ವಿಷವುಣ್ಣಿಸಿ ಬಾಗಿಲು ಹಾಕಿಕೊಂಡು ಒಳಗೆ ಮಗು ನರಳಿ ಸಾಯುವವರೆಗೆ ಕಾದು ಹಳ್ಳ ತೋಡಿ ಶವವನ್ನು ಹೂತು ಹಾಕಿದರು. ಮುಂದುವರೆದು ಚಿನ್ನಾಮ್ಮಾಳ್ ಹೇಳಿದ್ದಾಳೆ, "ಹೊಟ್ಟೆಯಲ್ಲಿ ಹೆತ್ತ ಮಗು ಒಂದು ಕ್ಷಣ ತೊಂದರೆ ಅನುಭವಿಸಿದರೆ ತಡೆಯುವುದಕ್ಕಾಗುವುದಿಲ್ಲ. ಸಾಯಿಸುವ ಮಾತಿರಲಿ. ಆದರೆ ಜೀವಮಾನಪೂರ್ತಿ ನರಳುವ ಬದಲು ನಮ್ಮ ಮಗು ಒಂದೆರಡು ಘಂಟೆ ನರಳಿ ಬಿಡಲಿ ಎಂದು ನಾನು ನನ್ನ ಗಂಡ ತೀರ್ಮಾನಿಸಿದೆವು."

ಅವಳ ಗಂಡ. ಕುಪ್ಪುಸ್ವಾಮಿ ಹೇಳುತ್ತಾನೆ, "ನಾನು 13 ರೂ ನನ್ನ ಹೆಂಡತಿ 6 ರೂ ಒಟ್ಟು 19 ರೂ ದಿನಕ್ಕೆ ನಮ್ಮ ಆದಾಯ. ಈ ಆದಾಯದಲ್ಲಿ ಇಬ್ಬರು ಹೆಣ್ಣು ಮಕ್ಕಳನ್ನು ಮರ್ಯಾದೆಯಾಗಿ ಮದುವೆ ಮಾಡಿಕೊಡುವ ಕನಸನ್ನು ನಾನು ಕಾಣಬಲ್ಲೆನೆ ? ವರದಕ್ಷಿಣೆಯ ಹೆದರಿಕೆಯಿಂದ ಹೆಣ್ಣುಮಗುವನ್ನು ಕೊಲ್ಲುವುದು ನಮ್ಮ ಜನರಲ್ಲಿ ಸಾಮಾನ್ಯ ವಿಷಯ.

ಕಮ್ಮಟದ ಕೊನೆಯಲ್ಲಿ ನಮ್ಮ ಹತ್ತು ನಿಮಿಷದ ಕಿರು ಚಿತ್ರವನ್ನು ಎಡಿಟ್ ಮಾಡುವಾಗಲಾಗಲಿ ಅದಕ್ಕೆ ಧ್ವನಿಯನ್ನು ಡಬ್ ಮಾಡುವಾಗಲಾಗಲಿ ಅವಳು ಭಾಗ ವಹಿಸಿರಲಿಲ್ಲ.

* ಭಾರತದ ಸಮಾಜವಿಜ್ಞಾನಿಗಳು ಮತ್ತು ವಿಶ್ವ ಸಂಸ್ಥೆಯ ಯುನಿಸೆಫ್ (UNICEF) ಸಂಸ್ಥೆಯು ನಡೆಸಿರುವ ಅಧ್ಯಯನದ ಪ್ರಕಾರ ನಮ್ಮ ದೇಶದಲ್ಲಿ ಗಾಬರಿ ಹುಟ್ಟಿಸುವ ಮಟ್ಟದಲ್ಲಿ ಹೆಣ್ಣುಮಕ್ಕಳು ಮತ್ತು ವಯಸ್ಸಾದ ಹೆಂಗಸರನ್ನು ಬಹಳ ನಿಕೃಷ್ಟವಾಗಿ ಕಾಣಲಾಗುತ್ತದೆ. ಇದು ವ್ಯವಸ್ಥಿತವಾಗಿ ನಡೆಯುತ್ತದೆ.

* ಎಳೆಮಕ್ಕಳಲ್ಲಿ ಜೈವಿಕವಾಗಿಯೇ ಹೆಣ್ಣುಮಕ್ಕಳು ಬದುಕುವ ಸಾಮರ್ಥ್ಯವನ್ನು ಗಂಡುಮಕ್ಕಳಿಗಿಂತ ಹೆಚ್ಚಾಗಿ ಹೊಂದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ಸಾಯುವ ದೇಶಗಳಲ್ಲಿ ನಮ್ಮದೂ ಒಂದು.

* ಗಂಡು ಮಕ್ಕಳಲ್ಲಿ ಶೇಕಡ 28 ರಷ್ಟು ಆಹಾರದ ಕೊರತೆಯಿಂದ ನರಳಿದರೆ ಹೆಣ್ಣು ಮಕ್ಕಳಲ್ಲಿ ಶೇಕಡಾ 71 ರಷ್ಟು ಆಹಾರದ ಕೊರತೆಯಿಂದ ನರಳುತ್ತಿದ್ದಾರೆ. ಆಸ್ಪತ್ರೆಗಳ ದಾಖಲೆಗಳಲ್ಲಿ ಗಂಡುಮಕ್ಕಳನ್ನು ಸಣ್ಣ ಪುಟ್ಟ ತೊಂದರೆಗೂ ಶುಶ್ರೂಷೆಗೆ ಕರೆತರುವ ತಂದೆ ತಾಯಿಗಳು ಹೆಣ್ಣುಮಕ್ಕಳಿಗೆ ಕಡಿಮೆ ಸಲ ಚಿಕಿತ್ಸೆ ಕೊಡಿಸುತ್ತಾರೆ.

* ನೂರಕ್ಕೆ 47 ರಷ್ಟು ಗಂಡುಮಕ್ಕಳು ಅಕ್ಷರಾಭ್ಯಾಸ ಹೊಂದಿದರೆ ನೂರಕ್ಕೆ 29 ರಷ್ಟು ಹೆಣ್ಣು ಮಕ್ಕಳು ಅಕ್ಷರಭ್ಯಾಸವನ್ನು ಹೊಂದುತ್ತಿದ್ದಾರೆ.

* ತಂದೆತಾಯಿಗಳೇ ಬರ್ಬರ ಸಂಪ್ರದಾಯಗಳು ಮತ್ತು ಆರ್ಥಿಕ ಪರಿಸ್ಥಿತಿಯ ವಿಷವೃತ್ತದೊಳಗೆ ಬಂಧಿಗಳಾಗಿ ಅದಕ್ಕೆ ಬಲಿಯಾಗಿದ್ದಾರೆ.

ಮೊದಲನೆಯ ಹೆಣ್ಣು ಮಗುವಿನ ನಂತರ ಹುಟ್ಟಿದ ಎಲ್ಲ ಹೆಣ್ಣು ಮಕ್ಕಳಿಗೆ ತಂದೆ ವಿಷದ ಕಾಯಿಗಳನ್ನು ತರುತ್ತಾನೆ. ಅದನ್ನು ಅರೆದು ತಾಯಿಯಾದವಳು ತನ್ನ ಕೈಯಾರೆ ಉಣಿಸಬೇಕು. ವಿಷವುಣಿಸಲು ಒಪ್ಪದಿದ್ದ ನಾಗಮ್ಮಾಳ್‌ಳನ್ನು ಅವಳ ಗಂಡ ಮುತ್ತು ಕರುಪ್ಪನ್ ಎಂಬವನು ಮನೆಯಿಂದ ಓಡಿಸಿದ. ಕೊನೆಗೆ ಅವಳ ಮಾವ ತಾನು ಐದು ಜನ ಹೆಣ್ಣುಮಕ್ಕಳನ್ನು ಸಾಕಿದ್ದನ್ನು ಹೇಳಿ ಪುನ: ಗಂಡಹೆಂಡಿರನ್ನು ಒಂದು ಮಾಡಿದ. ಪುನ: ಹೆಣ್ಣು ಮಗು ಹುಟ್ಟಿತು. ಪರೆಯುಪಟ್ಟಿ ಎಂಬ ಹಳ್ಳಿಯ ಈ ಮುತ್ತು ಕುರುಪ್ಪತ್ "ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಆಗದಿದ್ದರೆ ನಾನು ಯಾಕೆ ಅವರನ್ನು ಕೊಲ್ಲಬಾರದು ? ಬೇರೆಯವರು ಯಾಕೆ ನನ್ನನ್ನು ತಡೆಯ ಬೇಕು ?" ಎಂದು ಪ್ರಶ್ನಿಸುತ್ತಾನೆ. ಮಕ್ಕಳ ಅದೃಷ್ಟ. ತಾಯಿ ದೃಢ ನಿರ್ಧಾರ ಮಾಡಿದ್ದಾಳೆ. ಮಕ್ಕಳು ಜೀವಂತವಾಗಿದ್ದಾರೆ.

ಹೆಣ್ಣು ಮಗುವನ್ನು ಹೆತ್ತ ಹೆಂಡತಿಯರ ಮುಖವನ್ನೇ ನೋಡದ ಗಂಡಂದಿರೂ ಇದ್ದಾರೆ. ಗಂಡು ಮಗು ಹೆತ್ತ ತಾಯಿಗೆ ಮಹಾರಾಣಿಗೆ ಸಲ್ಲುವ ಉಪಚಾರಗಳು ದೊರೆಯುತ್ತವೆ.

ಚಿತ್ರೀಕರಣದ ಸಮಯದಲ್ಲಿ ಕ್ಯಾಮೆರಾ ಇತ್ಯಾದಿಗಳನ್ನು ವ್ಯಾನಿನಲ್ಲಿ ಕಳಿಸಿ ನಾವು ಬಸ್ಸಿನಲ್ಲಿ ಓಡಾಡುತ್ತಿದ್ದೆವು. ಹಾಗೆ ಓಡಾಡುವಾಗ ಬಸ್ಸಿನಲ್ಲಿ ನೋಡಿದರೇ ಮೈಮುರಿದು ದುಡಿಯುವರಂತೆ ಕಾಣುತ್ತಿದ ಹೆಂಗಸರೇ ಹೆಚ್ಚಾಗಿರುತ್ತಿದ್ದರು. ಅವರ ಕಿವಿಗಳು ಆಭರಣದ ಭಾರಕ್ಕೆ ಜೋತು ಬಿದ್ದಿರುತ್ತಿದ್ದವು. ಕೆಲವರದ್ದು ಭುಜಕ್ಕಿಂತ ಕೆಳಗೂ ಜೋತು ಬಿದ್ದಿರುತ್ತಿತ್ತು. ಕಿವಿಗಳನ್ನು ಜೋತು ಬೀಳಿಸುವಷ್ಟು ತೂಕದ ಆ ಚಿನ್ನದ ಆಭರಣಗಳ ಕಟ್ಟಡ ಮತ್ತು ವಿನ್ಯಾಸವು ಶಿಲ್ಪಕಲೆಗೆ ಹೆಸರಾದ ತಮಿಳುನಾಡಿನ ದೇವಸ್ಥಾನಗಳ ಮರಿಗಳೇನೊ ಈ ಆಭರಣಗಳು ಎನಿಸುವಷ್ಟು ಆಕರ್ಷಕವಾಗಿ ಸುಂದರವಾಗಿದ್ದವು. ಆದರೆ ಆ ಆಭರಣಗಳ ಆಕರ್ಷಣೆ ಮತ್ತು ಸೌಂದರ್ಯದ ಘನಾಕೃತಿಯ ಒಳಗೆ ಅದನ್ನು ಧರಿಸಿರುವವರ ಎಷ್ಟು ಜನ ತಂಗಿಯರ ಜೀವಗಳು ಬಲಿಯಾಗಿ ಕುಳಿತಿವೆಯೊ ?



ಪುಟಾಣಿ ಪ್ರಪಂಚ

ಅಜ್ಜಿಯ ಮಗ್ಗುಲಲ್ಲಿ ಕಥೆಗಳನ್ನು ಕೇಳುತ್ತಾ ಕಲ್ಪನೆಯ ಎಳೆಗಳ ಚಿತ್ತಾರಗಳಲ್ಲಿ ಮನಸ್ಸುಗಳು ಅರಳುವ ಪ್ರಕ್ರಿಯೆ ಸೋಜಿಗದ್ದು. ಈ ಕಥೆಗಳನ್ನು ಕೇಳುತ್ತಾ ಬೆಳೆಯುವ ಬಾಲಕ ಸಾಹಸ, ಧೈರ್ಯ, ಬದುಕನ್ನೆದುರಿಸುಸ ಆತ್ಮವಿಶ್ವಾಸ, ಸೃಜನಾತ್ಮಕತೆಗೆ ಸಾಗುವವಂತಹ ಮನಸ್ಥಿತಿ ಹೊಂದುತ್ತಾನೆ. ಆದರೆ ಏಳು ಮಲ್ಲಿಗೆ ತೂಕದ ರಾಜಕುಮಾರಿಯ ಆದರ್ಶದ ಅನುಕರಣೆಗೆ ತೊಡಗುವ ಬಾಲಕಿ ಬಲಿಷ್ಠ ರಾಜಕುಮಾರನ ಬರುವಿಕೆಗಾಗಿ ಕಾಯುತ್ತಾ ಕನಸಿನ ಪ್ರಪಚಂದಲ್ಲಿ ಮುಳುಗುವಂತಹ ನಿಷ್ಕ್ರಿಯತೆ ಮೈಗೂಡಿಸಿಕೊಳ್ಳುತ್ತಾಳೆ. ಇಂತಹ ಕಥೆಗಳು, ಸಮಾಜದಲ್ಲಿ ಗಂಡು–ಹೆಣ್ಣು ನಿರ್ವಹಿಸಬೇಕಾದ ಸಿದ್ಧ ಪಾತ್ರಗಳ ಬಗ್ಗೆ ಬಾಲ್ಯದಲ್ಲೇ ಆಚ್ಚೊತ್ತಿ ಬಿಡುತ್ತವೆ. ಸ್ವಿಕೃತ ಮೌಲ್ಯಗಳ ಸಂಕೋಲೆಯಿಲ್ಲದಂತಹ ಮುಕ್ತ ಪರಿಸರದಲ್ಲಿ ವ್ಯಕ್ತಿತ್ವಗಳನ್ನು ಅರಳಿಸುದಂತಹ ಕಲ್ಪನೆಗಳಕಥೆ, ಲೇಖನ, ಚಿತ್ರ, ಕವನಗಳನ್ನು ಪ್ರಕಟಿಸುವ ಪ್ರಯತ್ನದ ಫಲವೇ ಈ ಅಂಕಣ–'ಪುಟಾಣಿ ಪ್ರಪಂಚ'

ವಜ್ರದ ಉಂಗುರ

ನಿಮ್ಮಿ ಹನ್ನೊಂದು ವರ್ಷದ ಹುಡುಗಿ. ಈಕೆಗೆ ಇಬ್ಬರು ಪುಟ್ಟತಂಗಿಯರು. ತಂದೆ–ತಾಯಿ ಜೊತೆ, ಊರ ಹೊರಗಿನ ಜೋಪಡಿಯೊಂದರಲ್ಲಿ ಇವರೆಲ್ಲರ ವಾಸ. ನಿಮ್ಮಿಯ ತಾಯಿ ತಂದೆ ಇಬ್ಬರೂ ಕೂಲಿ ಕೆಲಸ ಮಾಡಿ, ಬಂದಿದ್ದರಲ್ಲಿ ಮಿತವಾಗಿ ಜೀವನ ನಡೆಸುತ್ತಿದ್ದರು. ಅವರಿಗೆ ಶಾಲೆಯ ಪರಿಚಯವಿಲ್ಲದಿದ್ದುದ್ದರಿಂದ ತಮ್ಮ ಮಕ್ಕಳನ್ನೂ ಹಾಗೆಯೇ ಬೆಳೆಸಿದ್ದರು. ನಿಮ್ಮಿ ತನ್ನ ಪುಟ್ಟ ತಂಗಿಯರೊಡನೆ ಕೂಡಿ ಆಡುತ್ತಾ ದಿನಕಳೆಯುತ್ತಿದ್ದಳು. ಸಂಜೆಯಾಯಿತೆಂದರೆ ತನ್ನ ಅವ್ವನ ಪಕ್ಕದಲ್ಲಿ ಕುಳಿತು, ಆಕೆ ಹೇಳುವ ಚಿತ್ರವಿಚಿತ್ರ ಕತೆಗಳಲ್ಲಿ ತಲ್ಲೀನಗೊಂಡು, ಮೂಕಳಾಗಿ, ಚಕಿತಳಾಗಿ, ವಿಸ್ಮಿತಳಾಗಿ, ಆ ಕತೆಗಳನ್ನು ಆಲಿಸುತ್ತಿದ್ದಳು.

ಹೀಗಿರಲು ಒಂದು ದಿನ ಮಧ್ಯಾಹ್ನ ಕುರಿ ಕಾಯುವ ಹುಡುಗರನ್ನು ಕಂಡ ನಿಮ್ಮಿ, ಅವರ ಜೊತೆ ಆಡಲು ಮನೆಯಲ್ಲಿ ಯಾರಿಗೂ ಹೇಳದೆ ಪರಾರಿಯಾದಳು. ಕುರಿ ಮತ್ತು ದನಗಳನ್ನು ಮೇಯಿಸಲು ಮೂರ್ನಾಲ್ಕು ಹುಡುಗರು ಬರುತ್ತಿದ್ದರು. ದನಕುರಿಗಳನ್ನು ಅವುಗಳ ಪಾಡಿಗೆ ಅವನ್ನು ಮೇಯಲು ಬಿಟ್ಟು ಅವರೆಲ್ಲರೂ ಆಟವಾಡುತ್ತಿದ್ದರು. ಇಂದು ನಿಮ್ಮಿ ಬಂದಿದ್ದು ಅವರಿಗೂ ಖುಷಿಕೊಟ್ಟಿತ್ತು. ಎಮ್ಮೆ, ದನಗಳ ಮೇಲೆ ಕುಳಿತು ಅವನ್ನು ಹುಚ್ಚಾಪಟ್ಟೆ ಓಡಿಸಿದರು. ದಿನವೂ ಕುರಿ ಮೇಯಿಸಲು ಬರುತ್ತಿದ್ದ ಸ್ಥಳಕ್ಕಿಂತ ಅಂದು ಅವರಿಗರಿವಿಲ್ಲದಂತೆಯೇ ಮುಂದೆ ಬಂದಿದ್ದರು. ಮರಕೋತಿಯಾಟ, ಜೂಜಾಟ, ಬೆಟ್ಟ ಹತ್ತುವುದು, ಇಳಿಯುವುದು, ಮರದ ಕೊಂಬೆಯನ್ನೇ ಹಿಡಿದು ಉಯ್ಯಾಲೆಯಾಟ...ಹೀಗೆ ಅವರ ಆಟ ಮಿತಿಯಿಲ್ಲದಂತೆ ಸಾಗಿತ್ತು. ಸುಸ್ತಾದಾಗ ಹತ್ತಿರದಲ್ಲಿದ್ದ ಕೆರೆಯಲ್ಲಿ ನೀರು ಕುಡಿದು, ಅಲ್ಲಿಯ ನೀರನ್ನೆಲ್ಲಾ ಎರಚಾಡಿ, ಮತ್ತೆ ಆಡಲು ತೊಡಗುತ್ತಿದ್ದರು. ಈ ಆಟವನ್ನು ಮುಂದುವರಿಸಿದರು. ಈ ಸಲ ತಾನು ಯಾರಿಗೂ ಕಾಣಿಸಿಕೊಳ್ಳದೆ, ಅವರನ್ನು ಪೇಚಾಡಿಸಬೇಕೆಂದು ನಿಮ್ಮಿ ಬೆಟ್ಟದ ಮತ್ತೊಂದು ತುದಿಗೆ ಹೋಗಿ, ಅಲ್ಲಿಂದ ಸುಮಾರು ದೂರ ಓಡಿ, ಒಂದು ಮರದ ಹಿಂದೆ ಅಡಗಿ ನಿಂತಳು. ಇಲ್ಲಿಗೂ ಬಂದು ಹುಡುಕಿಬಿಡುತ್ತಾರೆಂದು, ಮತ್ತೂ ಸ್ವಲ್ಪದೂರ ಓಡಿ ಪೊದೆಯಂತಿದ್ದ ಗಿಡದ ಹಿಂದೆ ಅವಿತು ಮಣ್ಣನ್ನು ಕೆದಕುತ್ತಾ ಕುಳಿತುಕೊಂಡಳು.

ಇತ್ತ ಆ ಹುಡುಗರಿಗೆ ನಿಮ್ಮಿಯನ್ನು ಹುಡುಕಲು ಆಗಲೇ ಇಲ್ಲ, ನಿಮ್ಮಿ ಅಷ್ಟು ದೂರ ಓಡಿ ಹೋಗಿರುತ್ತಾಳೆಂದು ಅವರ್‍ಯಾರೂ ಊಹಿಸಲಿಲ್ಲ. ಹಾಗಾಗಿ ನಿಮ್ಮಿ ಹೇಳದೆ ಕೇಳದೆ ಕತ್ತಲಾಗುತ್ತಿರುವುದರಿಂದ ಮನೆಗೆ ಹೋಗಿರಬೇಕೆಂದು ಊಹಿಸಿ, ತಾವೂ ಆತುರಾತುರವಾಗಿ ದನಕುರಿಗಳನ್ನು ಊರಕಡೆಗೆ ಅಟ್ಟಿಕೊಂಡು ನಡೆದರು.

ಕತ್ತಲಾದರೂ ತನ್ನನ್ನು ಯಾರೂ ಹುಡುಕಿಕೊಂಡು ಬರದಿದ್ದನ್ನು ಕಂಡು ನಿಮ್ಮಿಗೆ ಗಾಬರಿಯಾಗಲಾರಂಭಿಸಿತು, ವಾಪಾಸ್ಸ್ ಹೋಗಲು ಎದ್ದುನಿಂತಳು.

ಅಮಾವಾಸ್ಯೆ ಹತ್ತಿರದ ದಿನಗಳಾದ್ದರಿಂದ ಎಲ್ಲಿಯೂ ಬೆಳಕಿರಲಿಲ್ಲ. ತಾನು ಯಾವ ಕಡೆಯಿಂದ ಬಂದೆನೆಂಬುದೇ ಆಕೆಗೆ ತಿಳಿಯಲಾಗಲಿಲ್ಲ. ಅವ್ವ ಕತೆಯಲ್ಲಿ ಹೇಳುತ್ತಿದ್ದ, ಭಯಂಕರ ಪ್ರಾಣಿಗಳು ರಾಕ್ಷಸರೆಲ್ಲರೂ ನೆನಪಾಗಿ ಅಳು ಉಕ್ಕಿಬಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು. ಜೋರಾಗಿ ಅಳುವುದಕ್ಕೂ ಅವಳಿಗೆ ಭಯವಾಗುತ್ತಿತ್ತು, ಕಣ್ಣಲ್ಲಿದ್ದ ನೀರೆಲ್ಲಾ ಕಣ್ಣೀರಾಗಿ ಸುರಿಯಿತು. ಚಿತ್ರ ವಿಚಿತ್ರ ಕಲ್ಪನೆಗಳನ್ನ ತಡೆಯಲು ತನ್ನನ್ನು ತಾನೇ ಸಮಾಧಾನ ಮಾಡಿಕೊಳ್ಳಲಾರಂಭಿಸಿದಳು. ಅವ್ವನ ಕತೆಯಲ್ಲಿ ಬರುತ್ತಿದ್ದ ವೀರಬಾಲಕಿ, ಬಾಲಕರನ್ನು ನೆನೆದು ದುಃಖವನ್ನ ಶಮನ ಮಾಡಿಕೊಳ್ಳತೊಡಗಿದಳು. ಕತ್ತಲೆಗೆ ಹೊಂದಿಕೊಂಡಂತೆಲ್ಲಾ ಹೊಸ ಧೈರ್ಯ, ನವಚೈತನ್ಯಗಳು ಬರಲಾರಂಭಿಸಿತು. ಕಣ್ಣನ್ನಗಲಿಸಿ ಸುತ್ತಲೂ ನೋಡಲಾರಂಭಿಸಿದಳು. ದೂರದಲ್ಲೆಲ್ಲೋ ಸಣ್ಣಗೆ ಬೆಳಕು ಬರುತ್ತಿತ್ತು. ಸದ್ಯಕ್ಕೆ ಬೆಳಕಿನ ಹತ್ತಿರ ಹೋಗಿ, ಅಲ್ಲಿಯೇ ರಾತ್ರಿಯನ್ನು ಕಳೆಯುವುದೆಂದುಕೊಂಡಳು. ಭರದಿಂದ ಆ ಕಡೆಗೆ ನಡೆಯಲಾರಂಭಿಸಿದಳು.

ರಾತ್ರಿಯ ಆ ನೀರವತೆ ಅವಳಿಗೆ ಹೆದರಿಕೆ ಹುಟ್ಟಿಸುತ್ತಿತ್ತು. ದೂರದಿಂದ ವಿಚಿತ್ರವಾದ ಶಬ್ದಗಳು ಕೇಳಿ ಬರುತ್ತಿತ್ತು. ಬೆಳಕಿನ ಹತ್ತಿರ ಹತ್ತಿರ ಬಂದಂತೆಲ್ಲಾ ಅವಳಲ್ಲಿನ ಹೆದರಿಕೆ ಕ್ರಮೇಣ ದೂರವಾಯಿತು. ಬೆಳಕು ಒಂದು ಗುಡಿಸಿಲಿನಿಂದ ಬರುತ್ತಿತ್ತು. ಗುಡಿಸಲನ್ನ ಕಂಡ ಕೂಡಲೇ ಅವಳಿಗೆ ಖುಷಿಯಾಯಿತು. ಒಳಗೆ ಯಾರಾದರೂ ಇರಬಹುದು, ಸದ್ಯ ಭಯವಿಲ್ಲ ಎಂದುಕೊಂಡಳು. ಗುಡಿಸಲನ್ನು ತಲುಪುವ ವೇಳೆಗಾಗಲೇ. ಸುಮಾರು ಹೊತ್ತಾಗಿತ್ತು, ಬಾಗಿಲು ತಟ್ಟುವ ಬದಲು, ಬಾಗಿಲ ಸಂದಿಯಿಂದ ಒಳಗೆ ಹಣಿಕಿದಳು.ಒಳಗಿನ ದೃಶ್ಯ ಕಂಡು ಅವಳ ಜಂಘಾಬಲವೇ ಕುಸಿದುಹೋದಂತಾಯಿತು. ಗಂಟಲೊಣಗತೊಡಗಿತು. ಮಾತಾಡಲಿಕ್ಕೂ, ಬಾಗಿಲನ್ನು ತಟ್ಟುವುದಕ್ಕೂ ಧೈರ್ಯ ಸಾಲದೆ, ಮೂಕ ವಿಸ್ಮಿತಳಾಗಿ ಒಳಗಿನ ದೃಶ್ಯವನ್ನು ವೀಕ್ಷಿಸಲಾರಂಭಿಸಿದಳು.

ಆ ಗುಡಿಸಿಲಿನಲ್ಲಿ ಒಬ್ಬಳು ಮುದುಕಿ ವಾಸವಾಗಿದ್ದಳು. ಹಣ್ಣು ಮುದುಕಿಯಾದರೂ, ಬೆನ್ನುಬಾಗಿರದೆ, ಕಣ್ಣು ಮಂಜಾಗದೆ ಆರೋಗ್ಯವಾಗಿದ್ದಳು. ಅವಳ ದೇಹ ವಿಚಿತ್ರ ರೀತಿಯದಾಗಿತ್ತು. ತಕ್ಷಣ ನೋಡಿದರೆ ಹೆದರಿಕೆಯೂ ಉಂಟಾಗುತ್ತಿತು. ಪೂರ್ವಜರಿಂದ ಪಡೆದಿದ್ದ ವಜ್ರದಉಂಗುರವನ್ನು ಈಕೆಯ ಅಣ್ಣಂದಿರು ಕಸಿದುಕೊಂಡು, ಈಕೆಯನ್ನು ಓಡಿಸಿದ್ದರು. ಅಂದಿನಿಂದ ಆ ಮುದುಕಿ ಉಂಗುರವನ್ನು ಮತ್ತೆ ಪಡೆಯಲು ದುರ್ಗಿಯನ್ನು ಒಲಿಸಿಕೊಳ್ಳುವ ಪ್ರಯತ್ನದಲ್ಲಿದ್ದಳು. ಅಂತೆಯೇ ಅಂದೂ ಸಹ ದುರ್ಗಿ ವಿಗ್ರಹದ ಮುಂದೆ ವಿಕಾರವಾಗಿ ಹಾಡುತ್ತಾ ಕೂಗುತ್ತಾ, ಹೇಗೆಹೇಗೋ ಕುಣಿಯುತ್ತಿದ್ದಳು. ಅವಳ ಕತ್ತಿನಲ್ಲಿ ದಪ್ಪದಪ್ಪ ಕವಡೆ ಸರಗಳು ನೇತಾಡುತ್ತಿದ್ದವು. ನಾಯಿಯ ತಲೆಬುರುಡೆಗಳನ್ನು ಮಾಲೆ ಮಾಡಿ ಹಾಕಿಕೊಂಡಿದ್ದಳು. ಹಣೆಯ ತುಂಬ ಕುಂಕುಮವನ್ನಿಟ್ಟುಕೊಂಡಿದ್ದಳು.

ಯಾವುದೋ ಕೆಲಸದ ಮೇಲೆ ಬಾಗಿಲು ತೆಗೆದ ಮುದುಕಿಗೆ ಗರಬಡಿದವಳಂತೆ ನಿಂತಿದ್ದ ನಿಮ್ಮಿಯನ್ನು ಕಂಡು ಅಚ್ಚರಿಯಾದರೂ, ತಾನು ಮಾಡಬೇಕೆಂದುಕೊಂಡಿದ್ದ ಕೆಲಸವನ್ನು ಅವಳಿಂದ ಮಾಡಿಸಿಕೊಳ್ಳಬಹುದೆಂದು ತೋರಿದ್ದರಿಂದ ಆನಂದವೂ ಆಯಿತು. ತನ್ನನ್ನು ಕಂಡು ಕಂಪಿಸುತ್ತಿದ್ದ ನಿಮ್ಮಿಯ ಪರಿಸ್ಥಿತಿಯ ಅರಿವಾಗಿ, ಅವಳನ್ನ ಪ್ರೀತಿಯಿಂದ ಮಾತನಾಡಿಸಿ, ಸಮಾಧಾನಗೊಳಿಸಲಾರಂಭಿಸಿದಳು. ಆಕೆಯ ಧ್ವನಿ ಕರ್ಕಶವಾಗಿದ್ದರೂ, ಅವಳ ನಂಬಿಕೆಯುಳ್ಳ ಮಾತುಗಳಿಂದ ನಿಮ್ಮಿ ಪುಳಕಗೊಂಡಳು. ನಿಮ್ಮಿಯನ್ನು ಉಪಚರಿಸಿದ ಆ ಮುದುಕಿ ತನ್ನ ದುರದೃಷ್ಟ ಕತೆಯನ್ನು ಹೇಳಿ, ವಜ್ರದಉಂಗುರ ದೊರೆತರೆ ತನ್ನ ಕಷ್ಟ ಪರಿಹಾರವಾಗುವುದೆಂದು ಜೊತೆಗೆ ನಿಮ್ಮಿಯ ಕಷ್ಟಗಳನ್ನು ಪರಿಹರಿಸುವುದಾಗಿ ಹೇಳಿದಳು. ಮುದುಕಿಯ ಮಾತುಗಳಿಗೆ ಬೆರಗಾದ ನಿಮ್ಮಿ, ವಜ್ರದಉಂಗುರವನ್ನು ತರಲು ತನಗೆ ಸಾಧ್ಯವಾದರೆ, ಉಪಾಯವಾಗಿ ತಂದುಕೊಂಡುವುದಾಗಿ ಹೇಳಿದಳು, ಅದಕ್ಕೆ ಆ ಮುದುಕಿ ಅವಳ ಮುಖ ನೋಡೇ ಅದನ್ನು ತರಲು ಸಾಧ್ಯವಾಗಬಲ್ಲದು ಎನಿಸಿತ್ತೆಂದು ಹೇಳಿ, ಅಲ್ಲಿಗೆ ಹೋಗುವ ದಾರಿ ಮತ್ತು ಅಲ್ಲಿನ ಇನ್ನಿತರ ರಹಸ್ಯಗಳನ್ನು ಹೇಳಿ ಕೊಟ್ಟಳು. ವಾಪಾಸ್ಸು ಬರುವುದು ಹದಿನೈದು ದಿನಗಳಾದರೂ ಆಗಬಹುದೆಂದಳು.

ಮಾರನೇ ಬೆಳಗ್ಗೆ ನಿಮ್ಮಿ ಪ್ರಯಾಣಕ್ಕೆ ಸಿದ್ದಳಾದಾಗ, ದಾರಿಯಲ್ಲಿ ಅವಳ ಹಸಿವೆಯನ್ನು ನೀಗಲು 20 ಗೋಲಿಗಳಂತಿದ್ದ ಪದಾರ್ಥಗಳನ್ನು ಕೊಟ್ಟಳು, ಜೊತೆಗೆ ಒಂದು ಮಂತ್ರದ ಕೋಲನ್ನು ಕೊಟ್ಟಳು. ಆ ಕೊಲನ್ನು ಮೊದಲು ಸಿಗುವ ತನ್ನಣ್ಣನಿಗೆ ಮುಟ್ಟಿಸಿದರೆ, ಆತ ಪ್ರಜ್ಞಾಹೀನನಾಗುತ್ತಾನೆಂದು ಹೇಳಿ ಉಳಿದ ರಹಸ್ಯಗಳನ್ನು ಮತ್ತೊಮ್ಮೆ ನೆನಪಿಸಿ, ಅವಳ ಪಯಣದ ಹಾದಿ

ಸುಗಮವಾಗಲು ಒಂದು ಮಂತ್ರವನ್ನು ಹೇಳಿಕೊಟ್ಟು ನಿಮ್ಮಿಯನ್ನು ಬೀಳ್ಕೊಟ್ಟಳು.

ಇಬ್ಬರು ದೈತ್ಯರಿರುವ ಆ ಬೃಹದಾಕಾರದ ಬೆಟ್ಟವನ್ನು ಮಂತ್ರದ ಸಹಾಯದಿಂದ ನಿಮ್ಮಿಯಾವ ಅಡತಡೆಯೂ ಇಲ್ಲದಂತೆ ತಲುಪಿದಳು. ಮೊದಲ ದೈತ್ಯಾಕಾರದ ಮುದುಕ ನಿಮ್ಮಿಯನ್ನು ನೋಡಿದ ತಕ್ಷಣ ಮುದುಕಿ ಹೇಳಿದಂತೆಯೇ ಸುಂದರ ತರುಣನ್ನಾಗಿ, ಇವಳನ್ನು ಸೆರೆಹಿಡಿಯಲು ಬರಲಾರಂಭಿಸಿದ. ಮೊದಲೇ ಇದನ್ನು ತಿಳಿದಿದ್ದ ನಿಮ್ಮಿ ಅವನು ಹತ್ತಿರ ಬಂದಾಗ, ಏನೂ ಅರಿಯದವಳಂತೆ, ಅಳುತ್ತಾ ನಂತರ ನಿನ್ನ ಬಟ್ಟೆ ಎಷ್ಟು ಚೆನ್ನಾಗಿದೆ ಎಂದು ಕೋಲಿನಿಂದ ಅವನನ್ನು ಸವರಿದಳು. ತಕ್ಷಣ ಅವನು ಪ್ರಜ್ಞಾಹೀನನಾಗಿ ಅಲ್ಲಿಯೇ ಕುಸಿದನು. ನಂತರ ಎಚ್ಚರಿಕೆಯಿಂದ ಮುಂದುವರಿದಳು, ಮುಂದೆ ಕೊಳವೆಯಂತಿದ್ದ ಬಂಡೆಯ ಮೂಲಕ ಒಳಗೆ ಹೋದಳು. ಅದೊಂದು ಸುಂದರ ಉದ್ಯಾನವನದಂತಿತ್ತು. ತರಾವರಿ ಹೂಗಿಡಗಳು. ಪುಟ್ಟಕೊಳ, ಅದರ ಹತ್ತಿರವೇ ಒಂದು ದೊಡ್ಡ ಮರ, ಎಲ್ಲವೂ ಕಣ್ಣಿಗೆ ಹಬ್ಬವನ್ನುಂಟುಮಾಡುವಂತಿದ್ದವು. ಮುದುಕಿ ಹೇಳಿದಂತೆ ಮರದ ಮೇಲೆ ಯಾವ ಪಕ್ಷಿಯೂ ಇರಲಿಲ್ಲ. ಅದು ಎಲ್ಲಿಯೋ ಹೋಗಿರಬಹುದೆಂದು ಅದರ ಬರುವಿಗಾಗಿ ಕಾದು ಕುಳಿತಳು. ಸ್ವಲ್ಪ ಸಮಯದ ನಂತರ ಮುದ್ದಾದ ಪುಟ್ಟಗಿಣಿಯೊಂದು ಹಾರಿ ಬಂದಿತು. ಇವಳನ್ನು ಕಂಡು ಅಚ್ಚರಿಗೊಂಡು, ಇಷ್ಟು ಒಳಗೆ ಬರಬೇಕಾದರೆ ನಮಗೆ ಬೇಕಾದವರೇ ಇರಬೇಕೆಂದುಕೊಂಡು ಅವಳ ಸಮೀಪ ಬಂದಿತು. ನಿಮ್ಮಿ ಆ ಗಿಣಿಯನ್ನು ಹೊಗಳುತ್ತಾ, "ನಿನ್ನ ಕೊಕ್ಕು ಎಷ್ಟು ಚಂದ, ಒಂದೇ ಬಾರಿ ನಿನ್ನ ಮೈ ಸವರುತ್ತೇನೆಂದು ಹೇಳಿ ಅದನ್ನು ಕೈಗೆ ಎತ್ತಿಕೊಂಡು ಮೈಸವರುವಂತೆ ಮಾಡಿ, ಅದರ ಕಾಲನ್ನು ಮುರಿದಳು. ಮತ್ತೊಂದನ್ನೂ ತಕ್ಷಣದಲ್ಲಿಯೇ ಮುರಿದುಬಿಟ್ಟಳು; ಮಂತ್ರದ ಕೋಲಿನಿಂದ ಒಮ್ಮೆ ಅದಕ್ಕೆ ಬಡಿದಳು. ಗಿಣಿ ಸತ್ತು ಬಿತ್ತು. ಅದರ ಜೊತೆ ಎರಡನೇ ದೈತ್ಯನೂ ಸಹ.

ಗಾಢ ನಿದ್ದೆಯಲ್ಲಿದ್ದ ಅವನಿಗೆ ಕಾಲು ಮುರಿದಾಗ ಭಯಂಕರ ನೋವಾಗಿ ಎದ್ದನು. ತಕ್ಷಣವೇ ಮತ್ತೊಂದೂ ಮುರಿದಿದ್ದರಿಂದ ಹಾಗೆಯೇ ಕುಸಿದನು. ತನ್ನ ಸಾವು ಸಮೀಪಿಸುತ್ತಿರುವುದರ ಅರಿವಾಗಿ ನಡುಗಿದನು. ಗಿಣಿಗೆ ಮಂತ್ರದ ಕೋಲಿನಿಂದ ಹೊಡೆದಾಗ, ಅವನ ಪ್ರಾಣಪಕ್ಷಿಯೂ ಹಾರಿಹೋಗಿ ನೆಲಕ್ಕೆ ಉರುಳಿದನು. ನಿಮ್ಮಿ ಅಡ್ಡಾದಿಡ್ಡಿ ಸತ್ತುಬಿದ್ದಿದ್ದ ಆ ದೈತ್ಯನನ್ನ ನೋಡಿ ಭಯಗೊಂಡು ಅಲ್ಲಿಯೇ ಇದ್ದ ಮೆಟ್ಟಲುಗಳಿಂದ ನೆಲಮಾಳಿಗೆಯ ಕಡೆಗೆ ಇಳಿಯಲಾರಂಭಿಸಿದಳು. ಒಳಗಡೆ ಹತ್ತು, ಹೊಳೆಯುವ ಕಲ್ಲಗಳಿಂದ ಮಾಡಿದ್ದ ಬಿಂದಿಗೆಗಳಿದ್ದವು. ಅವು ಪಳಪಳನೆ ಹೊಳೆಯುತ್ತಾ, ಕಣ್ಣು ಕೋರೈಸುತಿತ್ತು. ಎಲ್ಲಾ ಬಿಂದಿಗಳಲ್ಲೂ ದುರ್ಗಿ ಮುಖದ ಗುರುತಿನ ಉಂಗುರಗಳಿದ್ದವು. ಅವುಗಳನ್ನೆಲ್ಲಾ ಒಟ್ಟಿಗೆ ಸುರಿದಾಗ ರಾಶಿಯಾಯಿತು. ನಿಮ್ಮಿಗೆ ಅದನ್ನು ಕಂಡು ಯಾವುದೋ ವಿಚಿತ್ರ ಲೋಕದಲ್ಲಿರುವ ಹಾಗೆ ಭಾಸವಾಗಿ ಒಂದು ಕ್ಷಣ ಮೈಮರೆತಳು. ನಂತರ ಎಚ್ಚೆತ್ತು, ವಜ್ರದಉಂಗುರವನ್ನು ಹುಡುಕಿಲಾರಂಭಿಸಿದಳು. ಪಳಪಳನೆ ಹೊಳೆಯುವ ಅದನ್ನು ಹುಡುಕಲು ಕಷ್ಟವಾಗಲಿಲ್ಲ. ಮತ್ತೇನನ್ನು ಮುಟ್ಟದೆ ಆ ಉಂಗುರವನ್ನು ಮಾತ್ರ ತೆಗೆದುಕೊಂಡು, ಮಂತ್ರದ ಸಹಾಯದಿಂದ ವಾಪಾಸಾದಳು.

ನಿಮ್ಮಿಯ ಬರುವಿಕೆಗಾಗಿ ಕಾದಿದ್ದ ಮುದುಕಿ ಅವಳನ್ನು ಕಂಡು ಹರ್ಷಚಿತ್ತಳಾದಳು, ಅವಳಿಗೆ ಉಪಚರಿಸಿ, ಉಂಗುರವನ್ನು ಪಡೆದುಕೊಂಡು, ಅವಳಿಗಿಷ್ಟವಾಗುವ ಏನಾದರೊಂದನ್ನು ಕೇಳಿಕೋ ಎಂದಳು. ನಿಮ್ಮಿಗೆ ಆಗ ಒಮ್ಮೆಲೆ ತಂದೆ–ತಾಯಿ ನೆನ್ನಪಾಯಿತು. ಪುಟ್ಟ ತಂಗಿಯರು ಊಟಕ್ಕಾಗಿ ಅವರನ್ನು ಪೀಡಿಸುತ್ತಿದ ದೃಶ್ಯ ತೇಲಿ ಬಂತು. ಇಷ್ಟು ದಿನ ಅವಳು ಅದನ್ನೆಲ್ಲಮರೆತೇಬಿಟ್ಟಿದ್ದಳು. ಈಗ ಅದೆಲ್ಲ ನೆನಪಾಗಿ, ತಮಗೆ ಎಂದೂ ಊಟ ಮತ್ತು ಬಟ್ಟೆಗೆ ಕೊರತೆಯಾಗದಂತಾದರೆ ಸಾಕೆಂದು ಮುದುಕಿಯಲ್ಲಿ ಕೇಳಿಕೊಂಡಳು. ಮುದುಕಿಗೆ ಅವಳ ಮುಂದಾಲೋಚನೆಯಿಂದ ಆನಂದವಾಗಿ ಅದರಂತೆಯೇ ಆಗುವುದಾಗಿ ಹರಸಿ, ಅವಳಿಗೆ ಅವಳ ಮನೆಯ ದಾರಿ ತೋರಿಸಿದಳು.

ನಿಮ್ಮಿ ಯಾವುದೋ ಕಾಡುಪ್ರಾಣಿಗೆ ಬಲಿಯಾದಳೆಂದು ತಿಳಿದಿದ್ದ ಅವಳ ತಾಯಿ–ತಂದೆಯರಿಗೆ ಅವಳ ಅನಿರೀಕ್ಷಿತ, ಆಕಸ್ಮಿಕ ಆಗಮನದಿಂದ ಅಪಾರ ಆನಂದವಾಯಿತು. ನಿಮ್ಮಿ ಮನೆಗೆ ಕಾಲಿಟ್ಟ ಕೂಡಲೇ ಮನೆಯ ವಾತಾವರಣ ಬದಲಾಯಿತು. ಗುಡಿಸಲು ಮಾಯವಾಗಿ, ದೊಡ್ಡ ಮನೆಯಾಯಿತು. ಮನೆ ಆಹಾರ ಧಾನ್ಯಗಳಿಂದ ಸಮೃದ್ಧಿಗೊಂಡಿತು. ತಂದೆ, ತಾಯಿ, ಪುಟ್ಟ ತಂಗಿಯರಿಗೆ ನಿಮ್ಮಿಯ ಆಗಮನ ಒಂದು ಪವಾಡವೇ ಆಯಿತು. ಅವರೆಲ್ಲ ಆನಂದದಲ್ಲಿ ತೇಲಿಹೋದರು. ನಿಮ್ಮಿ ಆ ದಿನವೆಲ್ಲಾ ತನ್ನ ರೋಚಕ ಅನುಭವಗಳನ್ನು ಮನೆಯವರೊಂದಿಗೆ ಹಂಚಿಕೊಳ್ಳುತ್ತಾ ವಿಚಿತ್ರ ರೀತಿಯ ಸಂಭ್ರಮದಲ್ಲಿ ಮುಳುಗಿದ್ದಳು.

–ಮಂದಾಕಿನಿ

"ಓದುಗರ ವಿಭಾಗ"

ಪ್ರಗತಿಪರ ಆಲೋಚನೆ, ಚಟುವಟಿಕೆಗಳಿಗೆ ಪೂರಕವಾಗಬೇಕೆಂಬ ಅಭಿಲಾಷೆಯಿಂದ ಹೊರ ಬರುತ್ತಿರುವ 'ಮಾನವಿ'ಗೆ ನನ್ನೆಲ್ಲಾ ಸಹಕಾರ, ಸಹಾಯ ಪ್ರೋತ್ಸಾಹ ಇದ್ದೇ ಇದೆ.

—ಸುಧೀಂದ್ರ ಕಲ್ಲೋಳ
ಬೆಂಗಳೂರು

ಹೊಸ ಪತ್ರಿಕೆ "ಮಾನವಿ"ಯನ್ನು ಸ್ವಾಗತಿಸುತ್ತಾ ಅವಳು ಜಯಭೇರಿ ಭಾರಿಸುತ್ತಾ ಮುನ್ನಡೆಯಲೆಂದು ಹರಸುತ್ತೇನೆ. ಆರಕ್ಕೆ ಹಿಗ್ಗದೆ, ಮೂರಕ್ಕೆ ಕುಗ್ಗದೆ ಮಾನವಿ ಮುನ್ನಡೆಯಲಿ. ತಮ್ಮ ಪ್ರಯತ್ನಕ್ಕೆ ನನ್ನ ಬೆಂಬಲ ಉಂಟೇ ಉಂಟು.

—ಎ. ಎಲ್. ಚಂದ್ರಮತಿ
ಶಿವಮೊಗ್ಗ

'ಮಾನವಿ'ಯ ಹೆಜ್ಜೆ ಮಹಿಳೆಯರಿಗೆ ಹೊಸ ಹಾದಿ ತೋರುವಲ್ಲಿ ಯಶಸ್ವಿಯಾಗಲಿ.

—ಶಾಂಭವಿ

"ಮಾನವಿ" ಹೆಸರು ಮಹಿಳಾ ಪತ್ರಿಕೆಯಾದ್ದರಿಂದ ಸರಿ ಹೊಂದುತ್ತದೆ. ಇದರ ಉದ್ದೇಶ ಆರೋಗ್ಯಕರವಾಗಿದೆ 'ಮಾನವಿ' ಎಂದೆಂದೂ ಮಾನವೀಯತೆಯಿಂದ ಬೆಳೆಯಲಿ ಎಂದು ಹಾರೈಸುತ್ತೇನೆ. "ವಿಷವರ್ತುಲದಲ್ಲಿ ಮರೆಯಾದ ಸಿಸಿಲಿಯಮ್ಮ" ಕವನವು ಲೇಖನಕ್ಕಿಂತಲೂ ಹೆಚ್ಚು ಅರ್ಥಪೂರ್ಣವಾಗಿ ಓದುಗರ ಮನ-ವನ್ನು ಕರಗಿಸುತ್ತದೆ.

—ಶ್ರೀಧರ ಖಟಾವಕರ
ಧಾರವಾಡ

"ಮಾನವಿ"ಯ ಮೊದಲ ಸಂಚಿಕೆ ಚೆನ್ನಾಗಿ ಮೂಡಿ ಬಂದಿದೆ.

ಮಂಜುನಾಥ
ಬೇಲೂರು

'ಮಾನವಿ'ಯ ಮುಖ ಪುಟ ಹಾಗೂ ಲೇಖನಗಳು ಸೊಗಸಾಗಿವೆ. ಮಾನವಿಯ ಉದ್ದೇಶ ಕೇವಲ ಪೋಷಣೆಯಾಗದೆ, ನೊಂದ ಮಹಿಳೆಯರ ಮಾನಸಿಕ ನೆಮ್ಮದಿಯ ಬಗ್ಗೆ ತುಡಿಯುವಂತಿರಲಿ.

—ಬ್ಯಾ. ಮು. ಲಕ್ಷ್ಮಣ್ ತೇಜಸ್ವಿ
ಸಕಲೇಶಪುರ

ಮಹಿಳೆಯರ ಮೇಲೆ ಅವ್ಯಾಹತವಾಗಿ ನಡೆಯುತ್ತಿರುವ ದೌರ್ಜನ್ಯವನ್ನು ತೊರೆದುಹಾಕಲು ಮಹಿಳೆಯರೇ ಸೇರಿ ನಡೆಸುತ್ತಿರುವ "ಮಾನವಿ"ಯನ್ನು ನೋಡಿ ನನಗೆ ಸಂತೋಷವಾಯಿತು. ನಿಮ್ಮ ಪತ್ರಿಕೆಯ ಮುಂದುವರಿಯುವಲ್ಲಿ ನನ್ನ ಕೈಲಾದಷ್ಟು ಸಹಾಯ ನೀಡುತ್ತೇನೆ.

—ಪ್ರೇಮಾನಂದ ಕಾಮತ್
ಹಾಲಾಡಿ

'ಮಾನವಿ' ಮೊದಲನೆ ಸಂಚಿಕೆಯಲ್ಲೇ ಮುಂದೆ ಸ್ಥಿರವಾಗಿ ನಿಲ್ಲುವಂತೆ ತೋರುತ್ತಾಳೆ. ಲೇಖನಗಳು, ಕವನಗಳು ಚೆನ್ನಾಗಿ ಮೂಡಿಬಂದಿವೆ.

—ಗೊರೂರು ಪರಮೇಶ್
ಮೈಸೂರು

ನೊಂದ ಬದುಕುಗಳಲ್ಲಿ ಚೈತನ್ಯದ ಚಿಲುಮೆ ಉಕ್ಕಿಸುವ "ಮಾನವಿ"ಯ ಪ್ರಯತ್ನಕ್ಕೆ ನನ್ನ ಕ್ರಿಯಾತ್ಮಕ ಬೆಂಬಲ ಸರ್ವದಾ ಇದೆ.

—ಭಾಗೀರಥಿ ಹೆಗಡೆ
ಸಿರ್ಸಿ

ಉತ್ತಮ ಪತ್ರಿಕೆ ಹೊರತರುತ್ತಾ ಇದ್ದೀರಿ ನಿಮ್ಮ ಸಾಹಸ ಧೈರ್ಯಕ್ಕೆ ಬಹಳ ಮೆಚ್ಚಿದೆ.

ಎಚ್. ಮಂಜುಳಾ
ಹರಿಹರ

ದಿನಂಪ್ರತಿ ನಡೆಯುತ್ತಿರುವ ಸ್ತ್ರೀ ಶೋಷಣೆಯ ವಿರುದ್ಧ ನಿಮಗಿರುವ ಆಸ್ಥೆ, ಕಳಕಳಿ ಶ್ಲಾಘನೀಯ. ನಿಮ್ಮ ಈ ಪ್ರಯತ್ನಕ್ಕೆ ನನ್ನ ಬೆಂಬಲವಿದೆ.

—ಎನ್ನಾರ್. ವಾಸುದೇವರಾವ್
ಶಿವಮೊಗ್ಗ

ನಿಮ್ಮ ಸಾಹಸಕ್ಕೆ ನನ್ನ ಸಹಕಾರ ಹಾಗೂ ಪ್ರೋತ್ಸಾಹವಿದೆ. ಶೋಷಣೆಯ ಬಗ್ಗೆ ಬರಿ ವೇದಿಕೆಯ ಮೇಲೆ ಬಡಾಯಿ ಕೊಚ್ಚುವವರು ಇಂತಹ ಕೆಲಸ

ಮಾಡಿದರೆ ಮುಂದಾದರೂ ಹೆಣ್ಣಿನ ಶೋಷಣೆಯು ಗತಿ ತುಂಬಾ ಇಳಿಯಬಹುದು.

—ಕೋಣೆ ನಾಗರಾಜ್
ತಿಪಟೂರು

ಒಳ್ಳೆಯ ಕೆಲಸ ಮಾಡುತ್ತಿದ್ದೀರಿ ಯಶಸ್ಸು ಲಭಿಸಲಿ ಎಂದು ಹಾರೈಸುವೆ. ಹೆಣ್ಣು ಇನ್ನಷ್ಟು ಸ್ವಾಭಿಮಾನ ದಿಂದ, ಆತ್ಮ ವಿಶ್ವಾಸದಿಂದ ಬಾಳಲು ''ಮಾನವಿ'' ಉತ್ತೇಜನ ನೀಡಲಿ.

—ಮಾಲಾ ಮಂಜುನಾಥ್
ಬೆಂಗಳೂರು

ಆಕರ್ಷಕವಾಗಿ ಮೂಡಿ ಬಂದಿರುವ ಮಾನವಿಗೆ ಆದರದ ಸುಸ್ವಾಗತ ಮತ್ತು ಹಾರ್ದಿಕ ಶುಭಾಷಯಗಳು. ನಿಮ್ಮ ಪತ್ರಿಕೆ ಕನ್ನಡ ನಾಡಿನ ಮೂಲೆ ಮೂಲೆಗಳನ್ನು ಮುಟ್ಟಲಿ. ಕನ್ನಡ ಮಹಿಳೆಯರ ಹೃದಯದ ಕೂಗನ್ನು ಪ್ರತಿಧ್ವನಿಸಲಿ ಎಂದು ಹಾರೈಸುವೆ.

—ಸುಮನಾ ಬದರೀನಾಥ್
ಬೆಂಗಳೂರು

'ಮಾನವಿ' ಎಂಬ ಹೊಸ ಹೆಸರಿನ ಪತ್ರಿಕೆ ತರಲು ಯೋಚಿಸಿದ್ದು ಸ್ವಾಗತಾರ್ಹ. ಹೊಸ ಸಾಹಸಕ್ಕೆ ಕೈ ಹಾಕಿದ 'ಮಾನವಿ' ಸಂಪಾದಕೀಯ ಮಂಡಳಿಗೆ ಶುಭಾಶಯಗಳು.

—ಸಿ. ವಿ. ಪಾಟೀಲ
ಹರಿಹರ

'ಮಾನವಿ' ಪರಿಚಯ ಮಾಡಿಕೊಟ್ಟಿದ್ದಕ್ಕೆ ಧನ್ಯವಾದ ಗಳು ಇಂಥ ಪತ್ರಿಕೆಯೊಂದರ ಅಗತ್ಯ ಹಿಂದಿಗಿಂತ ಇಂದು ತೀರಾ ಅಗತ್ಯವಾಗಿದೆ ಎಂದು ಹೇಳಿದರೆ ಕ್ಲೀಷೆಯಾಗಿ ಭಾವಿಸಬೇಡಿ

ಜಿ ಮುಕ್ತ
ಚಿಕ್ಕಮಲ್ಲನ ಹೊಳೆ

ತಮ್ಮ ಪ್ರಯತ್ನಕ್ಕೆ ನನ್ನ ಬೆಂಬಲವಿದೆ. ತಲೆ ತಲಾಂತರಗಳಿಂದ ಮಹಿಳೆ ಒಂದಲ್ಲ ಒಂದು ರೀತಿಯಿಂದ ಶೋಷಣೆಗೆ ಒಳಗಾಗುತ್ತಿರುವ ಅಂಶ ನಿಮ್ಮ ಗಮನಕ್ಕೆ ಸದಾ ಬಂದಿರುತ್ತದೆ. ಈ ಪ್ರವೃತ್ತಿ ಕೊನೆಗಾಣಲೇ ಬೇಕು. ಮಹಿಳೆಗೂ ಸಮಾನ ಅವಕಾಶಗಳು ಸಮಾಜ ದಲ್ಲಿ ನಿರ್ಮಿಸಬೇಕು. ಬದಲಾವಣೆ ಅತ್ಯಗತ್ಯವಾಗಿದೆ. ಈ ದಿಸೆಯಲ್ಲಿ ಪತ್ರಿಕೆಗಳು, ಯಾ ಪ್ರಚಾರ ಮಾಧ್ಯಮ ಗಳು ಬೇಕೆ ಬೇಕು. ನಿಮ್ಮ ಪತ್ರಿಕೆ ಯಶಸ್ವಿಯಾಗಿ ಬರಲೆಂದು ಹಾರೈಸುತ್ತೇನೆ.

—ಕಲಬಿ ಶ್ರೀನಿವಾಸ್
ಚಿಕ್ಕಮಗಳೂರು

''ಮಾನವಿ'' ಮೊದಲ ಸಂಚಿಕೆಯು ಭರವಸೆ ಹುಟ್ಟಿ ಸುವಂತಿದೆ. ಜಾನ್ ಸ್ಟುವರ್ಟ್ ಮಿಲ್‌ನನ್ನು ಪರಿಚಯಿ ಸುವ, ಆತನ ವಿಚಾರಧಾರೆಯನ್ನು ಪ್ರಸ್ತುತ ಪಡಿಸುವ ಲೇಖನ ಪ್ರಸ್ತುತವೆನಿಸುತ್ತದೆ. ಅಂತೆಯೇ ಅಪರ್ಣಾ ಸೇನಳ ಆತ್ಮ ವಿಶ್ವಾಸದಿಂದ ಕೂಡಿದ ನುಡಿಗಳು ಮಹಿಳೆ ಯರಿಗೆ ಸ್ಫೂರ್ತಿದಾಯಕವಾಗಬಲ್ಲವು. "ಸಂವೇದನೆ"ಯ ಅಪರಿಚಿತಳ ಮಾತುಗಳು "ನೀವು ಹೀಗೆ ಹೆದರ್‍ತಾ ಇದ್ರೆ, ವಾಸ್ತವಕ್ಕೆ ಹತ್ತಿರವಾಗಿವೆ. ಛಾಯಾ ಚಿತ್ರಗಳು ಸರಿಯಾಗಿ ಮುದ್ರಿತವಾಗಿಲ್ಲ. ಅವುಗಳಿಗೆ ಖರ್ಚು ಮಾಡುವ ಬದಲು ರೇಖಾ ಚಿತ್ರಗಳನ್ನೇ ಬಳಸಿದರೆ ಆಗದೆ ?" ಸುದ್ದಿ ಸಂಕಲನ ಅಂಕಣ ಉಪಯುಕ್ತ 'ಮಾನವಿ'. ನನ್ನ ಸಹಕಾರ ಇದ್ದೇ ಇರುತ್ತದೆ.

—ಕೆ. ಪಿ. ಸತ್ಯನಾರಾಯಣ
ಚಿಕ್ಕಮಗಳೂರು

ಬೇಕಾಗಿದ್ದಾರೆ

ನೆಲದ ಮಣ್ಣೊಳಗೆ ಭದ್ರವಾಗಿ ಕಾಲೂರುವ
ಶುಭ್ರಮನದ, ವಿಶಾಲ ಹೃದಯದ
ನೀಲಿ ಕಂಗಳ ಹಸಿರು ನುಡಿಯ ಚೆಲುವನೊಬ್ಬ
ತತ್‌ಕ್ಷಣ ಬೇಕಾಗಿದ್ದಾರೆ

ತಂಪು ಪ್ರೇಮದಲಿ ಮಿಂಚುಯಲಿಚ್ಚಿಸುವ
ಸ್ವಚ್ಛ ಜೀವನದ ಪರಿಚಯವಿರುವ
ಸರಳ ಸುಂದರ ಮುಗ್ಧರಿದ್ದರೆ
ಕಪ್ಪು ಚರ್ಮದ ಬಿಳಿಯ ಮನಸಿನ
ಹುಡುಗಿಗೆ ಈ ಕೂಡಲೇ ಬೇಕಾಗಿದ್ದಾರೆ

ಅರ್ಥ, ಸ್ವಾರ್ಥದ ಸೋಂಕಿಲ್ಲದ
ಬಾನಗಲ ಆಸೆಗಳ ಹೊತ್ತಿರುವ ಪ್ರೀತಿ
ಸಾಕಾರದ ದಿಟ್ಟ ಕುವರಿಗೆ
ಗಂಡೆದೆಯ ಮಾನವೀಯ ಹುಡುಗ
ನೊಬ್ಬ ತುರ್ತಾಗಿ ಬೇಕಾಗಿದ್ದಾನೆ.

—ಎನ್. ಕುಸುಮ



ಗಾಂಧಿ ದೃಷ್ಟಿಯಲ್ಲಿ ಹೆಣ್ಣು

ಗಾಂಧೀಜಿ ಈ ಯುಗದ ಮಹತ್ವದ ರಾಜಕೀಯ ಚಿಂತಕರು. ಸಮಾಜಿಕ ಆರ್ಥಿಕ, ರಾಜಕೀಯ, ಸಾಮಾಜಿಕ, ಆಲೋಚನೆಗಳ ಜೊತೆಗೆ ವ್ಯಕ್ತಿಗಳನ್ನು ವೈಯಕ್ತಿಕ ನೆಲೆಯಲ್ಲಿ ಪರೀಕ್ಷೆಗೊಡ್ಡುವ ಅಪರೂಪದ ಚಿಂತಕ. ಗಾಂಧೀಜಿಯವರು ಹೆಣ್ಣನ್ನು ನೋಡುವ ದೃಷ್ಟಿ ಕೋನಗಳು ವಿವಾದಾತ್ಮಕ ಹಾಗೂ ಚರ್ಚಾರ್ಹ. ಪ್ರಗತಿ ಪರ ಮತ್ತು ಸಂಪ್ರದಾಯ ದೋರಣೆಗಳೆರಡನ್ನೂ ಒಳಗೊಂಡ ಅವರ ವಿಚಾರಗಳನ್ನು ಈ ಅಂಕಣದಲ್ಲಿ ಸಂಗ್ರಹಿಸಲಾಗಿದೆ.

"ಮಹಿಳೆಯು ಗಂಡಿನ ಜೊತೆಗಾತಿ, ಅವನಿಗೆ ಸಮಾನವಾದ ಮಾನಸಿಕ ಸಾಮರ್ಥ್ಯಗಳ ವರ ಪಡೆದು ಬಂದವಳು. ಗಂಡಿನ ಚಟುವಟಿಕೆಗಳ ಪ್ರತಿ ಆಗು ಹೋಗುಗಳಲ್ಲೂ ಅವಳಿಗೆ ಭಾಗವಹಿಸುವ ಹಕ್ಕಿದೆ. ಅವನಿಗಿರುವಷ್ಟೇ ಅವಳಿಗೂ ಸ್ವಾತಂತ್ರ್ಯ–ಸಮಾನತೆಗಳಿವೆ"

ಮುಂಬಯಿಯ ಭಗಿನಿಸಮಾಜದ ವಾರ್ಷಿಕ ಸಭೆಯಲ್ಲಿ ಮಹಿಳೆಯ ಮರುಹುಟ್ಟನ್ನು ಕುರಿತು ಗಾಂಧೀಜಿ ಹಲವು ಮಾತುಗಳನ್ನಾಡಿದ್ದರು.

ಯಾವುದೇ ಮರುಹುಟ್ಟು, ತನ್ನ ಪೂರ್ವದ ಅವನತಿಯನ್ನೇ ಹಿಂಬಾಲಿಸಿರುತ್ತದೆಯಾದ ಕಾರಣ, ಆ ಅವನತಿ ಹೇಗಾಯಿತು–ಏಕಾಯಿತು ಎಂಬುದನ್ನು ತಿಳಿಯಬೇಕಾಗುತ್ತದೆ.

ನಿಶ್ಯಕ್ತಿ ಅಥವಾ ಅಸಾಮರ್ಥ್ಯ, ಹೆಣ್ಣು–ಗಂಡು–ಇಬ್ಬರಲ್ಲೂ ಸರಿಸಮನಾಗಿದೆ.

ಸಂವಿಧಾನವು ತನ್ನ ಬಹುಪಾಲಿನಲ್ಲಿ ಗಂಡಿನ ಹಸ್ತನೇಯ್ಗೆಯೇ ಆಗಿದೆ. ಗಂಡು ತನ್ನ ಏಳ್ಗೆಯ ಹಾದಿಯಲ್ಲಿ ಯಾವಾಗಲೂ ದಕ್ಷನೂ ವಿದ್ಯಾವಂತನೂ ಆಗಿರುವುದಿಲ್ಲ.

ಪ್ರಾಚೀನ-ಶಾಸ್ತ್ರ-ಶೃತಿ-ಸ್ಮೃತಿಗಳಲ್ಲಿ ಅವಳ ಬಗ್ಗೆ ಸ್ಪಷ್ಟಪಡಿಸಿರುವ ಕ್ರೂರ ಅಭಿಪ್ರಾಯಗಳು, ಅವಳಲ್ಲಿ ಆಳವಾಗಿ ಬೇರೂರಿರುವ, ಹಾಗೂ ಅವಶ್ಯಕ ಗುಣಗಳೆಂಬಂತೆ ವರ್ಣಿಸಿರುವ ವಿಕಾರ ಅವಗುಣಗಳನ್ನು ನಿವಾರಣೆಗೊಳಿಸುವತ್ತ, ಸ್ತ್ರೀ ಜನಾಂಗದ ಮರುಹುಟ್ಟಿನೆಡೆಗಿನ ನಮ್ಮ ಪ್ರಯತ್ನದ ಮುಖ್ಯಭಾಗವು ನಿಯೋಜಿತವಾಗಬೇಕು.

ಈ ಪ್ರಯತ್ನವನ್ನು ಯಾರು ಮಾಡುತ್ತಾರೆ ? ಹೇಗೆ ಮಾಡುತ್ತಾರೆ ?

ಪರಿಸ್ಥಿತಿಯ ಸತ್ಯವನ್ನರಿತ ಸ್ತ್ರೀಯರ ಸಂಖ್ಯೆ ಸಹಜವಾಗಿಯೇ ತುಂಬಾ ಕಡಿಮೆಯಾಗಿರುತ್ತದೆಯಾದ ಕಾರಣ, ಒಬ್ಬ ಸಾಮಾನ್ಯ ಸ್ತ್ರೀ, ಸ್ವಪ್ರಯತ್ನದಿಂದ ಯಾವ ಚಿಕ್ಕ ಕಾರ್ಯವನ್ನೇ ಕೈಗೊಂಡರೂ ಅದನ್ನು ಸಮಾಜವು ಪರಿಗಣಿಸಬೇಕು.

ತನ್ನ ಜನಾಂಗದ ಏಳಿಗೆಗಾಗಿ ಸ್ತ್ರೀಯೊಬ್ಬಳು ನಡೆಸುವ ಪ್ರಥಮ ಪ್ರಯತ್ನ, ಮಹಿಳೆಯರಲ್ಲಿ ಪರಿಸ್ಥಿತಿಯ ಅರಿವನ್ನು ಎಷ್ಟು ಸಾಧ್ಯವೋ ಅಷ್ಟು ಮೂಡಿಸುವಂತಿರಬೇಕು. ವಿದ್ಯಾವಂತ ಮಹಿಳೆಯರೇ ಈ ಕಾರ್ಯವನ್ನು ಮಾಡಬೇಕೆಂದಿಲ್ಲ. ಹಾಗೇನಾದರೂ ತಿಳಿದರೆ, ಮಹಿಳೆಯರು ತಮ್ಮ ಪ್ರಯತ್ನವನ್ನು ಅನಿರ್ದಿಷ್ಟ ಕಾಲದವರೆಗೂ ಮುಂದೂಡಬೇಕಾಗುತ್ತದೆ. ಅಕ್ಷರಾಭ್ಯಾಸದ ಯೋಚನೆಯಲ್ಲೇ ಯಾವ ಹೆಣ್ಣೂ ಪ್ರಯತ್ನವನ್ನು ಕೈಗೊಳ್ಳದೇ ದೀರ್ಘಕಾಲ ಕಾಯಬೇಕಾದ ಅವಶ್ಯಕತೆಯಿಲ್ಲವೆಂಬುದು ನಮ್ಮ ಅನುಭವಕ್ಕೆ ನಿಲುಕಿರುವ ಸತ್ಯ

ಯಾವ ವಿದ್ಯಾಭ್ಯಾಸದ ಗಂಧವೂ ಇಲ್ಲದ ಗೃಹಿಣಿಗೆ, ಮಹಿಳೆಯ ದೈನಂದಿಕ ಬದುಕಿನ ದುರಂತದ ಅರಿವನ್ನು ಮನೆಯಲ್ಲೇ ಮೂಡಿಸಬಹುದು.

ಹೆಣ್ಣು ಗಂಡಿನ ಸಹವರ್ತಿ ಸಮಭಾಗಿ. ಅವನಂತೆಯೇ ಮಾನಸಿಕ ಸಾಮರ್ಥ್ಯವನ್ನು ಹೊಂದಿರುವ ಆಕೆ, ಅವಳ ಚಟುವಟಿಕೆಗಳಲ್ಲಿ ಉನ್ನತ ಸ್ಥಾನಕ್ಕೆ ಪೂರ್ಣಾರ್ಹಳು. ಇದು, ದೈನಂದಿಕ ಜೀವನದ ಒಂದು ಸಾಮಾನ್ಯ ಅಂಶವಾಗಬೇಕೇ ಹೊರತು ವಿದ್ಯಾಭ್ಯಾಸದ ಫಲವೇ ಆಗಬೇಕೆಂಬುದಿಲ್ಲ.

ತನ್ನ ಕ್ರೂರ ಆಚರಣೆ ಮತ್ತು ದುಷ್ಟ ಅಭ್ಯಾಸದ ಬಲದಿಂದಾಗಿ ಭಾರತೀಯ ಗಂಡು ಅವಿದ್ಯಾವಂತನಾದರೂ, ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸುತ್ತಾನೆ. ಅತ್ಯಂತ ತಿಳಿಗೇಡಿಯಾದವನೂ, ನಿಷ್ಪ್ರಯೋಜಕನಾದವನೂ ಹೆಣ್ಣಿನ ವಿರುದ್ಧ ತನ್ನ ಹೆಚ್ಚುಗಾರಿಕೆಯನ್ನು ಮೆರೆಯುತ್ತಾನೆ. ಆದರೆ, ಅದೇ ಅಧಿಕಾರ ಹೆಚ್ಚುಗಾರಿಕೆಗಳನ್ನು ಭಾರತೀಯ ಹೆಣ್ಣು ಎಂದೂ ತನ್ನದಾಗಿಸಿಕೊಂಡಿಲ್ಲ.

ಇಂದು ಮಹಿಳೆಯರ ಹೀನಸ್ಥಿತಿಯಿಂದಾಗಿಯೇ, ನಮ್ಮ ಅನೇಕ ಹೋರಾಟ–ಚಳುವಳಿಗಳು ಅರ್ಧಕ್ಕೇ ನಿಂತುಹೋಗುತ್ತಿವೆ. ಮಹಿಳೆಯರ ದುಃಸ್ಥಿತಿಯಿಂದಾಗಿಯೇ ನಮ್ಮ ಕಾರ್ಯಗಳ ಬಹುಭಾಗ ಸರಿಯಾದ ಫಲಿತಾಂಶವನ್ನು ಪಡೆಯುತ್ತಿಲ್ಲ.

ಕಾಲದಿಂದ ಕಾಲಕ್ಕೆ ನಾನು ಗುರ್ತಿಸುವುದೇನೆಂದರೆ, ಹೆಣ್ಣನ್ನು ತನ್ನ ಕಾಲಡಿಯಲ್ಲಿ ಸಿಲುಕಿಸಿ ತುಳಿಯುವುದಕ್ಕೆ ಗಂಡಿಗೆ ಯಾವ ನೈತಿಕ ಹಕ್ಕೂ ಇಲ್ಲ. ಅವಳನ್ನು ನಿರಕ್ಷರತೆಯ ಆಧಾರದ ಮೇಲೆ ತುಚ್ಛೀಕರಿಸುವುದಕ್ಕೆ ಅವನಿಗೆ ಯಾವ ಅಧಿಕಾರವೂ ಇಲ್ಲ.

ಉತ್ತಮ ಮತ್ತು ಪ್ರಯೋಜಕವಾದ ಕಾರ್ಯ ಹೆಣ್ಣಿನಿಂದ ಓದು–ಬರೆಹ ಇಲ್ಲದೆಯೂ ಸಾಧ್ಯವಾಗುತ್ತದೆಯಾದರೂ, ತನ್ನ ಸಾಮಾನ್ಯ ಹಕ್ಕುಗಳನ್ನು ಎತ್ತಿಹಿಡಿಯಲು ಅವಳಿಗೆ ವಿದ್ಯಾಭ್ಯಾಸ ಅತ್ಯವಶ್ಯಕ. ಹಕ್ಕುಗಳನ್ನು ಉತ್ತಮಗೊಳಿಸಿಕೊಳ್ಳಲು ಮತ್ತು ವಿವಿಧೆಡೆ ವಿಸ್ತರಿಸಲು ಅವಳಿಗೆ ವಿದ್ಯೆ ಅವಶ್ಯಕ. ವಿದ್ಯೆಯಿಲ್ಲದ ಮನುಷ್ಯನಿಗೂ ಪ್ರಾಣಿಗೂ ಯಾವ ವ್ಯತ್ಯಾಸವೂ ಇಲ್ಲದ ಕಾರಣ, ಹೆಣ್ಣಿಗೆ ವಿದ್ಯಾಭ್ಯಾಸ ಅವಶ್ಯಕ.

ಎರಡು ಭಿನ್ನ ವ್ಯಕ್ತಿತ್ವಗಳ ಜೋಡಿಗಳಾದ ಗಂಡು–ಹೆಣ್ಣು, ಬದುಕಿನಲ್ಲಿ ಪರಸ್ಪರ ಅವಶ್ಯರಾಗುತ್ತಾರೆ ; ಸಹಾಯಕರಾಗುತ್ತಾರೆ, ಅನಿವಾರ್ಯರಾಗುತ್ತಾರೆ. ಆದ್ದರಿಂದ, ಅಗಲಿಕೆಯಲ್ಲಿ ಇನ್ನೊಬ್ಬರ ಅಸ್ತಿತ್ವ ಒಂಟಿಯಾಗಿರಲು ಸಾಧ್ಯವಿಲ್ಲ. ಅವರಿಬ್ಬರಲ್ಲಿ, ಯಾರೊಬ್ಬರು ಅವನತಿ ಹೊಂದಿದರೂ, ಅದು ಅವರಿಬ್ಬರ ನಾಶವೂ ಆಗಿರುತ್ತದೆ. ಈ ಸತ್ಯವು ಮಹಿಳೆಯ ವಿದ್ಯಾಭ್ಯಾಸವನ್ನು ಕುರಿತು ಚಿಂತಿಸುವಾಗ ಅತ್ಯವಶ್ಯಕವಾಗಿ ನೆನಪಿನಲ್ಲಿಡಬೇಕಾದ ಅಂಶ.

ಆಂಗ್ಲ ವಿದ್ಯಾಭ್ಯಾಸವನ್ನು ಬಯಸುವ ಯಾವ ಮಹಿಳೆಯಾದರೂ, ಗಂಡಿಗಿರುವ ವಿದ್ಯಾಕೇಂದ್ರಗಳಲ್ಲೇ ವಿದ್ಯಾಭ್ಯಾಸ ಮಾಡಬಹುದು. ಅವಳಿಗಾಗಿರುವ ವಿದ್ಯಾಕೇಂದ್ರಗಳಲ್ಲೇ ಆಂಗ್ಲ ವಿದ್ಯಾಭ್ಯಾಸವೂ ಇರಬೇಕೆಂಬ ಆವಳ ಆಸೆ, ಸಮಾಜದ ಅಸಹಾಯಕತೆಯಿಂದ ಅವಳಿಗೆ ಬಹುಕಾಲದವರೆಗೂ ನಿಲುಕದಿರಬಹುದು. ಆಂಗ್ಲ ವಿದ್ಯಾಭ್ಯಾಸವನ್ನು ಪಡೆಯುವ ಅವಕಾಶ ಗಂಡಿಗಿರುವಷ್ಟೇ ಹೆಣ್ಣಿಗೂ ಬೇಕು. ಅತ್ಯಂತ ಗಾಢವಾದ ಸಾಹಿತ್ಯಾಭಿರುಚಿಯನ್ನು ಹೊಂದಿರುವ ಮಹಿಳೆಯನ್ನು ಅವಳ ಸಾಧ್ಯತೆಯಿಂದ ತಪ್ಪಿಸಲು ಪ್ರಪಂಚದಲ್ಲಿ ಯಾರಿಗೂ ಸಾಧ್ಯವಿಲ್ಲ.

ವಿವಾಹದ ನಂತರ ದೃಷ್ಟಿಗೂ ಬೀಳದೇ ಮಾಯವಾಗುವ ಬಾಲಕಿಯರು ಮತ್ತೆ ಶಾಲೆಕಡೆ ತಿರುಗಿ ನೋಡುವುದಂತೂ ದುರ್ಲಭವಾದ ಮಾತು. ಬಾಲ್ಯದಲ್ಲಿಯೇ ವಿವಾಹ ಜೀವನಕ್ಕೆ ಕಾಲಿಡುವ ಬಾಲೆಯರ ನಂಡಿಯಲಾಗದ ನೆನೆಯಲಾಗದ ಪಾಪವನ್ನು ಮೊದಲೆ ಅರಿತಿರುವ ತಾಯಂದಿರು, ಅವರಿಗೆ ವಿದ್ಯಾಭ್ಯಾಸ ವ್ಯರ್ಥವೆಂದು ಭಾವಿಸುತ್ತಾರೆ. ಆದ ಕಾರಣ, ಬಾಲೆಯರ ಬಾಳು ವಿದ್ಯಾಭ್ಯಾಸದ ಅಭಾವದಿಂದಾಗಿ ಮತ್ತು ವಿರೂಪಗೊಳ್ಳುತ್ತದೆ. ಆ ಪುಟ್ಟಬಾಲೆಯನ್ನು ಪುರುಷ ಕಾಮತೃಪ್ತಿಗೊಂದು ಸಾಧನವನ್ನಾಗಿಕೊಳ್ಳುವನಲ್ಲದೇ ಮತ್ತೇನೂ ಒಳ್ಳೆಯನ್ನು ಚಿಂತಿಸಲಾರ. ಇಂಥ ನತದೃಷ್ಟ ಬಾಲಕಿಯರನ್ನು ರಕ್ಷಿಸುವವರಾರು ?—ಈ ಪ್ರಶ್ನೆಗೆ ಹುಡುಕುವ ಉತ್ತರ ಮಹಿಳೆಯ ಒಂದು ಸಮಸ್ಯೆಗೂ ಸಹ ಪರಿಹಾರವಾಗುತ್ತದೆ.

ಯಾವ ವಿದ್ಯಾಭ್ಯಾಸವೂ, ಪ್ರಪಂಚದ ಅರಿವೂ ಇಲ್ಲದ ಪುಟ್ಟ ಬಾಲಕಿಯನ್ನು ವಿವಾಹವಾಗಿ ಬಾಲ್ಯದಲ್ಲೇ ಕರೆತರುವ ಗಂಡನ್ನು ಬಿಟ್ಟು ಅವಳಿಗೆ ಹತ್ತಿರವಾದ ಸಹಜೀವಿಯ ಪ್ರಪಂಚದಲ್ಲಿ ಮತ್ತಾರೂ ಇಲ್ಲ. ಆದ್ದರಿಂದ ಎಲ್ಲಾ ಕಠಿಣ ಕಾರ್ಯಗಳೂ, ಹೊರ ಪ್ರಪಂಚ ಜ್ಞಾನವನ್ನು ಗಳಿಸುವ ಸಾಧ್ಯತೆ, ಅವಕಾಶಗಳನ್ನು ಬಾಲ್ಯದಿಂದಲೇ ಹೊಂದಿರುವ ಗಂಡಿನಿಂದಲೇ ಕೈಗೊಳ್ಳಬೇಕು.

–ಜಿ. ಕೆ. ಸಾವಿತ್ರಿ

ಸಿನಿಮಾ

ವಿಭಿನ್ನ ದೃಷ್ಟಿಕೋನದ ಚಿತ್ರ "ಅಗ್ನಿಸ್ನಾನ್"

ನಾಯಕನೊಬ್ಬ ಹೆಂಡತಿಯ ಪ್ರೀತಿ, ವಾತ್ಸಲ್ಯ ಆರಾಧನಾ ಭಾವನೆಗಳನ್ನು ಕಾಲಲ್ಲಿ ಒದ್ದು, ಪ್ರೇಯಸಿಯೊಡನೆಯೋ, ಅಥವಾ ವಿಷಯ ಲೋಲುಪ್ತನಾಗಿ ತನ್ನ ದೈಹಿಕ ಕಾಮನೆಗಳ ಸಾಗರದಲ್ಲಿ ಮುಳುಗಿರುವಾಗ ಹೆಂಡತಿ ನಿಟ್ಟುಸಿರು ಗೆರೆಯುತ್ತಾಳೆ. ಉಮ್ಮಳಿಸಿ ಬಂದ ದುಃಖವನ್ನು ಅಡಿಗೆ ಮನೆಯ ಪಾತ್ರೆ ಪಡಗಳೊಂದಿಗೆ ಹಂಚಿಕೊಳ್ಳುತ್ತಾಳೆ. ಹೃದಯ ಬಿರಿಯುವ ನೋವನ್ನು ಇಟ್ಟುಕೊಂಡು ಗಂಡ. ಮಕ್ಕಳು,ಅತ್ತೆ ಮಾವ ಮೈದುನ, ನಾದನಿಯರ ಸೇವೆಯಲ್ಲಿ ಸಂತೃಪ್ತಿಯ ಮುಖಮಡ ಧರಿಸುತ್ತಾಳೆ. ತಾನು ಯಾವದೋ ಜನ್ಮದಲ್ಲಿವೆಸಗಿದ ಪಾಪ, ಕರ್ಮ, ಹಣೆಬರಹ ಮುಂತಾದ ನಂಬಿಕೆಗಳ ಆಸರೆ ಪಡೆಯುತ್ತಾಳೆ.

ಇಂಥಹದೇ ಇನ್ನೊಬ್ಬ ನಾಯಕ ಹೆಂಡತಿ ಸ್ವಾಭಿಮಾನಿ ತನ್ನ ಮೃದುವಾದ ಭಾವನೆಗಳಿಗೆ ಪೆಟ್ಟುಬಿದ್ದಾಗ ಕುಸಿದು ಹೋಗುವಂತಹವಳು. ತನ್ನೆಲ್ಲಾ ನೋವು, ತುಮುಲ, ದ್ವಂದ್ವಗಳನ್ನು ಪ್ರಶ್ನೆಯಾಗಿಸಿ ಕೊಂಡವಳು. ಗಂಡನ ಬಗ್ಗೆ ಅಸಹನೆ ತೋರಿದರೂ, ಅವನ ಮೆಚ್ಚಿಗೆ ಗಳಿಸಿಕೊಳ್ಳುವ ಹಂಬಲದಲ್ಲಿಯೇ ದಿನದೂಕುವವಳು. ತನ್ನ ಗಂಡನನ್ನು ತನ್ನಿಂದ ಕಿತ್ತುಕೊಂಡ, ತನ್ನ ಸಂಸಾರದಲ್ಲಿ ಹುಳಿಹಿಂಡಿದ ಹೆಣ್ಣಿನೊಡನೆ ಬೀದಿಗಿಳಿದು ಕಾಳಗ ಮಾಡಬಲ್ಲವಳು. ಆದರೆ ಅಸಹಾಯಕತೆ ಅವಳನ್ನು ಜರ್ಜರಿತಗೊಳಿಸುತ್ತದೆ. ಪ್ರವಾಹದ ವಿರುದ್ಧ ಒಂಟಿಯಾಗಿ ಈಜಲಾರದ ಈಕೆ ಆತ್ಮಹತ್ಯೆಯಲ್ಲೊ ಅಥವಾ ಗಂಡನ ಕ್ರೌರ್ಯಕ್ಕೆ ಬಲಿಯಾಗುವುದರ ಮೂಲಕ ಕೊನೆಯಾಗುತ್ತದೆ.

ಇದೇ ತರದ ನಾಯಕನ ಹೆಂಡತಿ ಸೂಕ್ಷ್ಮಮತಿಯವಳು. ತನ್ನ ಸ್ವಂತ ವ್ಯಕ್ತಿತ್ವದ ಬಗ್ಗೆ ಅಪಾರ ಆತ್ಮವಿಶ್ವಾಸ, ಪ್ರೀತಿ ಇಟ್ಟುಕೊಂಡವಳು ತನಗಾದ ಅವಮಾನವನ್ನು ಒಂದು ಕ್ಷಣವೂ ಸಹಿಸದವಳು. ಪ್ರಶ್ನೆಗಳ ನೆತ್ತಲು ತುದಿಗಾಲಲ್ಲಿ ನಿಂತವಳು. ಹತ್ತಿಕ್ಕಿ ಕೊಳ್ಳಲಾಗದ ಅವಮಾನ, ಖಿನ್ನತೆಯನ್ನು ಸ್ಪಷ್ಟವಾದ ನೇರವಾದ ಮಾತುಗಳಲ್ಲಿ ಅಭಿವ್ಯಕ್ತಿಸುವವಳು, ಮುಳ್ಳನ್ನು ಮುಳ್ಳಿನಿಂದಲೆ ತೆಗೆಯಬೇಕೆಂದು ನಂಬಿದವಳು, ಕೌಟುಂಬಿಕ ಚೌಕಟ್ಟನ್ನು ತೊರೆದು ಹೊರಡುವ ಇವಳು ಇತರ ಗಂಡಿನ ಸಹವಾಸದಲ್ಲಿ ಸುಖವನ್ನು ಅರಸುವವಳು.

ಇಂತಹ ಕಥಾವಸ್ತುವನ್ನು ಚಿತ್ರಿಸುವ ಕಲಾತ್ಮಕ ಹಾಗೂ ವ್ಯಾಪಾರಿ ಚಿತ್ರಗಳು ಬಹಳಷ್ಟು ಬಂದು ಹೋಗಿವೆ. ಇವು ನಿರ್ಧಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿನ ಜೀವನ ಕ್ರಮವನ್ನು ಪ್ರತಿಬಿಂಬಿಸುವುದರ ಜೊತೆಯಲ್ಲಿ ಕಾಲದ ಆಶಯಗಳನ್ನು ಗುರುತಿಸುತ್ತವೆ, ಹಾಗೆಯೆ ದಾಖಲಿಸುತ್ತವೆ. ಬಹಳಷ್ಟು ಚಿತ್ರಗಳು ಸ್ವೀಕೃತ ಮೌಲ್ಯ ಬಲಪಡಿಸುತ್ತವೆ. ಕೆಲವು ಚಿತ್ರಗಳುಬದಲಾಗುತ್ತಿರುವ ಮೌಲ್ಯಗಳಿಗೆ ಸ್ಪಂದಿಸಿ, ಸಮಸ್ಯೆಯ ಮೇಲ್ಮೈಯನ್ನು ಮಾತ್ರ ಚಿತ್ರಿಸಿ ಸರಳೀಕೃತವಾದ ಸಿದ್ಧ ಉತ್ತರವನ್ನು ನೀಡಿ ಬಿಟ್ಟಿರುತ್ತವೆ.

ಆದರೆ ನಗರದಲ್ಲಿ ಇತ್ತಿಚೆಗೆ ಏರ್ಪಡಿಸಲಾದ ಇಂಡಿಯನ್ ಪನೋರಮ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಬಿ. ಎನ್. ಸಾಕಿಯಾ ಅವರು ನಿರ್ದೇಶಿಸಿದ ಅಸ್ನಾಮಿ ಚಿತ್ರ ಹಲವಾರು ದೃಷ್ಟಿಕೋನಗಳಿಂದ ವಿಭಿನ್ನವಾದುದು. ಮೇಲೆ ವಿವರಿಸಿದ ಕಥಾವಸ್ತುವಿನ ಸಾಲಿಗೆ ಸೇರಿದರೂ ಕಥಾವಸ್ತುವನ್ನು ಗ್ರಹಿಸಿದ ರೀತಿ, ಕೌಟುಂಬಿಕ ನೆಲೆಯ ಚೌಕಟ್ಟಿನ ವೈವಾಹಿಕ ಸಂಬಂಧದ ಸ್ತ್ರೀವಿರೋಧಿ ಅಡಿಗಲ್ಲನ್ನು ಅಲುಗಾಡಿಸಿ ಎತ್ತುವ ಮೂಲಭೂತ ಪ್ರಶ್ನೆ ಗಮನಾರ್ಹವಾದ ಅಂಶವಾಗಿದೆ.

ಅನ್ನಿಸ್ನಾನ್ ನ ಚಿತ್ರ ಕಥೆ ಮಾಮೂಲಿಯಾದದ್ದೆ. ಫ್ಯೂಡಲ್ ಮನೋಧರ್ಮದ ನಾಯಕ ಕುಟುಂಬ ಮಾತವಲ್ಲದೆ, ಇಡೀ ಹಳ್ಳಿಯ ಅಧಿಕಾರದ ಸೂತ್ರದಾರ. ಇವನ ವಿರುದ್ಧ ಸೊಲ್ಲೊತ್ತಿದವರೆಲ್ಲ ಅವನ ಕಾಲಡಿಯಲ್ಲಿ ನಲುಗಿಬಿಡುತ್ತಾರೆ. ಅವನ ಗಿರಣಿ ಮಿಲನ ಚಕ್ರಗಳಭಯಕ್ಕೆ ನಡುಗುತ್ತಾರೆ. ಗಂಡನ ದುರಹಂಕಾರದವ್ಯಕ್ತಿತ್ವಕ್ಕೆ ವ್ಯಕಿರಿಕ್ತವಾದ ಹೆಂಡತಿ ಮಾತ್ರ ಪ್ರತಿಭಟನೆಯ ಪ್ರತೀಕವಾಗಿ ನಿಲ್ಲುತ್ತಾಳೆ. ಅಕಸ್ಮಾತಾಗಿ

ಕಂಡಹೆಣ್ಣೊಬ್ಬಳನ್ನು ಗಂಡ ವಿವಾಹವಾಗುವ ನಿರ್ಧಾರ ಕುಟುಂಬದಲ್ಲಿ ಆಂತರಿಕ ಘರ್ಷಣೆಯು ನೆಲೆಯಾಗುತ್ತದೆ.

ಚಿತ್ರ ತನ್ನ ಮಾಮೂಲಿ ಜಾಡನ್ನು ಹಿಡಿಯದೆ, ಹೆಂಡತಿಯ ಪ್ರತಿಭಟನಾ ವಿಧಾನ, ಹಾಗೂ ಕಥೆಯ ಸನ್ನಿವೇಶಗಳಿಂದಾಗಿ ವಿಶಿಷ್ಟ ತಿರುವನ್ನು ಪಡೆಯುವುದು.

ನಾಯಕ ತಾನು ಮತ್ತೊಂದು ಮದುವೆಯಾಗುವುದಕ್ಕೆ ಹೆಂಡತಿಯ ಹಾಗೂ ವಯಸ್ಸಾದ ತಂದೆ–ತಾಯಿ ಸಮ್ಮತಿ ಸಿಗದಿದ್ದಾಗ, ತಾನು ಮದುವೆಯಾಗುವುದು "ಕುಟುಂಬಕ್ಕಾಗಿ" ತನ್ನ ಶ್ರೀಮಂತಿಕೆಯು ಮತ್ತೊಂದು ಹೆಣ್ಣನ್ನು ಸಾಕಲಾರದೆ, "ಹಲವಾರು ಹೆಣ್ಣಗಳನ್ನು ಹೊಂದುವುದೇ ಒಂದು ಪ್ರತಿಷ್ಠೆಯ ಕುರುಹುವೆಂಬಂತೆ ವಾದಿಸುತ್ತಾನೆ. ಮನುಷ್ಯ ಸಂಬಂಧಗಳ ನಡುವೆ ಬೃಹದಾಕಾರದ ಗೋಡೆಯನ್ನೇ ನಿರ್ಮಿಸಿಕೊಂಡು ನಾಯಕನಿಗೆ ಹೆಂಡತಿಯ ಅಂತರಂಗದಲ್ಲಿ ಹೆಪ್ಪುಗಟ್ಟಿದ ನೋವು, ಹತಾಶೆಯ ಸುಳಿವೆ ಸಿಗುವುದಿಲ್ಲ. ಮದುವೆಯ ಗಂಡಾಗಿ ಕುದುರೆಯನೇರಿ ಹೊರಟವನೆದುರು ಹೆಂಡತಿ ಜರ್ಜರಿತಳಾಗಿ ಕುಸಿದು ಬೀಳುವುದು ಅವನ ಕಲ್ಲುಮನಸ್ಸನ್ನು ಕರಗಿಸುವುದೇ ಇಲ್ಲ.

ಅನಿವಾರ್ಯವಾಗಿ ಘಟನೆಯನ್ನು ಹೆಂಡತಿ ಒಪ್ಪಿಕೊಳ್ಳಬೇಕಾದರೂ ತನ್ನ ಪ್ರತಿಭಟನೆಯನ್ನು ಮೌನವಾಗಿಯೇ ಮುಂದುವರಿಸುತ್ತಾಳೆ. ಆಕೆಯ ಪ್ರತಿಭಟನೆ ಕೇವಲ ಚಾತುರ್ಯದ ಫಲವಾಗದೇ ಅವಳ ಆಂತರಿಕ ಗಟ್ಟಿ ವ್ಯಕ್ತಿತ್ವದಿಂದ ಮೂಡಿಬರುತ್ತದೆ. ದಿನ ನಿತ್ಯದ ಚಿಕ್ಕ ಪುಟ್ಟ ಘಟನೆಗಳಿಗೆ ಅವಳು ಪ್ರತಿಕ್ರಿಯಸುವ ರೀತಿಯಲ್ಲಿ ಅವಳ ಪ್ರತಿಘಟನೆ ಗೋಚರವಾಗುತ್ತವೆ. ಚಿತ್ರದಲ್ಲಿ ಮೆಚ್ಚಬೇಕಾದ ಬಹುಮುಖ್ಯ ಅಂಶವೆಂದರೆ. ಸವತಿಯು ಮೊದಲ ಹೆಂಡತಿಯ ಆಕ್ರೋಶಕ್ಕೆ ಬಲಿಯಾಗದೇ ಇರುವುದು, ಸ್ನೇಹದ, ಸೌಹಾರ್ದತೆಯ ಸಂಬಂಧದ ಎಳೆಗಳನ್ನು ಸವತಿಯೊಡನೆ ಸ್ಥಾಪಿಸಿ ಕೊಳ್ಳುತ್ತಾಳೆ.

ತನ್ನ ಸವತಿಗೆ ಕಾಯಿಲೆಯಾದಾಗ, ಅವಳು ಗರ್ಭಿಣಿಯಾದಾಗ ಮಾತ್ರ ಗಂಡ ಕದ್ದು ತನ್ನ ಕೋಣೆಗೆ ಬರುವುದನ್ನು ಪ್ರತಿಭಟಿಸಿ ಅವನನ್ನು ಕೇಳುವ ಪ್ರಶ್ನೆಗಳು, "ನೀವು ನನ್ನ ಕೋಣೆಗೆ ಬರುವುದು ಮನೆಯಲ್ಲಿರುವವರಿಗೆಲ್ಲ ಗೊತ್ತಾಗಬೇಕೆಂದು ಎಲ್ಲರನ್ನು ಎಚ್ಚರಿಸುವ ಘಟನೆ, ಗಂಡ ಬಯಸುವ" ಕೇವಲ ದೈಹಿಕ ಸಂಬಂಧವನ್ನು ಅವನ ಹಿಂಸೆ, ಕ್ರೌರ್ಯಗಳ ನಡುವೆಯು ನಿರಾಕರಿಸುವುದು, ಅವಳ ಸ್ಪಷ್ಟ ನಿಲುವುಗಳಿಗೆ ಕನ್ನಡಿಯಾಗಿವೆ.

ಮೊದಲ ಹೆಂಡತಿಯ ಒಂಟಿತನ, ಘಾಸಿಗೊಂಡ ಮನಸ್ಸು, ಹತ್ತಿಕ್ಕದ ಭಾವನೆಗಳು ಅವರ ಮನೆಯ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಆಳಿನ ಸಂಬಂಧದಲ್ಲಿ ಟಿಸಿಲೊಡೆಯುತ್ತವೆ. ಹಲವಾರು ಸಂದರ್ಭದಲ್ಲಿ ತನ್ನ ಒಡಲಲ್ಲಿನ ನೋವುಗಳನ್ನು ಆತ್ಮೀಯವಾಗಿ ಹಂಚಿಕೊಳ್ಳುತ್ತಾಳೆ. ತನ್ನದಾದ ಒಂದು ಆತ್ಮಕ್ಕಾಗಿ ಹಂಬಲಿಸುತ್ತಾಳೆ. ತನ್ನಪ್ಪ ಭೋದಿಸಿದ 'ಸೀತೆ' 'ಸಾವಿತ್ರಿ'ಯರ ವಿಧೇಯತೆ ತನಗಿದ್ದರೂ ತನಗಾದ ಅನ್ಯಾಯಕ್ಕಾಗಿ ನಿಟ್ಟುಸಿರು ಬಿಡುತ್ತಾಳೆ. ಆದರೆ, ಹಂಬಲಿಸಿದ ಆತ್ಮದಿಂದಲೂ ದೂರಾಗುವ ನಿರ್ಧಾರವನ್ನು ಮಾಡುತ್ತಾಳೆ.

ಸಂಪ್ರದಾಯದ ಲಕ್ಷ್ಮಣರೇಖೆಯನ್ನು ಮೀರಿ ತಾನು ಗರ್ಭಿಣಿಯಾದ ಸುದ್ದಿಯನ್ನು ಗಂಡನಿಗೆ ದಿಟ್ಟತನದಿಂದ ತಿಳಿಸುತ್ತಾಳೆ. ಬಹಿರಂಗವಾಗಿ ನಿರಾಕರಿಸಲಾಗದ, ಆಂತರಿಕವಾಗಿ ಒಪ್ಪಿಕೊಳ್ಳಲಾಗದ ಗಂಡ ಒಳಗೊಳಗೆ ಉರಿದು ಕಿಡಿಯಾಗುತ್ತಾನೆ. ಅಗತ್ಯ ಬಿದ್ದಾಗ ಗಿರಣಿಯ ವ್ಯವಹಾರವನ್ನು ನೋಡಿಕೊಳ್ಳುತ್ತೇನೆಂದು ಹೇಳಿದ್ದ ಹೆಂಡತಿಯನ್ನು ಗಿರಣಿಗೆ ಕರೆತಂದು ಗರ್ಭಿಣಿಯಾಗಲು ಹೇಗೆ ಸಾಧ್ಯವೆಂದು ಕೇಳಿದಾಗ ಹೆಂಡತಿ–ವಿಶಿಷ್ಟ ನೈತಿಕ ಧೈರ್ಯದಿಂದ ಈ ಪ್ರಶ್ನೆಯನ್ನು ಮನೆಯಲ್ಲಿಯೇ ಕೇಳಬಹುದಿತ್ತು, ಪ್ರತಿಷ್ಠಿತ ಕೌಟುಂಬಿಕ ಚೌಕಟ್ಟಿನಲ್ಲಿ ನಾನು ತಾಯಿಯಾಗದೇ ತಾಯಿ ಎನಿಸಿಕೊಳ್ಳಬಹುದಾದರೆ, ನೀನು ತಂದೆಯಾಗದೆಯು ತಂದೆಯಾಗಲು ಸಾಧ್ಯವಿಲ್ಲವೆ ? ನೀನು ಒತ್ತಾಯಿಸಿದರೂ ನನ್ನ ಹೊಟ್ಟೆಯೊಳಗಿರುವ ಮಗುವಿನ ತಂದೆಯಾರೆಂದು ಹೇಳಲಾರೆ. ನನ್ನ ದೇಹ ಹಾಗೂ ಮನಸ್ಸುಗಳು ನಿರ್ಮಲವಾಗಿವೆ. ನೀನು ಈ ಮಗುವಿನ ತಂದೆಯಲ್ಲವೆಂದು ಹೇಳುವ ಧೈರ್ಯ ನಿನಗಿದ್ದರೆ ಹೇಳು ಅಥವಾ ನಿನ್ನ ಈ ಗಿರಣಿಗಳ ಯಂತ್ರಗಳಿಗೆ ನನ್ನ ಬಲಿಕೊಡು ಎಂದು ಹೇಳುತ್ತಾ ಹೊರಬಂದು ಕುದರೆ ಗಾಡಿ ಹತ್ತಿ ಹೊರಡುತ್ತಿದ್ದ ಹಾಗೆಯೇ ಗಂಡ ಕಿಟಿಕಿಯ ಮೂಲಕ ಅವಳನ್ನು ನಿಟ್ಟಿಸುತ್ತಿರುವ ದೃಶ್ಯದೊಂದಿಗೆ ಸಿನಿಮಾ ಮುಕ್ತಾಯವಾಗುತ್ತದೆ.

ಸಮಾಜದಲ್ಲಿ ಬಲವಾಗಿ ಬೇರೂರಿರುವ ತಾರತಮ್ಯದ ನೀತಿಗಳನ್ನು ಪ್ರಶ್ನಿಸುವ ನೆಲೆ, ಗಂಡು–ಹೆಣ್ಣಿನ ಸಂಬಂಧದ ಅಸಮಾನತೆ, ಅದರ ಹಿನ್ನಲೆಯಲ್ಲ ಪಿತೃತ್ವ ಹಾಗೂ ಮಾತೃತ್ವದ ಸುತ್ತ ಆವರಿಸಿರುವ ಶತಮಾನಗಳ ಪೂರ್ವಾಗ್ರಹ ಪೀಡಿತ ನಂಬಿಕೆಗಳನ್ನು ಪ್ರಶ್ನಿಸುವುದು, ಮುಂತಾದ ಅಂಶಗಳಿಂದಲೇ ಅಗ್ನಿಸ್ನಾನ್ ವಿಭಿನ್ನವಾಗಿ ಬಿಡುತ್ತದೆ. **ಎಚ್.ಎಸ್. ರಾಜೇಶ್ವರಿ**

ಸುದ್ದಿ ಸಂಕಲನ

'ಮಕ್ಕಳನ್ನು ಹೆರುವುದಿಲ್ಲ'

ಅಣು ವಿದ್ಯುತ್‌ಗೆ ಪ್ರತಿಭಟನೆ ಸೂಚಿಸುವುದಕ್ಕಾಗಿ ಮಕ್ಕಳನ್ನು ಹೆರುವುದಿಲ್ಲವೆಂದು 3 ಸಾವಿರಕ್ಕೂ ಹೆಚ್ಚು ಫಿನ್ನಿಶ್ ಮಹಿಳೆಯರು ಘೋಷಿಸಿದ್ದಾರೆ. ಅಣು ವಿದ್ಯುತ್ ಬೆಂಬಲಿಸುವ ಸದ್ಯದ ನೀತಿಯನ್ನು ಫಿನ್ನಿಶ್ ಸರಕಾರ ಬದಲಾಯಿಸುವವರೆಗೆ, ಮಕ್ಕಳನ್ನು ಹೆರುವುದಿಲ್ಲವೆಂದು ಈ ಮಹಿಳೆಯರು ಸಾರಿದ್ದಾರೆ. ಈ ಮಹಿಳೆಯರ ಸಹಿ ಇರುವ ಈ ಸಂದೇಶವನ್ನು ವಾಣಿಜ್ಯ ಸಚಿವ ಸೆಪ್ಪೊ ಲಿಂಡ್‌ಬ್ಲ್ಯಾಲ್ ಅವರಿಗೆ ಇತ್ತೀಚೆಗೆ ನೀಡಲಾಯಿತು. ಅಣುವಿದ್ಯುತ್‌ನ ಲಾಭದಾಯಕತೆಯ ಬಗೆಗಿನ ವಿಶ್ವಾಸವನ್ನೇ ಚೆರ್ನೊಬೈಲ್ ಅಣು ದುರಂತ ಅಲ್ಲಾಡಿಸಿದೆ ಎಂದಿದ್ದಾರೆ ಈ ಮಹಿಳೆಯರು.

ಪುಟಾಣಿ ಪತಿ–ಪತ್ನಿಯರು

ಬಾಲ್ಯವಿವಾಹ ಆಚರಣೆಗೆ ನಿಷೇಧವಿದ್ದರೂ ರಾಜಸ್ಥಾನದಲ್ಲಿ ಬಾಲ್ಯವಿವಾಹಗಳು ನಿರಾತಂಕವಾಗಿ ನಡೆಯುತ್ತಿದೆ. ರಾಜ್ಯದಲ್ಲಿ ಪ್ರತಿವರ್ಷ ಒಂದು ಸಾವಿರ ಬಾಲ್ಯವಿವಾಹಗಳು ನಡೆಯುತ್ತವೆ ಎಂದು ಇತ್ತೀಚಿನ ಸಮೀಕ್ಷೆಯೊಂದು ಹೇಳಿದೆ. ಬಾಲ್ಯವಿವಾಹ ಆಚರಣೆಯಲ್ಲಿ ಅನಕ್ಷರಸ್ಥರು ಬಡವರ ಮಾತ್ರವಲ್ಲ, ನಗರದ ಸುಶಿಕ್ಷಿತರು, ಸರಕಾರಿ ಅಧಿಕಾರಿಗಳ ಪಾಲೂ ಇದೆ. ಬಾಲ್ಯವಿವಾಹ ಪಿಡುಗು ನಿವಾರಣೆಗೆ 1929ರಲ್ಲಿ ಜಾರಿಗೊಳಿಸಲಾದ ಶಾರದಾ ಕಾಯಿದೆ ಇಲ್ಲಿ ಫಲಕಾರಿಯಾಗಿಲ್ಲ.

ಸರಕಾರಿ ಶಾಲೆಗಳಲ್ಲಿ ಸುಮಾರು ಶೇಕಡ 30ರಷ್ಟು ಮಕ್ಕಳು ವಿವಾಹಿತರಾಗಿರುತ್ತಾರೆ. ಅವರ ಪುಟಾಣಿ ಪತ್ನಿಯರು ಶಾಲೆಗೆ ಹಾಜರಾಗುವುದು ನಿಷಿದ್ಧವಾಗಿರುತ್ತದೆ. ಈ ಸಮಸ್ಯೆಗೆ ಸಾಮಾಜಿಕ ಆರ್ಥಿಕ ಕಾರಣಗಳಲ್ಲದೆ ಪರಂಪರೆಯ ಹಿಡಿತ ಹೆಚ್ಚಿನದು. ಬೆಳೆದ ಸುಶಿಕ್ಷಿತ ಹುಡುಗಿಗೆ ವರ ಸಿಗುವುದು ಸುಲಭ ಸಾಧ್ಯವಲ್ಲ ಎನ್ನುತ್ತಾರೆ ಅನೇಕ ತಂದೆ ತಾಯಿಯರು.

ಮಗಳನ್ನೇ ಕೊಂದ

ನಾಸಿಕ್ ಜಿಲ್ಲೆಯ ನಿಫಾಡ್ ತಾಲ್ಲೂಕಿನ ಗಜರವಾಡಿ ಗ್ರಾಮದ ನಿವಾಸಿಯೊಬ್ಬ ತನ್ನ ಮೊದಲ ಮಗಳನ್ನೇ ಕೊಂದ ಘಟನೆ ಇತ್ತೀಚೆಗೆ ವರದಿಯಾಗಿದೆ. ಎರಡನೇ ಮಗು ಗಂಡಾಗದೆ ಹೆಣ್ಣೇ ಆದಾಗ ಆದ "ಆಘಾತ" ಸಹಿಸಲಾಗದೆ ಮಗಳನ್ನು ಕೊಂದುದಾಗಿ ಈತ ಹೇಳಿಕೊಂಡಿದ್ದಾನೆ.

ಸಾವಿನ ಶಿಕ್ಷೆಯ ಬೆದರಿಕೆ

ಕೃತಕ ಗರ್ಭಧಾರಣೆ ಮಾಡುವುದು ಇಸ್ಲಾಂ ಧರ್ಮಕ್ಕೆ ವಿರುದ್ಧ. ಹಾಗೆ ಮಾಡುವವರು 'ವ್ಯಭಿಚಾರ'ದ ಅಪರಾಧಕ್ಕಾಗಿ ಕಲ್ಲೇಟಿನಿಂದ ಸಾವಿನ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಸೌದಿ ಧಾರ್ಮಿಕ ಪತ್ರಿಕೆಯೊಂದರಲ್ಲಿ ಮುಸ್ಲಿಂ ಧರ್ಮಶಾಸ್ತ್ರಜ್ಞರು, ಮಹಿಳೆಯರಿಗೆ ಎಚ್ಚರಿಕೆ ನೀಡಿದ್ದಾರೆ.

ದೇವದಾಸಿ

ಮಗಳನ್ನು ದೇವದಾಸಿಯಾಗಲು ಒತ್ತಾಯಿಸಿದ ತಂದೆ ತಾಯಿಗಳ ವಿರುದ್ಧ ಪ್ರಥಮ ಬಾರಿಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿಯಲ್ಲಿ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ. ದೇವದಾಸಿ ನಿಷೇಧ ಕಾಯಿದೆ ಅನ್ವಯ ಈ ಕ್ರಮ ಕೊಳ್ಳಲಾಗಿದೆ.

ಛಾಯಾ ದಾತಾರ್

ಮುಂಬೈ ಲೇಖಕಿ ಛಾಯಾ ದಾತಾರ್ ಅವರ "ಸ್ತ್ರೀ ಪುರುಷ್" ಮರಾಠಿ ಕೃತಿಗೆ, 1985ರ ಸಾಲಿನ ನಂಜನಗೂಡು ತಿರುಮಲಾಂಬಾ ಪ್ರಶಸ್ತಿ ಲಭಿಸಿದೆ. ಬೆಂಗಳೂರಿನ "ಶಾಶ್ವತಿ" ಸಂಸ್ಥೆ ಸ್ಥಾಪಿಸಿರುವ ಈ ಪ್ರಶಸ್ತಿಯಲ್ಲಿ 10 ಸಾವಿರ ರೂ. ನಗದು ಹಾಗೂ "ಕಾಮಧೇನು" ಲೋಹದ ಲಾಂಛನ ನೀಡಲಾಗುವುದು. ಮಹಿಳಾ ಶೋಷಣೆಯ ಕಾರಣಗಳು ಹಾಗೂ ಮಹಿಳಾ ವಿಮೋಚನಾ ತತ್ವ ಬೆಳೆದು ಬಂದ ಹಾದಿಯನ್ನು ಛಾಯಾದಾತಾರ್ ಅವರು, ತಮ್ಮ ಪುಸ್ತಕದಲ್ಲಿ ವಿಶ್ಲೇಷಿಸಿದ್ದಾರೆ.

ಹಾರ್ದಿಕ ಶುಭಾಶಯಗಳು